Budget Estimates for 1977-78
Demands for Grants

Demend Nos. 16, 17, 25, 41, 55 and 56.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಲೋಕೋಪಯೋಗಿ ಶಾಖೆಯ ಮಂತ್ರಿಗಳು). —ಸನ್ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ 16, 17, 25 55 ಮತ್ತು 56 ಈ ಬೇಡಿಕೆಗಳಿಗೆ ಸುಮಾರು 75 ಕೋಟಿ 67 ಲಕ್ಷದ 4 ಸಾವಿರ ರೂಪಾಯಿಗಳ ಹಣಕಾಸಿನ ಮಂಜೂರಾತಿಗೆ ಸಂಬಂಧಿಸಿದಂತೆ ಈ ಘನವನ್ನು ಹೊಂದಿದ ಸಭೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಆದ ಶ್ರೀಮಾನ್ ಎಚ್. ಡಿ. ದೇವೇಗೌಡರವರು ಹಾಗೂ ಇತರ 8 ಜನ ಸನ್ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿ ಅನೇಕ ಅಮೂಲ್ಯವಾದಂಥ ಸಲಹೆಗಳನ್ನು ನೀಡಿದ್ದಾರೆ. ಜೊತೆಗೆ ಅನೇಕ ಟೀಕೆಗಳನ್ನೂ ಮಾಡಿದ್ದಾರೆ ಹಾಗೆಂದು ಈ ಸಂದರ್ಭದಲ್ಲಿ ಹೇಳುತ್ತಾ ಈ ಸಾರಿ ಈ ಬೇಡಿಕೆಗಳ ಮೇಲೆ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಹಿಂದಿನ ಸಾಲಿಗಿಂತಲೂ ಈ ಇಲಾಖೆಗೆ ಸಂಬಂಧಪಟ್ಟಂಥ ವಾರ್ಷಿಕ ವರದಿಯನ್ನು ಈ ಸಾರಿ ನಮ್ಮ ಇಲಾಖೆಯ ಅಧಿಕಾರಿಗಳು ಈ ಸಭೆಯ ಎಲ್ಲಾ ಸದಸ್ಯರಿಗೂ ಕೂಡ ಅದನ್ನು ಒದಗಿಸಿ ಒಂದು ಪಕ್ಷಿ ನೋಟವನ್ನು ತೋರಿಸಿ, ಈ ಇಲಾಖೆ ಯಾವ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದ್ದ ಯಾವಯಾವ ಬಾಬುಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ ಎನ್ನತಕ್ಕಂಥ ವಿಷಯವನ್ನು ತಿಳಿಸುವುದರ ಜೊತೆಗೆ ಈ ವರ್ಷಕ್ಕೆ ಸಂಬಂಧಪಟ್ಟ ಹಾಗೆ ಇನ್ನೊಂದು ಹೊಸ ಅಧ್ಯಾಯವನ್ನು ಸೇರಿಸಿದ್ದಾರೆ. ಕಾರ್ಯ ನಿರ್ವಹಣೆಯ ಬಗ್ಗೆ ಆಯವ್ಯಯ ಪಟ್ಟಿಯ ಅಂದಾಜನ್ನು ಕೂಡ ಅಂದರೆ ಪರ್‌ಫಾರ್ಮೆನ್ಸ್ ಬಡ್ಜೆಟ್ ಎನ್ನತಕ್ಕಂಥ ಕೆಲಸ ಹೊಸದಾಗಿ ಇಲಾಖೆಯಲ್ಲಿ ನಡೆದಿರತಕ್ಕಂಥದ್ದು, ಆಡಳಿತ ಸುಧಾರಣಾ ಮಂಡಲಿಯವರು ಯಾವ ಒಂದು ಶಿಫಾರಸ್ಸು ಮಾಡಿದ್ದಾರೆ, ಆ ಶಿಫಾರಸ್ಸಿಗೆ ಅನುಗುಣವಾಗಿ ರಾಜ್ಯ ಸರ್ಕಾರದವರು ಆಗಲೀ, ಕೇಂದ್ರ ಸರ್ಕಾರದವರು ಆಗಲೀ ಎಲ್ಲಾ ಈ ಇಲಾಖೆಯಲ್ಲೂ ಕೂಡ ಏನು ಒಂದು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ, ಆ ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ಒಂದು ಪರ್‌ಫಾರ್ಮೆನ್ಸ್ ಬಡ್ಜೆಟ್‌ನ್ನು ಕೊಡತಕ್ಕಂಥದ್ದು ಸೂಕ್ತ ಎನ್ನತಕ್ಕಂಥಾ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಕೆಲಸವನ್ನು ಮಾಡಿದ್ದೇವೆ.

ಪೀಠಿಕೆಯಲ್ಲಿ ಇದನ್ನು ಹೇಳಬೇಕಾದುದರಿಂದ, ಇದನ್ನು ಹೇಳುತ್ತಿದ್ದೇನೆ, ಆಯವ್ಯಯ ಪಟ್ಟಿಯಲ್ಲಿ ಅಡಕವಾಗಿದ್ದು ಆರ್ಥಿಕ ಹಾಗೂ ಭೌತಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸರ್ಕಾರ ಹಾಗೂ ಇಲಾಖೆ ಹಾಕಿಕೊಂಡಿರುವ ಒಟ್ಟಾರೆ ಕೆಲಸಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಆದ್ಯತೆಯನ್ನು ಕೊಟ್ಟು ಯೋಜನೆಯನ್ನು ತಯಾರು ಮಾಡುವುದರ ಜೊತೆಗೆ ಇದು ದೀರ್ಘ ಕಾಲದ ಯೋಜನೆಗಳಿಗೆ ಒಂದು ಅಮೂಲ್ಯ ದಿಕ್ಸೂಚಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಪರ್‌ಫಾರ್ಮೆನ್ಸ್ ಆಯವ್ಯಯದ ವಿಚಾರವಾಗಿ ತಿಪಟೂರಿನ ಸದಸ್ಯರು ಮಾತನಾಡಿದ್ದಾರೆ ಆದಕ್ಕಾಗಿ ಈ ಸಂದರ್ಭದಲ್ಲಿ ಇದನ್ನು ಹೇಳಬೇಕಾಗಿ ಬಂತು. ಲೋಕೋಪಯೋಗಿ ಇಲಾಖೆಯ ಬೇಡಿಕೆಯ ಮೇಲೆ ಸುಮಾರು ಒಂಭತ್ತು ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ ಇನ್ನೂ ಹೆಚ್ಚು ಸದಸ್ಯರು ಮಾತನಾಡಿದ್ದರೆ ಇನ್ನೂ ಅಮೂಲ್ಯ ಸಲಹೆಗಳು ಈ ಇಲಾಖೆಗೆ ದೊರೆಯುತ್ತಿದ್ದವು ಎನ್ನುವ ನಿರಾಶೆಯಿದ್ದರೂ ಕೂಡ, ಅವರುಗಳು ವರದಿಯನ್ನು ಅಧ್ಯಯನ ಮಾಡಿ ನನಗೆ ಅಥವಾ ನಮ್ಮ ಇಲಾಖೆಯ ಕಾರ್ಯದರ್ಶಿ ಮತ್ತು ಮಾಂಡಲಿಕರಿಗೆ ಸಲಹೆಗಳೇನಾದರೂ ಇದ್ದರೆ ಕಳುಹಿಸಿಕೊಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಒಟ್ಟಾರೆ ಕಾರ್ಯನಿರ್ವಹಣೆ ಹಾಗೂ ಹಣಕಾಸು ವಿಚಾರದಲ್ಲಿ ಬಹಳ ವಿಶದವಾದ ಹೇಳಿದ್ದೇನೆ. ಇಲಾಖೆಯ ಭೌತಿಕ ಗುರಿಗಳೇನು ? ಸಾಧನೆಯೇನು ? ರಸ್ತೆಗಳ ಮತ್ತು ಕಟ್ಟಡಗಳ ನಿರ್ಮಾಣದ ಉದ್ದೇಶವೇನು ? ಮತ್ತು ಹತ್ತು ಲಕ್ಷ ರೂಪಾಯಿ ಮೇಲ್ಪಟ್ಟು ಬಂಡವಾಳ ತೊಡಗಿಸಿರುವ ಕೆಲಸಗಳು ಎಷ್ಟರಮಟ್ಟಿಗೆ ಪ್ರಗತಿಯಲ್ಲಿವೆ ಎನ್ನುವುದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಅದನ್ನು ಮಾನ್ಯ ಸದಸ್ಯರು ಚೆನ್ನಾಗಿ ಅಧ್ಯಯನ ಮಾಡಬೇಕೆಂದು ಹೇಳುತ್ತೇನೆ, ಒಂದಲ್ಲ ಒಂದು ರೀತಿಯಲ್ಲಿ ಕೈಗಾರಿಕೆ ಮತ್ತು ವ್ಯವಸಾಯಾಭಿವೃದ್ಧಿಯಾಗಬೇಕಾದರೆ ಸಾರಿಗೆ ಸಂಪರ್ಕ ಯಾವರೀತಿ ಇರಬೇಕೆಂಬುದನ್ನು ಸದಸ್ಯರು ಮಾತನಾಡುವ ಕಾಲದಲ್ಲಿ ತಿಳಿಸಿದ್ದಾರೆ. ಅಭಿವೃದ್ಧಿಶೀಲ

ವಾದ ನಮ್ಮ ದೇಶದಲ್ಲಿ, ಅದರಲ್ಲೂ ನಮ್ಮ ರಾಜ್ಯದಲ್ಲಿ ಹೆಚ್ಚು ರೈಲ್ವೆ ಮಾರ್ಗಗಳು, ಜಲ ಮಾರ್ಗಗಳು ಮತ್ತು ಒಳನಾಡಿನ ಜಲ ಮಾರ್ಗಗಳು ಇಲ್ಲವೇ ಇರುವುದರಿಂದ, ನಾವು ರಸ್ತೆ ನಿರ್ಮಾಣ ಹಾಗೂ ಅವುಗಳ ಅಭಿವೃದ್ಧಿ ಮತ್ತು ನಿರ್ವಹಣೆ ವಿಚಾರದಲ್ಲಿ ಹೆಚ್ಚು ಮಹತ್ವ ಕೊಡಬೇಕೆಂದು ನಾವು ಬಲ್ಲೆವು. ದಿನೇ ದಿನೇ ವ್ಯವಸಾಯ ಮತ್ತು ಕೈಗಾರಿಕಾ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಪ್ರಗತಿಯಾಗುತ್ತಿರುವುದರಿಂದ, ಅದುರು ಮತ್ತು ಇತರ ಪದಾರ್ಥಗಳನ್ನು ಸಾಗಣೆ ಮಾಡಲಿಕ್ಕೆ, ರಸ್ತೆ ನಿರ್ಮಾಣ ಮತ್ತು ಅವುಗಳ ಕಾರ್ಯನಿರ್ವಹಣ ಕಾರ್ಯ ಅತಿಮುಖ್ಯವಾದುದು. ಇದು ದೇಶದ ಆರ್ಥಿಕ ಬೆಳವಣಿಗೆಗೆ ಬಹಳ ಮುಖ್ಯವಾದುದು.

ಕಟ್ಟಡಗಳ ವಿಚಾರದಲ್ಲಿ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. 1940-41ನೇ ಸಾಲಿನಿಂದ 1965-67ನೇ ಸಾಲಿನವರೆಗೆ ಕಟ್ಟಡ ನಿರ್ಮಾಣ ಸೌಕರ್ಯಕ್ಕಾಗಿ ಸುಮಾರು ಎಂಭತ್ತು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳನ್ನು ಬಂಡವಾಳವನ್ನಾಗಿ ತೊಡಗಿಸಲಾಗಿದೆ. ಈ ಕಟ್ಟಡಗಳ ಅವಶ್ಯಕತೆ ಕುರಿತು ನಾನೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಈ ಇಲಾಖೆಯಲ್ಲಿ ಕೆಲಸ ನಡೆಯಬೇಕಾದರೆ ಕಛೇರಿಗಳಿಗೆ, ಕಟ್ಟಡಬೇಕು ಇಲಾಖೆಯ ಅಧಿಕಾರಿಗಳಿಗೆ ವಾಸ ಮಾಡುವುದಕ್ಕೆ ಮನೆಗಳು ಬೇಕು. ಇವೆಲ್ಲಾ ಅತ್ಯವಶ್ಯಕವಾಗಿ ಬೇಕಾದವುಗಳು. ಈ ಹಣದಲ್ಲಿ ವಾಸದ ಮನೆಗಳಿಗಾಗಿ ಪ್ರತಿ ಶತ 32 ಭಾಗ ಮಾತ್ರ ಖರ್ಚಾಗಿದೆ ; ಇನ್ನು ಉಳಿದ ಸುಮಾರು 68 ಪ್ರತಿ ಶತ ಭಾಗ ವಾಸದ ಮನೆಗಳಲ್ಲದ ಬಾಬಿಗೆ ಖರ್ಚು ಮಾಡಲಾಗಿದೆ. ಇವನ್ನು ವರದಿಯಲ್ಲಿ ತಿಳಿಸಲಾಗಿದೆ ಕಟ್ಟಡಗಳನ್ನು ಕಟ್ಟುವುದು ಮುಖ್ಯವಲ್ಲ ; ಅದನ್ನು ಚೆನ್ನಾಗಿ ನಿರ್ವಹಣೆ ಮಾಡಬೇಕಾದುದು ಬಹಳ ಮುಖ್ಯ. ನಿರ್ವಹಣೆ ಕಾರ್ಯಗಳಿಗಾಗಿ ಇರುವ ಮುಖ್ಯ ಅಭಿಯಂತರರಿಗೆ 1940ನೇ ಇಸವಿಯವರೆಗೆ ಕಟ್ಟಲಾದ ಇಲಾಖಾ ಕಟ್ಟಡಗಳಿಗಾಗಿ ಬಂಡವಾಳದ ಸುಮಾರು ಪ್ರತಿ ಶತ ಆರರಷ್ಟು ಹಣವನ್ನು ಅವುಗಳ ನಿರ್ವಹಣೆಗಾಗಿ ಕೊಡುವ ಅಧಿಕಾರವಿದೆ 1940 ರಿಂದ 1975ನೇ ಇಸವಿಯವರೆಗೆ ಕಟ್ಟಲಾದ ಕಟ್ಟಡಗಳಿಗೆ ಪ್ರತಿ ಶತ ಐದು ಮತ್ತು 1975ರ ನಂತರ ಕಟ್ಟಲಾದ ಕಟ್ಟಡಗಳಿಗೆ ಪ್ರತಿ ಶತ ಮೂರರಷ್ಟನ್ನು ಅವುಗಳ ನಿರ್ವಹಣೆಗಾಗಿ ಕೊಡುವ ಅಧಿಕಾರವೂ ಅವರಿಗಿದೆ,

ಇನ್ನು ನಮ್ಮ ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶಗಳ ರಸ್ತೆಗಳಿಂದ ಹಿಡಿದು, ವಿವಿಧ ದರ್ಜೆಯ ರಸ್ತೆಗಳನ್ನೊಳಗೊಂಡಂತೆ ರಾಷ್ಟ್ರೀಯ ಹೆದ್ದಾರಿಗಳೂ ಒಳ್ಳೆಯ ರೀತಿಯಲ್ಲಿವೆ.

100 ಚದರ ಕಿಲೋಮೀಟರಿಗೆ 1956ರಲ್ಲಿ ರಸ್ತೆಗಳ ಉದ್ದ 22 ಕಿಲೋಮೀಟರ್ ಇದ್ದದ್ದು, 1976ರ ಹೊತ್ತಿಗೆ ಅಂದರೆ 2 ದಶಕಗಳಲ್ಲಿ 47 ಕಿಲೋಮೀಟರ್ ದೂರ ಆಗಿವೆ ಎನ್ನತಕ್ಕದ್ದನ್ನು ಈ ಸಭೆಗೆ ತಿಳಿಸಿ. ಇದರ ನಿರ್ವಹಣೆ ಮತ್ತು ರಿಪೇರಿಗೆ ಎಷ್ಟು ಖರ್ಚಾಗುತ್ತಿದೆ ಎನ್ನುವುದು ವರದಿಯಲ್ಲಿ ಇದೆ ತಾವುಗಳೆಲ್ಲಾ ಓದಿರಬಹುದು, ಒಂದು ಪಕ್ಷ ಕೆಲಸದ ಒತ್ತಡದಿಂದ ಓದದೆ ಇದ್ದರೆ ಮುಂದಕ್ಕೆ ಓದುತ್ತೀರಿ ಎಂದು ಅಂದುಕೊಂಡಿದ್ದೇನೆ. ನಿರ್ವಹಣೆ ಮತ್ತು ರಿಪೇರಿಗಾಗಿ ಪ್ರತಿ ವರ್ಷ ಜಾಸ್ತಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇಷ್ಟನ್ನು ಪೀಠಿಕೆಯಲ್ಲಿ ಹೇಳುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರು ಅನೇಕ ವಿಷಯಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಈ ಇಲಾಖೆಯಲ್ಲಿ ಏನು ನಡೆಯುತ್ತದೆ ಎನ್ನುವುದು ಅವರಿಗೆ ಅನುಭವ ಇದೆ, ಅವರು ಹಿಂದೆ ಇಂಜಿನಿಯರ್ ಆಗಿದ್ದರು ಅದರಲ್ಲಿಯೂ ಸಾರ್ವಜನಿಕ ಜೀವನದಲ್ಲಿರುವ ನಮಗೆಲ್ಲರಿಗೂ ಕೂಡ ಸಾಕಾದಷ್ಟು ಅನುಭವ ಈ ಇಲಾಖೆಯಲ್ಲಿದೆ. ಡಾಲ್ಹೌಸಿ ದಿಲ್ಲೋನ್‌ರ ಕಾಲದಿಂದ ಜಾರ್ಜ್ ಫರ್ನಾಂಡೀಸ್‌ರವರ ಕಾಲದವರೆಗೆ ಈ ಒಂದು ಇಲಾಖೆಯಲ್ಲಿ ಏನೇನು ನಡೆದಿದೆ ಮತ್ತು ಎಷ್ಟರ ಮಟ್ಟಿಗೆ ಕೆಲಸಗಳು ಆಗಿವೆ ಎನ್ನುವುದು ಗೊತ್ತಿದೆ. ಮತ್ತೆ ಈ ಒಂದು ಇಲಾಖೆಯಲ್ಲಿ ಒಳ್ಳೆಯ ಇಂಜಿನಿಯರ್ಸ್‌ಗಳು ಅಂದರೆ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ, ಮತ್ತೆ ದಿವಾನ್ ರಾಮಸ್ವಾಮಿ ಐಯ್ಯರ್ ಅವರು ತಿರುವಾಂಕೂರು ದಿವಾನರಾಗಿದ್ದ ಕಾಲದಲ್ಲಿ ಒಳ್ಳೆಯ ಇಂಜಿನಿಯರ್‌ಗಳು ಇದ್ದರು ಅವರು ಒಂದು ಸಂದರ್ಭದಲ್ಲಿ ಹೇಳುತ್ತಾ, ಹಿಂದಿನ ಕಾಲದಲ್ಲಿ ಸೇತುವೆಗಳನ್ನು ಮತ್ತು ಕಟ್ಟಡಗಳನ್ನು ಕಟ್ಟಿದರೆ ಜೋಡಿ ಬಂದೂಕಗಳನ್ನು ಇಟ್ಟು ಗುಂಡನ್ನು ಹಾರಿಸಿದರೂ ಅವುಗಳು ಜಗ್ಗುತ್ತಿರಲಿಲ್ಲ ಅಷ್ಟು ಸುಭದ್ರವಾಗಿ ಕಟ್ಟುತ್ತಾ ಇದ್ದರು. ಆದರೆ ಇತ್ತೀಚಿನ ಆಧುನಿಕ ಇಂಜಿನಿಯರುಗಳು ಕಟ್ಟತಕ್ಕ ಸೇತುವೆ ಮತ್ತು ಕಟ್ಟಡಗಳು ಭಾರಿ ಮಳೆ ಬಂದರೆ ಅದರಲ್ಲಿ ಬಿರುಕು ಬಂದು ನೀರು ಸುರಿಯುವುದನ್ನು ನೋಡಿದ್ದೇವೆ ಎಂದು ಆಗಲೇ ಹೇಳಿದ್ದಾರೆ. ಎಲ್ಲಾ ಕಾಲದಲ್ಲೂ ಒಳ್ಳೆಯ ಇಂಜಿನಿಯರ್ಸ್ ಇದ್ದಾರೆ, ಇನ್ನೊಂದು ಮಾತು

ಹೇಳಿದ್ದಾರೆ. ರಸ್ತೆ ರಿಪೇರಿ ಮಾಡುವ ಕೆಲಸದಲ್ಲಿ ಹಳ್ಳ ಕೊಳ್ಳ ಮುಚ್ಚಿ ಬಂದು ಸುಮಾರು ಮಳೆ ಬಂದರೆ ಮಾರನೇ ದಿವಸ ಮತ್ತೆ ಅದೇ ಹಳ್ಳಕೊಳ್ಳ ನೋಡುತ್ತಿದ್ದೆವು ಎಂದು ಒಂದು ಸಾರಿ ಉತ್ತರ ಕೊಡುತ್ತಾ ಹೇಳಿದ್ದಾರೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ಕರ್ನಾಟಕ ರಾಜ್ಯದಲ್ಲಿ ಒಳ್ಳೆಯ ಅಭಿಯಂತರರು ಇದ್ದಾರೆ. ಭರತ ಖಂಡದಲ್ಲಿಯೇ ಓದಿದಂತ ಒಳ್ಳೆಯ ಅಭಿಯಂತರರು ಇವತ್ತು ಹೊರದೇಶಗಳಲ್ಲಿ ಇದ್ದಾರೆ. ನಾನು ಲೋಕೋಪಯೋಗಿ ಸಚಿವನಾಗುವುದಕ್ಕೆ ಒಂದು ದಿವಸ ಮುಂಚಿತವಾಗಿ ಅಂದರೆ ಸೆಪ್ಟೆಂಬರ್ ತಿಂಗಳಲ್ಲಿ ಅಮೆರಿಕಾದಿಂದ ಬಂದೆ, ಅನೇಕ ಜನ ನಮ್ಮ ದೇಶದ ಅಭಿಯಂತರರು ಅಲ್ಲಿ ದೊಡ್ಡ ಸಂಬಳ ತೆಗೆದುಕೊಳ್ಳುತ್ತಿದ್ದಾರೆ ಅನೇಕ ಜನ ಸಿವಿಲ್ ಇಂಜಿನಿಯರ್ಸ್ ಅಲ್ಲಿ ಹೋಗಿ ಇದ್ದಾರೆ. ನಮ್ಮವರಿಗೆ ಒಳ್ಳೆಯ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟು ಕೆಲಸವನ್ನು ತೆಗೆದುಕೊಳ್ಳಬೇಕು ಅಧಿಕಾರಿಗಳು ಅಂದರೆ ಅವರೇ ಬೇರೆ, ಅನಧಿಕಾರಿಗಳು ಅಂದರೆ ಬೇರೆ ಅಲ್ಲ ಎಲ್ಲರು ಈ ದೇಶದವರೇ. "The Doctrine of one iadividual, one value is the one Sole of Democracy". ಪ್ರಜಾಪ್ರಭುತ್ವದ ಮೂಲ ಸಿದ್ಧಾಂತದಲ್ಲಿ ಅಧಿಕಾರಿಗಳು ಬೇರೆ ಅನಧಿಕಾರಿಗಳು ಬೇರೆ ಎಂದು ಹೇಳತಕ್ಕದ್ದು ಸರಿಯಲ್ಲ. ಆ ರೀತಿ ವರ್ತನೆ ಮಾಡಬಾರದು ಎಂದು ನಾನು ಹಿಂದಿನಿಂದಲೂ ಹೇಳುತ್ತಾ ಬಂದಿದ್ದೇನೆ. ಒಳ್ಳೆಯ ಕೆಲಸವನ್ನು ಮಾಡದೇ ಇದ್ದಂತವರ ಬಗ್ಗೆ ನಿರ್ದಾಕ್ಷಿಣ್ಯವಾಗಿ ಅವರ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ನಾನು ಇವತ್ತು ಕೂತುಕೊಂಡಿರುವುದು ಸಾರ್ವಜನಿಕರ ಹಣದಿಂದ, ಇಂಜಿನಿಯರುಗಳು ಇವತ್ತು ಇರುವುದು ಸಾರ್ವಜನಿಕರ ಹಣದಿಂದ. ಈ ಮಾತನ್ನು ಹೇಳುತ್ತಾ, ಈ ಇಲಾಖೆಯಲ್ಲಿ ಎಷ್ಟು ಜನ ಮುಖ್ಯ ಇಂಜಿನಿಯರ್‌ಗಳು ಇದ್ದಾರೆ ಎನ್ನುವ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಾದ ದೇವೇಗೌಡರು ಸುಮಾರು 2೮ ಜನ ಮುಖ್ಯ ಇಂಜಿನಿಯರುಗಳು ಇದ್ದಾರೆಂದು ಹೇಳಿದ್ದಾರೆ, ಇವರು ಇಡೀ ಕರ್ನಾಟಕ ರಾಜ್ಯಕ್ಕೆ ಇರತಕ್ಕವರು, ನಮ್ಮ ಇಲಾಖೆಯಲ್ಲಿ 7 ಜನ ಮುಖ್ಯ ಇಂಜಿನಿಯರ್ಸ್ ಇದ್ದಾರೆ, ಎರಡು ಮೇಜರ್ ಪ್ರಾಜೆಕ್ಟ್‌ಗಳಾದ ಕೃಷ್ಣ ಮೇಲ್ದಂಡೆ ಮತ್ತು ಹೇಮಾವತಿ ಯೋಜನೆಯಲ್ಲಿ ಇಬ್ಬರು ಮುಖ್ಯ ಇಂಜಿನಿಯರ್ಸ್‌ಗಳನ್ನು ಸರ್ಕಾರ ನೇಮಿಸಿದೆ. ಮತ್ತೆ ಇತ್ತೀಚೆಗೆ ಈ ಸಣ್ಣ ನೀರಾವರಿ ಹಾಗೂ ಸಾರ್ವಜನಿಕ ಆರೋಗ್ಯ ಅಭಿಯಂತರರ ಇಲಾಖೆಗೆ ಮತ್ತೊಬ್ಬರನ್ನು ಸರ್ಕಾರ ನೇಮಿಸಿದೆ. ಈ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ ಒಟ್ಟು 14 ಖಾಲಿ ಸ್ಥಾನಗಳು ಇದ್ದವು ಮತ್ತೆ ಹೊಸದಾಗಿ ಮೂರು ಸ್ಥಾನಗಳನ್ನು ಸೃಷ್ಟಿ ಮಾಡಿದ್ದೇವೆ. ನಾನು ಈಗಾಗಲೇ ಹೇಳಿದ್ದೇನೆ, ಇದರ ಪೈಕಿ ಒಂದನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಕೃಷ್ಣರಾಜಸಾಗರದಲ್ಲಿ ಅನುಸಂಧಾನ ಮಾಡತಕ್ಕ ಕೆಲಸ ಒಳ್ಳೆಯ ರೀತಿಯಲ್ಲಿ ಆಗಬೇಕು, ರಾಷ್ಟ್ರದಲ್ಲಿರತಕ್ಕ ಎಲ್ಲಾ ರಿಸೋರ್ಸ್ ಸ್ಟೇಷನ್‌ನಲ್ಲಿರತಕ್ಕವರು ಮುಖ್ಯ ಇಂಜಿನಿಯರ್‌ರವರ ಮಟ್ಟದಲ್ಲಿರುತ್ತಾರೆ. ನಿರ್ದೇಶಕರವರ ಇಲಾಖೆ ಅನೇಕ ರಾಜ್ಯಗಳಲ್ಲಿ ಇಲ್ಲದೆ, ಮುಖ್ಯ ಇಂಜಿನಿಯರ್ಸ್ ಮಟ್ಟದಲ್ಲಿ ಅಧಿಕಾರಿಗಳು ಇದ್ದಾರೆ, ಅದಕ್ಕೋಸ್ಕರ ಈ ವಿಚಾರದಲ್ಲಿ ಸ್ಟೇಟಸ್ ಕೊಡಬೇಕೆಂಬ ದೃಷ್ಟಿಯಿಂದ ಅದನ್ನು ಅಪ್‌ಗ್ರೇಡ್ ಮಾಡಲಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಒಟ್ಟು 1೮ ಪ್ರೊಮೋಷನ್‌ಗಳನ್ನು ಕೊಟ್ಟಿದ್ದೇವೆ. ಮತ್ತೆ ಇನ್ನೊಂದು ಪ್ರಶ್ನೆಯನ್ನು ಮಾನ್ಯ ದೇವೇಗೌಡರು ಹೇಳಿದರು. ಬಡ್ತಿ ಮತ್ತು ಸೃಷ್ಟಿ, ಇವೆರಡರ ವಿಷಯದಲ್ಲಿ ಅವರು ಹೇಳುತ್ತಾ, ಇದರ ಅವಶ್ಯಕತೆ ಏನಿತ್ತು, ಶಾಸ್ತ್ರೀಯ ಆಧಾರದ ಮೇಲೆ ಈ ಇಲಾಖೆಯನ್ನು ಪುನರ್ ಘಟಿಸಬೇಕೇ ಹೊರತು. ಸುಮ್ಮನೆ ಮಾಡುವುದು ಸರಿಯಲ್ಲ, ಇದರಿಂದ ಹಣಕಾಸು ಎಷ್ಟು ಖರ್ಚಾಗುತ್ತದೆ, ಇವುಗಳ ಅವಶ್ಯಕತೆ ಏನು ಎನ್ನುವ ಅಭಿಪ್ರಾಯವನ್ನು ಅವರು ಹೇಳಿದ್ದಾರೆ. ಇದರ ಮೇಲೆ ವರದಿಗಳು ಇವೆ ಎನ್ನತಕ್ಕದ್ದನ್ನು ಅವರು ಹೇಳಿದ್ದಾರೆ.

2–30 P.M.

ಅಧ್ಯಕ್ಷರೇ, ಈ ಸಂದರ್ಭದಲ್ಲಿ ಇನ್ನೊಂದು ವಿಷಯ ಹೇಳಬೇಕು ಎಂದರೆ ಈ ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ ಒಬ್ಬ ಮುಖ್ಯ ಇಂಜಿನಿಯರ್ ಹುದ್ದೆಯನ್ನು ನಾವು ಸೃಷ್ಟಿ ಮಾಡಿದ್ದೇವೆ. ಮಾನ್ಯ ದೇವೇಗೌಡ ಅವರಿಗೆ ಇದು ಏನು ಹೊಸದಲ್ಲ, ಈ ಯೋಜನೆಗೆ ಪ್ರಸ್ತುತ ಅಂದಾಜು ಪ್ರಕಾರ ಸುಮಾರು ನಾಲ್ಕು ಕೋಟಿ ರೂಪಾಯಿ ವೆಚ್ಚ ತಗಲುತ್ತದೆಂದು ಗೊತ್ತಿದೆ. ಇದರಿಂದ ಸುಮಾರು 21 ಲಕ್ಷ ಎಕರೆ ನೀರಾವರಿ ಸೌಲಭ್ಯವಾಗುತ್ತದೆ. ಇವೊತ್ತು ಘಟಪ್ರಭ

ಮತ್ತು ಮಲಪ್ರಭ ಯೋಜನೆ ಪೂರ್ಣಗೊಳ್ಳತಕ್ಕ ಹಾದಿಯಲ್ಲಿ ಇರುವುದರಿಂದ ನಮ್ಮ ಪ್ರಯತ್ನಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗೆ ತಿರುಗಿಸಬೇಕಾಗಿದೆ. ಇದರ ಮಹತ್ವವನ್ನು ಅರಿತುಕೊಂಡು ಯೋಜನಾ ಮಂಡಲಿಯವರು 1976—77ನೇ ಸಾಲಿನಲ್ಲಿ 2 ಕೋಟಿ ರೂಪಾಯಿಗಳಿಂದ 6 ಕೋಟಿ ರೂಪಾಯಿಗಳವರೆಗೆ ಅವರು ಕೊಡತಕ್ಕ ಸಹಾಯವನ್ನು ಹೆಚ್ಚಿಸಿದ್ದಾರೆ. ಮತ್ತೆ ಈ ಯೋಜನೆಗೆ 1977—78ನೇ ಸಾಲಿನಲ್ಲಿ 20ರಿಂದ 25 ಕೋಟಿ ರೂಪಾಯಿಗಳಷ್ಟು ಸಹಾಯ ಬರತಕ್ಕದ್ದು ನಾವು ನಿರೀಕ್ಷೆ ಮಾಡಿದ್ದೇವೆ. ಆದ್ದರಿಂದ ಇದಕ್ಕೆ ಪ್ರತ್ಯೇಕವಾದಂಥ ಒಂದು ಪೂರ್ವ ವಲಯ ಸೃಷ್ಟಿಸಿ ಅದಕ್ಕೆ ಒಬ್ಬ ಅಭಿಯಂತರರನ್ನು ನೇಮಿಸತಕ್ಕದ್ದು ಅವಶ್ಯಕ ಎನ್ನತಕ್ಕದ್ದನ್ನು ಮನಗಂಡಿದ್ದೇವೆ. ಇದರ ಜೊತೆಗೆ ಅವಶ್ಯಕವಾದಂಥ ನಾಲೆಗಳು ಮತ್ತು ಅಡ್ಡ ಚರಂಡಿ ಕೆಲಸಗಳು ಡಿಸ್ಟ್ರಿಬ್ಯೂಟರೀಸ್ ಎಲ್ಲಾ ಯೋಜನೆಗಳ ಕಾರ್ಯಕ್ರಮಗಳ ಅಂದಾಜು ತಯಾರು ಮಾಡಿ ನಮಗೆ ದೊರೆತಂಥ ಹಣವನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ತ್ವರಿತವಾಗಿ ಈ ಯೋಜನೆಯನ್ನು ಮುಗಿಸಬೇಕು ಎಂಬ ದೃಷ್ಟಿಯಿಂದ ಇದ್ದೇವೆ. ಮಾನ್ಯ ದೇವೇಗೌಡರು ಅವರ ಭಾಷಣದಲ್ಲಿ ಮುನಿರಾಬಾದ್‌ನಲ್ಲಿರತಕ್ಕದ್ದನ್ನು ಕೂಡ ಉದ್ಧರಿಸಿದ್ದಾರೆ. ಈಗ ಅಲ್ಲಿ ಮಧ್ಯ ವಲಯ ಏನು ಇದೆ ಅಲ್ಲಿರತಕ್ಕ ಮುಖ್ಯ ಇಂಜಿನಿಯರ್, ಈ ತುಂಗಭದ್ರಾ ಮಂಡಲಿಗೆ ಸಂಬಂಧಪಟ್ಟಂತೆ ಅಂತರ ರಾಜ್ಯ ಇಂಟರ್ ಸ್ಟೇಟ್ ಸಮಸ್ಯೆಗಳು ಮತ್ತೆ ಈ ಯೋಜನೆಯಿಂದ ಸುಮಾರು 8 ಲಕ್ಷ ಎಕರೆಗಳಿಗೆ ನೀರು ಕೊಡತಕ್ಕದ್ದು ಇರುವುದರಿಂದ, ಮತ್ತೆ ನೀರಾವರಿಗೆ ಸಂಬಂಧಪಟ್ಟಂತೆ ನಾಲೆಗಳು ಏನು ಇವೆ, ಅವುಗಳ ನಿರ್ವಹಣೆ, ಅವುಗಳನ್ನು ಬಲಪಡಿಸತಕ್ಕದ್ದು ಮತ್ತೆ ಗುಲಬರ್ಗಾದ ರೆವಿನ್ಯೂ ವಿಭಾಗದಲ್ಲಿರತಕ್ಕ 12 ಮಧ್ಯಮ ನೀರಾವರಿ ಯೋಜನೆಗಳು, ಕಾರಂಜಿ ಪ್ರಾಜೆಕ್ಟ್ ಸೇರಿಕೊಂಡು ಅವರು ಈ ಕೆಲಸಗಳನ್ನೆಲ್ಲಾ ನೋಡಿಕೊಳ್ಳತಕ್ಕ ಜವಾಬ್ದಾರಿ ಇರುವುದರಿಂದ ಈ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಅವರಿಗೆ ವಹಿಸತಕ್ಕದ್ದು ಸಾಧ್ಯವಲ್ಲ ಎನ್ನತಕ್ಕದ್ದನ್ನು ಅರಿತು ಈ ಒಂದು ಹುದ್ದೆಯನ್ನು ಸೃಷ್ಟಿಸಿದ್ದು ಆಯಿತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಎರಡನೆಯದಾಗಿ ಈ ಹೇಮಾವತಿ ಪ್ರಾಜೆಕ್ಟ್‌ಗೆ ಒಬ್ಬ ಮುಖ್ಯ ಇಂಜಿನಿಯರ್ ಏತಕ್ಕೆ ಬೇಕಾಗುತ್ತದೆ ಎಂದು ಕೇಳಿದ್ದಾರೆ. ಹಾಗೆ ಈ ದಕ್ಷಿಣ ವಲಯಕ್ಕೆ ಸಂಬಂಧಪಟ್ಟಂತೆ ಗೊರೂರು ಪ್ರಾಜೆಕ್ಟ್‌ಗೂ ಕೂಡ ಏತಕ್ಕೆ ಬೇಕು ಎಂದು ಕೇಳಿದ್ದಾರೆ. ಇವೊತ್ತು ಈ ನೀರಾವರಿ ವಿಷಯದಲ್ಲಿ ಎಲ್ಲರೂ ಪರಿಣತೆ ಪಡೆಯಲಿಕ್ಕೆ ಆಗುವುದಿಲ್ಲ ಆದರೆ ಮಾನ್ಯ ಸದಸ್ಯರನೇಕರಿಗೂ, ಮತ್ತು ಹಾಸನ ಜಿಲ್ಲೆಯ ಸದಸ್ಯರಿಗೂ ಈ ನೀರಾವರಿ ಯೋಜನೆ ಬಗ್ಗೆ ಹೆಚ್ಚಿನ ವಿಷಯ ಗೊತ್ತಿದೆ. ಈ ಕಬಿನಿ, ಹೇಮಾವತಿ ಮತ್ತು ಹಾರಂಗಿ, ಈ ಮೂರು ಬೇರೆ ನೀರಾವರಿ ಯೋಜನೆಗಳು ಮತ್ತು ಅನೇಕ ಮಧ್ಯಮ ನೀರಾವರಿ ಯೋಜನೆಗಳು, ಕೆ. ಆರ್. ಎಸ್. ಮತ್ತು ಭದ್ರಾ ಮೇಲ್ವಿಚಾರಣೆ ನೋಡಿಕೊಳ್ಳತಕ್ಕ ಜವಾಬ್ದಾರಿ ಇರಿಗೇಷನ್ ಸೌತ್ ಚೀಫ್ ಇಂಜಿನಿಯರ್‌ರವರಿಗೆ ಬದ್ಧಿರುವುದು ತಮ್ಮೆಲ್ಲರಿಗೂ ಕೂಡ ಗೊತ್ತಿದೆ. ಕಬಿನಿ ಅಣೆಕಟ್ಟು ಮುಗಿದದ್ದು ಎಲ್ಲರಿಗೂ ಗೊತ್ತಿದೆ, ಮತ್ತೆ ಹೇಮಾವತಿ, ಹಾರಂಗಿ ಅಣೆಕಟ್ಟುಗಳು ಭಾಗಶಃ 1977ನೇ ಇಸವಿಯ ಅಂತ್ಯದಲ್ಲಿ ನನಗೆ ಕೊಟ್ಟಿರುವ ಮಾಹಿತಿ ಪ್ರಕಾರ ಮುಗಿಯುವ ನಿರೀಕ್ಷೆ ಇದೆ. ಈ ಯೋಜನೆಗಳಿಂದ ಶೇಕರಿಸಲ್ಪಡತಕ್ಕಂತಹ ನೀರನ್ನು ಸರಿಯಾಗಿ ಉಪಯೋಗಿಸಲು ನಾಲೆಗಳನ್ನು ರಚಿಸಬೇಕಾದಂತ ಕೆಲಸಗಳು ಆಗಬೇಕಾಗಿದೆ. ಈಗ ಹೇಮಾವತಿ ಅಂದಾಜು 60 ಕೋಟಿ ರೂಪಾಯಿ. ಈ ಸಾಲಿನಲ್ಲಿ ಮಾರ್ಚಿ ಅಂತ್ಯದವರೆಗೆ 8 ಕೋಟಿ ರೂಪಾಯಿ ಖರ್ಚಾಗಿದೆ. ಹಾರಂಗಿ ಕಾಲುವೆ ಅಂದಾಜು 30 ಕೋಟಿ ರೂಪಾಯಿ. ಕಾಲುವೆಗಳಿಗೆ ಸಂಬಂಧಪಟ್ಟಂತೆ ಈ ಸಾಲಿನಲ್ಲಿ ಮಾರ್ಚಿ 76ಕ್ಕೆ 5 ಕೋಟಿ ರೂಪಾಯಿ ಖರ್ಚಾಗಿದೆ ಇನ್ನು ಕಬಿನಿ ನಾಲೆ ಅಂದಾಜು 40 ಕೋಟಿ ರೂಪಾಯಿ ಈ ಸಾಲಿನಲ್ಲಿ ಮಾರ್ಚಿ 76ಕ್ಕೆ 10 ಕೋಟಿ ರೂಪಾಯಿ ಖರ್ಚಾಗಿದೆ. ಈ ಮೂರು ಯೋಜನೆಗಳಿಗೆ ಸಂಬಂಧಪಟ್ಟಂತೆ ಒಟ್ಟು ಹಂತದಲ್ಲಿ ಅರ್ಧ ಭಾಗ ಹೇಮಾವತಿ ನಾಲೆಗಳಿಗೆ ಖರ್ಚು ಮಾಡತಕ್ಕದ್ದು ಇದೆ ಎನ್ನತಕ್ಕದ್ದು ಇದರಿಂದ ತಿಳಿದುಬರುತ್ತದೆ ಅದಕ್ಕೋಸ್ಕರ ಇದಕ್ಕೆ ಒಬ್ಬ ಪ್ರತ್ಯೇಕ ಚೀಫ್ ಇಂಜಿನಿಯರ್ ಇರಬೇಕು ಎಂಬುದರ ಅವಶ್ಯಕತೆಯನ್ನು ಅರಿತು ಹೇಮಾವತಿಯಲ್ಲಿ ಹೆಡ್ ಕ್ವಾರ್ಟರ್ಸ್ ಮಾಡಿ ಒಂದು ವರ್ಷದವರೆಗೆ ಒಬ್ಬರು ಚೀಫ್ ಇಂಜಿನಿಯರ್ ಇರಬೇಕು ಎಂದು ಮಾಡಿದ್ದೇವೆ.

ಇನ್ನು ಮೂರನೆಯದಾಗಿ ಈ ಸಣ್ಣ ನೀರಾವರಿ ಮತ್ತೆ, ಸಾರ್ವತ್ರಿಕ ಆರೋಗ್ಯ ಅಭಿಯಂತರ ಕೆಲಸಗಳಿಗೆ ಕರ್ನಾಟಕದಲ್ಲಿ ಸಂಬಂಧಪಟ್ಟಂತೆ ಮತ್ತೊಂದು ಹುದ್ದೆಯನ್ನು ಸೃಷ್ಟಿಸಲಾಗಿದೆ. ಹಿಂದೆ ಇದೇ ಹುದ್ದೆಯನ್ನು ರದ್ದುಪಡಿಸಲಾಗಿತ್ತು, ಮತ್ತೆ ಇದನ್ನು ರಿವೈವಲ್ ಮಾಡಿದ್ದೇವೆ ಎಂದು ಹೇಳುವುದಕ್ಕೆ ಬದಲಾಗಿ ಇದನ್ನು ಸೃಷ್ಟಿ ಮಾಡಿದ್ದೇವೆ ಎಂದು ಹೇಳುತ್ತೇನೆ.

1976—77ರಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಆಯವ್ಯಯ ಅಂದಾಜು ಪಟ್ಟಿಯಲ್ಲಿ ಸಣ್ಣ ನೀರಾವರಿ ಯೋಜನೆಗೋಸ್ಕರವಾಗಿ ಸುಮಾರು 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, ಬರಗಾಲ ಕಾಮಗಾರಿಗಳಿಗೋಸ್ಕರವಾಗಿ ಸುಮಾರು 4—5 ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡಿರುತ್ತೇವೆ. ಸಣ್ಣ ನೀರಾವರಿ ಯೋಜನೆಗಳು ಅತಿ ಕಡಿಮೆ ಕಾಲದಲ್ಲಿ ಫಲಿತಾಂಶವನ್ನು ಕೊಡಲಿ ಎನ್ನುವುದಕ್ಕೋಸ್ಕರ ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಬೆಂಗಳೂರಿನಲ್ಲಿ ಒಬ್ಬ ಇಂಜಿನಿಯರ್ ಇದ್ದರೆ ಧಾರವಾಡದಲ್ಲಿ ಒಬ್ಬರು ಇಂಜಿನಿಯರನ್ನು ಇಟ್ಟಿದ್ದೇವೆ. ಬೆಂಗಳೂರಿನಲ್ಲಿರುವ ಅಭಿಯಂತರರು ಈ ಸಣ್ಣ ನೀರಾವರಿ ಯೋಜನೆಗಳ ನಿಯಂತ್ರಣ ಕಾರ್ಯವನ್ನು ನೋಡಿಕೊಳ್ಳುತ್ತಿದ್ದರು. ಈ ಸಣ್ಣ ನೀರಾವರಿ ಯೋಜನೆಗಳು ಮೊದಲು ಇನ್‌ವೆಸ್ಟಿಗೇಷನ್ ಆಗಿ ನಂತರ ಕಾರ್ಯಾಚರಣೆಯಾಗಬೇಕು. ಮಾನ್ಯ ದೇವೇಗೌಡರು ಗ್ರಾಮಾಂತರ ನೀರು ಸರಬರಾಯಿ ಯೋಜನೆ ಬಗ್ಗೆ ಹೇಳಿದ್ದಾರೆ. ಈ ಗ್ರಾಮಾಂತರ ನೀರು ಸರಬರಾಜಿಗಾಗಿ ಮತ್ತು ಕೊಳವೆ ಬಾವಿಗಳನ್ನು ತೆಗೆಯುವ ಕೆಲಸಗಳನ್ನು ನೋಡಿಕೊಳ್ಳಲು ಇಡೀ ರಾಜ್ಯಕ್ಕೆ ಒಬ್ಬರ ಆಡಳಿತದಲ್ಲಿ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿದ್ದಿಲ್ಲ. ಏಕೆಂದರೆ ಇದು ಕುಡಿಯುವ ನೀರಿಗೆ ಸಂಬಂಧಪಟ್ಟ ಮೂಲಭೂತ ಸಮಸ್ಯೆ. ಈ ಯೋಜನೆಯಲ್ಲಿ ನಮಗೆ ಬೇಗ ಫಲಿತಾಂಶ ದೊರೆಯಬೇಕೆಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೇವಲ ಒಂದು ವರ್ಷದ ಅವಧಿಗೆ ಈ ಹುದ್ದೆಯನ್ನು ಸೃಷ್ಟಿ ಮಾಡಲಾಗಿದೆ ಎನ್ನುವ ಮಾತನ್ನು ಇಲ್ಲಿ ತಿಳಿಸಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಅರ್ಪಿಸುವ ಸಂದರ್ಭದಲ್ಲಿ ಆ ಮನೆಯ ಒಬ್ಬ ಮಾನ್ಯ ಸದಸ್ಯರು ಈ ಮನೆಯ ಮಾನ್ಯ ಸದಸ್ಯರುಗಳಾದ ಶ್ರೀಮಾನ್ ದೇವೇಗೌಡರು, ಮತ್ತು ನಮ್ಮ ಪಕ್ಷದ ಸದಸ್ಯರಾದ ಶ್ರೀಮಾನ್ ಬಿ. ಇ, ರಾಮಯ್ಯ, ಹಾಗೂ ಇನ್ನೊಬ್ಬ ಮಾನ್ಯ ಸದಸ್ಯರು ಮಾತನಾಡಿದ್ದನ್ನು ನಾನು ತರಿಸಿಕೊಂಡಿದ್ದೇನೆ. ಇಷ್ಟೇ ಅಲ್ಲದೆ ಮಾನ್ಯ ಸದಸ್ಯರಾದ ಶಾಮಣ್ಣನವರು ಇಷ್ಟೊಂದು ಪ್ರೊಮೋಷನ್ಸ್ ಏತಕ್ಕಾಗಿ ? ಎನ್ನುವ ಬಗ್ಗೆ ಒಂದು ಖೋತಾ ನಿರ್ಣಯವನ್ನೂ ಕೂಡ ತಂದಿದ್ದರು. ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಈ ಡೆಪ್ಯುಟಿ ಚೀಫ್ ಇಂಜಿನಿಯರ್‌ಗಳನ್ನು ಅಪ್‌ಗ್ರೇಡ್ ಮಾಡುವ ಬಗ್ಗೆ ಸದನಕ್ಕೆ ಸಮಜಾಯಿಷಿ ಉತ್ತರವನ್ನು ಕೊಡಿ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳುತ್ತೇನೆ, ಈ ಲೋಕೋಪಯೋಗಿ ಇಲಾಖೆಯಲ್ಲಿ ಅನೇಕ ವರ್ಷಗಳಿಂದಲೂ ಬಡ್ತಿ ಇಲ್ಲದೆ ಸ್ಟಾಗ್ನೇಟ್ ಆಗಿತ್ತು. ಈ ಲೋಕೋಪಯೋಗಿ ಇಲಾಖೆ ಬಹಳ ಮುಖ್ಯವಾದುದು. ಆದುದರಿಂದ ಮೊದಲು ಇಲ್ಲಿರುವ ಅಧಿಕಾರಿಗಳನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಈ ಇಲಾಖೆ from the Irrigation of the Soul to Irrigation of the Soil ಎಂಬುದನ್ನು ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಯೋಚನೆ ಮಾಡಿದ್ದೇನೆ. ಈ ಪಿ ಡಬ್ಲ್ಯು.ಡಿ. ಇಲಾಖೆಯಲ್ಲಿ ಬಡ್ತಿ ಕೊಡದೇ ಇರುವುದರಿಂದ ಅತೃಪ್ತಿ, ಈ ಅತೃಪ್ತಿಯಿಂದ ಕೆಲಸದಲ್ಲಿ ಅದಕ್ಷತೆ ಎಂಬುದನ್ನು ನಾನು ಉಪ ಮಂತ್ರಿಯಾಗಿದ್ದಾಗಿನಿಂದಲೂ ತಿಳಿದುಕೊಂಡಿದ್ದೇನೆ ನಮ್ಮ ಪಕ್ಷದ ಸದಸ್ಯರು ಹಾಗೂ ವಿರೋಧಪಕ್ಷದ ಅನೇಕ ಮಾನ್ಯ ಸದಸ್ಯರುಗಳೂ ಇದರ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಈಗ ಇದರ ಬಗ್ಗೆ ನಾನು ಹೆಚ್ಚು ಕಾಲವನ್ನು ತೆಗೆದುಕೊಳ್ಳದೆ ಆದಷ್ಟು ಬೇಗ ಮುಗಿಸುವುದಕ್ಕೆ ಪ್ರಯತ್ನಿಸುತ್ತೇನೆ. ಇದು ಸರ್ವೀಸಸ್‌ಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ಮಾನ್ಯ ದೇವೇಗೌಡರು ಹೇಳಿರುವುದಕ್ಕೆ ನಾನು ಉತ್ತರ ಕೊಡದೇ ಹೋದರೆ ಲೋಪ ಮಾಡಿದಂತಾಗುತ್ತದೆಂದು ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಪ್ರಶ್ನೆ ಸುಮಾರು 2 ವರ್ಷಗಳಿಂದಲೂ ಸರ್ಕಾರದ ಮುಂದಿತ್ತು. ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್‌ರವರು ಕಳುಹಿಸಿದ ಶಿಫಾರಸ್ಸಿನ ಜೊತೆಗೆ ನಾನೂ ಕೂಡ ಬೇರೆ ಬೇರೆ ಇಂಜಿನಿಯರ್‌ಗಳನ್ನು ಕರೆಸಿ ಅವರೊಡನೆ ವಿಷಯವನ್ನು ಚರ್ಚೆ ಮಾಡಿದ್ದೇನೆ. ಇದು

ತಮಗೂ ಕೂಡ ಗೊತ್ತಿದೆ. ಈ ಇಲಾಖೆಯ ಮುಖ್ಯಾಧಿಕಾರಿಗಳು ಏನಾದರೂ ಒಂದು ಪ್ರೊಪೋಸಲ್‌ನ್ನು ಸರ್ಕಾರಕ್ಕೆ ಕಳುಹಿಸಿದರೆ ಅದು ವಿಧಾನ ಸೌಧದಲ್ಲಿ ಕೋಲ್ಡ್ ಸ್ಟೋರೇಜ್‌ಗೆ ಹೋಗಿ ಬೀಳುತ್ತದೆ ಎಂದು ಅನೇಕರು ಹೇಳುತ್ತಾರೆ. ಈಗ ಆದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಕಳೆದ 21 ವರ್ಷಗಳಿಂದಲೂ ಈ ಸದನದ ಸದಸ್ಯನಾಗಿದ್ದೇನೆ. ಸಾರ್ವಜನಿಕರಿಂದ ಈ ರೀತಿ ಟೀಕೆಟಿಪ್ಪಣಿಗಳು ಬಂದರೆ ಅದು ಸರ್ಕಾರಕ್ಕೆ ಮೆರಗು ತರುವುದಿಲ್ಲ ಎಂದು ತಿಳಿದು ಅದಕ್ಕೋಸ್ಕರವಾಗಿ ಕಾರ್ಯದರ್ಶಿ, ವಿಶೇಷ ಕಾರ್ಯದರ್ಶಿ, ಮುಖ್ಯ ಇಂಜಿನಿಯರ್ ಇವರುಗಳನ್ನು ಕರೆಸಿಕೊಂಡು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಈ ಇಲಾಖೆಯಲ್ಲಿ ಬಹಳ ದಿವಸಗಳಿಂದಲೂ ಬಡ್ತಿ ಕೊಡುವುದು ನಿಂತು ಹೋಗಿದ್ದುದರಿಂದ ಇದರ ಬಗ್ಗೆ ನಾನು ತ್ವರಿತವಾಗಿ ಗಮನಕೊಟ್ಟೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಮಾಡಿದ ಕೆಲಸವನ್ನು ಡೆಪ್ಯುಟಿ ಚೀಫ್ ಇಂಜಿನಿಯರ್‌ಗಳು ಸೂಪರ್‌ವೈಸ್ ಮಾಡಬೇಕಾಗಿ ಬರುತ್ತದೆ. ಇದು ಸರಿಯಲ್ಲ. ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ, ಅಂಚೆ ಮತ್ತು ತಂತಿ ಇಲಾಖೆ, ನಮ್ಮ ರಾಜ್ಯದಲ್ಲಿರತಕ್ಕ ವ್ಯವಸಾಯ ಇಲಾಖೆ ಹಾಗೂ ಸಹಕಾರ ಇಲಾಖೆಗಳಲ್ಲಿ ಜಂಟಿ ನಿರ್ದೇಶಕರ ಹುದ್ದೆಗಳು ಯಾವ ರೀತಿ ಇವೆ ಎಂಬುದನ್ನು ನೋಡಿಕೊಂಡು ಅದರಂತೆ ಈ ಹುದ್ದೆಯನ್ನೂ ನಾವು ಅಪ್‌ಗ್ರೇಡ್ ಮಾಡಿದ್ದೇವೆ. ಅಲ್ಲದೆ ಇವರ ಕೆಲಸವೂ ಕೂಡ ಬಹಳ ಜಾಸ್ತಿ ಇರುವುದಲ್ಲದೆ, ಟೆಂಡರ್‌ಗಳನ್ನು ತೀರ್ಮಾನ ಮಾಡುವುದು. ಕ್ಲೈಂಸ್ ತೀರ್ಮಾನ ಮಾಡುವುದು. ಅಂದಾಜುಗಳನ್ನು ಪರಿಶೀಲಿಸುವುದು ಇಂಥಾದ್ದು ಇರುತ್ತದೆ. ಈ ಇಲಾಖೆಯಲ್ಲಿ ಕ್ಲೈಂಸ್ ಅನೇಕ ಕಾರಣಗಳಿಂದ ಬರುತ್ತದೆ. ಕಂಟ್ರಾಕ್ಟರ್ ಯಾರೋ, ಇಂಜಿನಿಯರ್ ಯಾರೋ, ಸಂಬಂಧಪಟ್ಟ ಮಂತ್ರಿಗಳು ಯಾರೋ, ಇನ್ನು ಏನೇನೋ ಕಾರಣಗಳಿಂದ ಈ ಕ್ಲೈಂಸ್ ಬರುತ್ತದೆ. ಈ ಕ್ಲೈಂಸ್‌ನ್ನು ತೀರ್ಮಾನ ಮಾಡಲು ಕಂಟ್ರಾಕ್ಟರ್ಸ್ ಅಸೋಸಿಯೇಷನ್‌ನವರು ಬಂದಿದ್ದರು, ಇವರಲ್ಲದೆ ಮತ್ತೆ 3—4 ಜನ ನಮಗೆ ಕ್ಲೈಂಸ್ ಬರಬೇಕೆಂದು ಬಂದಿದ್ದರು ಎಂದು ಕಾಣುತ್ತದೆ. ಅಷ್ಟು ಹೊರತು ಬೇರೆ ಇನ್ಯಾರು ಬಂದದ್ದು ನನಗೆ ಗೊತ್ತಿಲ್ಲ.

ಟೆಕ್ನಿಕಲ್ ಕಮಿಟಿಯವರು ಇದ್ದಾರೆ, ಕ್ಲೈಮ್ ಏನು ಇದೆ ಅದನ್ನೆಲ್ಲ ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ. ಈ ಎಲ್ಲ ಕೆಲಸಗಳನ್ನು ಕೂಡ ಅವರೇ ನಿರ್ವಹಿಸಬೇಕಾಗಿರುವುದರಿಂದ ಮತ್ತೆ ಎಕ್ಸಿಕ್ಯುಟೀವ್ ಇಂಜಿನೀಯರ್ ಚೀಫ್ ಇಂಜಿನೀಯರ್, ಸರ್ಕಲ್ ಸೂಪರಿಂಟೆಂಡೆಂಟ್ ಇಂಜಿನಿಯರ್ ಏನು ಇದ್ದಾರೆ ಅವರು ಅಧಿಕಾರ ನಡೆಸತಕ್ಕಂಥ ಸಂದರ್ಭದಲ್ಲಿ ತಮಗೆಲ್ಲ ಗೊತ್ತು ಹಾಗೆ ಸ್ಟೇಟಸ್ ಪ್ರಶ್ನೆ ಬರುತ್ತದೆ. ಈ ಎಲ್ಲ ದೃಷ್ಟಿಯಿಂದ ಮಾನ್ಯ ಹಿರಿಯ ಮಿತ್ರರಾದಂಥ ಪುಟ್ಟಸ್ವಾಮಿಯವರು ಏನು ಹೇಳಿದ್ದಾರೆ ಆದರ ಬಗ್ಗೆ 10 ತಿಂಗಳಲ್ಲಿ ಎಲ್ಲವನ್ನು ಆಧ್ಯಯನ ಮಾಡುವುದಕ್ಕೆ ಆಗಲಿಲ್ಲ. ರೀಆರ್ಗನೈಸ್ ಮಾಡಬೇಕೆನ್ನತಕ್ಕಂಥಾದ್ದು ಏನು ಇದೆ ಆದನ್ನು ಮಾನ್ಯ ದೇವೇಗೌಡರೂ ಕೂಡ ಹೇಳಿದ್ದಾರೆ ಆದನ್ನು ಅಷ್ಟು ಸುಲಭವಾಗಿ ತಳ್ಳಿಹಾಕತಕ್ಕಂಥಾದ್ದಲ್ಲವೆಂದು ಈ ಸಂದರ್ಭದಲ್ಲಿ ಹೇಳತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಲ್ ಸೂಪರಿನ್‌ಟೆಂಡೆಂಟ್ ಇಂಜಿನಿಯರು ಕಳುಹಿಸಿಕೊಡತಕ್ಕಂಥ ಕ್ಲೈಮ್ಸ್ ಸಂಬಂಧಪಟ್ಟಂಥಾ ಎಲ್ಲ ಕಾಗದಪತ್ರಗಳನ್ನು ಕ್ಲೈಮ್ ಮಾಡುವುದಕ್ಕೆ ಡೆಪ್ಯುಟಿ ಚೀಫ್ ಇಂಜಿನಿಯರ್‌ಗಳಿಗೆ ಸ್ಟೇಟಸ್ ಕೂಡ ಇರುವುದಿಲ್ಲ. They will be the junior officers and they cannot comment on the Superintending Engineers of the respective Circles. ಈ ವಾದವನ್ನು ಪುಷ್ಟೀಕರಿಸುವುದಕ್ಕೆ ಹೋದರೆ ಬಹಳ ದೂರ ಎಳೆಯಬೇಕಾಗುತ್ತದೆ. The Technical Assistant is of the status of an Asst. Engineer. The post of the Technical Assistant who works in the Circle Office must be upgraded to the status of an Executive Engineer

SRI M. MALLIKARJUNA SWAMY:—It is neither good analogy nor good argument.

ಶ್ರೀ ಎಸ್. ವೈ. ಪಾಟೀಲ್.—ಪೋಲೀಸ್ ಆಫೀಸ್‌ನಲ್ಲಿ ಸಬ್‌ಇನ್‌ಸ್ಪೆಕ್ಟರ್ ಏನು ಇರುತ್ತಾರೆ ಅವರನ್ನೇ ಲೀಡರ್ ಎಂದು ಹೇಳುತ್ತಾರೆ. ಎಲ್ಲ ಸ್ಟೇಟಸ್ಸನ್ನು ಕೂಡ ಅವರಿಗೆ ಕೊಡುತ್ತಾರೆ. ಬ್ರಿಟೀಷರ ಕಾಲದಲ್ಲಿ ಅವರನ್ನು ಒಳ್ಳೆಯ ಪರಿಣತರು ಎಂದು ಕರೆಯುವ ಪದ್ಧತಿ ಇತ್ತು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದರ ಜೊತೆಗೆ ಇಷ್ಟನ್ನು ಹೇಳುತ್ತಾ ಪಬ್ಲಿಕ್ ವರ್ಕ್ಸ್ ಇರಿಗೇಷನ್ ಇಲಾಖೆಯಲ್ಲಿ ಐದು ಜನ ಸೂಪರಿಂಟೆಂಡಿಂಗ್ ಇಂಜಿನೀಯರ್‌ಗಳ ಹುದ್ದೆಗಳನ್ನು ಸೃಷ್ಟಿಸಿದ್ದೇವೆ. ಮಾನ್ಯ ದೇವೆಗೌಡರಿಗೂ ಇದು ಗೊತ್ತಿರುತ್ತದೆ ನ್ಯಾಷನಲ್ ಹೈವೇ ಅಂದರೆ ರಾಷ್ಟ್ರೀಯ ಹೆದ್ದಾರಿಯ ವಿಭಾಗಗಳು 8 ಇದ್ದುದರಲ್ಲಿ 4 ಡಿವಿಜನ್‌ಗಳನ್ನು 18-12-75ರಲ್ಲಿ ರದ್ದು ಮಾಡಲಾಯಿತು. 6 ಉಪವಿಭಾಗಗಳು ಏನು ಇದ್ದುವು ಅವುಗಳನ್ನೂ ಕೂಡ ಅದೇ ದಿನಾಂಕದಂದು ರದ್ದು ಮಾಡಲಾಯಿತು. ಅದಾದಮೇಲೆ ನ್ಯಾಷನಲ್ ಹೈವೇಗೆ ಸಂಬಂಧ ಪಟ್ಟಂತೆ ಚೀಫ್ ಇಂಜಿನೀಯರ್ ಏನು ಇದ್ದಾರೆ ಅವರಿಗೆ ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣ ತಮಗೆ ಗೊತ್ತಿರುತ್ತದೆ. ರಾಷ್ಟ್ರೀಯ ಹೆದ್ದಾರಿಗಳಿಗೆ ಪೂರ್ಣವಾಗಿ ಕೇಂದ್ರ ಸರ್ಕಾರ ಕೊಡ ತಕ್ಕಂಥದ್ದು ಇರುತ್ತದೆ ನಮ್ಮ ಏಜನ್ಸಿ ಮುಂಖಾಂತರ 9 ಪರ್ಸೆಂಟ್ ಮಾತ್ರ ಕೊಡುತ್ತಿದ್ದೇವೆ. ಎರಡು ಸೂಪರಿಂಟೆಂಡಿಂಗ್ ಇಂಜಿನೀಯರ್ ಹುದ್ದೆಗಳ ಬಗ್ಗೆ ಸರ್ಕಾರಕ್ಕೆ ಪ್ರಪೋಸಲ್ ಕಳುಹಿಸಿ ಕೊಟ್ಟಿದ್ದಾರೆ. ಅದು ಈವತ್ತು ಹೊಸದಾಗಿ ಇಲಾಖೆ ವಹಿಸಿಕೊಂಡ ಮೇಲೆ ಬಂದುದಲ್ಲ. ಹಿಂದಿನಿಂದಲೂ ಕೂಡ ಕೇಳುತ್ತಿದ್ದಾರೆ. ಆದುದರಿಂದ ನ್ಯಾಷನಲ್ ಹೈವೇಗಳ ಬಗ್ಗೆ ಒಳ್ಳೆಯ ರೀತಿಯಲ್ಲಿ ಗಮನಕೊಟ್ಟು ಕೆಲಸ ಮಾಡಬೇಕಾದ ಅವಶ್ಯಕತೆ ಈಗ ಇದೆ. 5 ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕೆಲಸ ಜರೂರಾಗಿ ಆಗಬೇಕಾಗಿರುತ್ತದೆ. ಇವೆಲ್ಲ ಇದ್ದುದರಿಂದ ಈರೀತಿ ಪ್ರಪೋಸಲ್ಸ್ ಸರ್ಕಾರಕ್ಕೆ ಅವರಿಂದ ಬಂದಿತು. ಮತ್ತೆ ರಾಜ್ಯಸರ್ಕಾರದವರೂ ಕೂಡ ಕೇಂದ್ರ ಸರ್ಕಾರವನ್ನು ವಿನಂತಿ ಮಾಡಿಕೊಂಡಿದ್ದಾರೆ. ಒರಿಜನಲ್ ವರ್ಕ್ಸ್‌ಗಾಗಿ 62 ಲಕ್ಷ ರೂಪಾಯಿಗಳನ್ನು ಅಲಾಟ್ ಮಾಡಬೇಕೆಂದು ರೋಡ್ಸ್ ರಿಪೇರ್ಸ್‌ಗಾಗಿ 1977-78ನೇ ಸಾಲಿಗೆ 181 ಲಕ್ಷ ರೂಪಾಯಿಗಳು. ಮತ್ತೆ 1977—78ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಹೆದ್ದಾರಿಗೆ ಬರತಕ್ಕಂಥದ್ದು 500 ಲಕ್ಷ ರೂಪಾಯಿಗಳನ್ನು ನಾವು ನಿರೀಕ್ಷೆ ಮಾಡಿದ್ದೇವೆ. ಅಂದರೆ ಇದು 5 ಕೋಟಿ ರೂಪಾಯಿಗಳಷ್ಟಾಗುತ್ತಿದೆ ಅಂದರೆ 6 ಕೋಟಿ 50 ಲಕ್ಷ ರೂಪಾಯಿಗಳು ಇವೆಲ್ಲ ಎಸ್ಟಿಮೇಟ ಗಳನ್ನು ಇಂಪ್ಲಿಮೆಂಟ್ ಮಾಡಲಿಕ್ಕೆ ಕೇಳತಕ್ಕಂಥ ಹಣವಾಗಿರುತ್ತದೆ. ನಮಗೆ ಕೊಡತಕ್ಕಂಥಾ ಏಜೆನ್ಸಿ ಚಾರ್ಜ ಏನು ಇದೆ ಅದನ್ನು ಅವರು ಕೊಡುವುದರಿಂದ ನಮ್ಮ ಅಧಿಕಾರಿಗಳು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಕೆಲಸ ನಿರ್ವಹಿಸಲಿಕ್ಕೆ ಕೊಡತಕ್ಕಂಥ ಹಣ ಏನು ಇದೆ ಅದು ಇದರ ಒಳಗಡೆ ಬರುತ್ತದೆ. ಕೃಷ್ಣಾ ಮೇಲ್ದಂಡೆ ಯೋಜನೆ, ಆಲಮಟ್ಟಿ, ಹೇಮಾವತಿ ಮುನಿರಾಬಾದ್ ಗೋರೂರುನಲ್ಲಿರತಕ್ಕಂಥ ಮೂರು ಜನ ಸೂಪರಿಂಟೆಂಡಿಂಗ್ ಇಂಜಿನೀಯರಗಳ ಆಫೀಸಿನಲ್ಲಿ ಡಿಸೈನರುಗಳು ಇರಲಿಲ್ಲ. ಅಲ್ಲಿ ಲೋಕೋಪಯೋಗಿ ಇಲಾಖೆ ಇದ್ದರೂ ಕೂಡ ಅವರು ಮುಖ್ಯ ಇಂಜನೀಯರ್ ಕಚೇರಿಗೆ ಡಿಸೈನ್‌ಗಾಗಿ ಇಲ್ಲಿಗೆ ಬರಬೇಕಾಗಿತ್ತು. ಆದುದರಿಂದ ಚೀಫ್ ಇಂಜಿನೀಯರ್ ಮೂರು ಹುದ್ದೆಗಳನ್ನು ಸೃಷ್ಟಿಸಲಾಯಿತು. ಆ ವೇಳೆಯಲ್ಲಿ ಪ್ರಮೋಷನ್ ಕೂಡ ಕೊಡಬೇಕಾಯಿತು. ಆಯಾ ಕಡೆಗಳಲ್ಲಿ ರಸ್ತೆಗಳನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಚೀಫ್ ಇಂಜಿನೀಯರ್ ಕೂಡ ಇದ್ದಾರೆ.

ಶ್ರೀ ಎಚ್.ಡಿ. ದೇವೇಗೌಡ.-ಇಲಾಖೆಯನ್ನು ರೀಆರ್ಗನೈಸ್ ಮಾಡಿ, ಒಪ್ಪಿ ಕೊಳ್ಳುತ್ತೇನೆ. ಚೀಫ್ ಇಂಜಿನೀಯರ್‌ರವರಿಗೆ ದುಡ್ಡು ಕೊಡುವುದರಲ್ಲಿ ಸಂಕಟವಿಲ್ಲ. ಸರ್ಕಾರದವರು ಆರನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಆದರೆ ವರ್ಕ ಲೋಡ್ ಇದಿಯೋ ಇಲ್ಲವೇ ಎಂಬುದನ್ನು ನೋಡಬೇಕು. ಒಬ್ಬ ಚೀಫ್ ಇಂಜಿನೀಯರ್ ಬೆಂಗಳೂರಿನಲ್ಲಿ ಕುಳಿತುಕೊಂಡು ಇಡಿ ರಾಜ್ಯದ ಸಣ್ಣ ನೀರಾವರಿ ಇವೆಲ್ಲವನ್ನೂ ನೋಡಿಕೊಳ್ಳುವುದಕ್ಕೆ ಸಾಧ್ಯ ಇಲ್ಲವೇ ಎಂದು ಕೇಳುತ್ತೇನೆ. There must be some rationale behind it. One Chief Engineer minor irrigation can handle the whole administration.

ಈ ಹೇಮಾವತಿ ಪ್ರಾಜೆಕ್ಟ್ ಬಗ್ಗೆ the total budget provision for the whole zone is Rs.80 crores. ಇದರಲ್ಲಿ 20 ಕೋಟಿ ರೂಪಾಯಿಗಳು ವರ್ಕ್‌ಲೋಡ್ ಇರಬೇಕು ಎಂದು ತಜ್ಞರು ಹೇಳಿದ್ದಾರೆ. ನಾನು ಹೇಳುತ್ತೇನೆ ಇವುಗಳನ್ನು ಶಾಸ್ತ್ರೀಯವಾಗಿ ಮಾಡುವು

ದಕ್ಕೆ ಸಾಧ್ಯವಾದರೆ ಮಾಡಿ. ಇನ್ನು ಈ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೂ ಸಹ ಒಬ್ಬರು ಚೀಫ್ ಇಂಜಿನಿಯರ್‌ರವರನ್ನು ಕೊಟ್ಟಿದ್ದಾರೆ. ಈ ಬಗ್ಗೆ ಹೇಳುತ್ತಾ ಹೋದರೆ ಬೇಕಾದಷ್ಟು ಹೇಳ ಬಹುದು. Many posts of Chief Engineers have been created. These are things to be borne in mind while Government thinks of re-organizing the Department.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ಮಾನಿಟರಿ ವರ್ಕ್‌ಲೋಡ್ ಒಂದನ್ನೇ ತೆಗೆದು ಕೊಳ್ಳತಕ್ಕಂಥಾದ್ದು ಇಲ್ಲ. ಈ ಕೆಲಸಗಳು ತೀವ್ರಗತಿಯಿಂದ ಆಗತಕ್ಕಂಥಾದರಲ್ಲಿ ಈ ಕೆಲಸಗಳ ಸ್ವಭಾವವನ್ನು ನೋಡಿಕೊಂಡು, ಬೇರೆ ಬೇರೆ ಕೆಲಸಗಳಿಗೆ ಎಷ್ಟೆಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ ಅದನ್ನೂ ನೋಡಿಕೊಂಡು, ಶಾಸ್ತ್ರೀಯ ಆಧಾರದ ಮೇಲೆ ಈ ಕೆಲಸಗಳು ತ್ವರಿತ ವಾಗಿ ಆಗಬೇಕು ಎಂಬುದನ್ನು ನಾನು ತತ್ವಶಃ ಒಪ್ಪುತ್ತೇನೆ. ಆದರ ಅವಶ್ಯಕತೆ ಏನು ಎಂಬು ದನ್ನು ನಾನು ಆಗಲೇ ಹೇಳಿದ್ದೇನೆ. ಮತ್ತೆ ನಾನು ಅದನ್ನು ಒಪ್ಪಿಕೊಳ್ಳುತ್ತಾ 'ಈ ಕೆಲಸವನ್ನು ಶಾಸ್ತ್ರೀಯ ಆಧಾರದ ಮೇಲೆ ಮಾಡಬೇಕೆಂದು ಅವರು ಏನು ಹೇಳಿದ್ದಾರೆ ಅದು ಪರಿಶೀಲನಾರ್ಹ ವಾದುದ್ದು' ಎಂದು ನಾನು ಖಚಿತವಾಗಿ ಹೇಳುತ್ತೇನೆ. ಮತ್ತೆ ಈ ಸೂಪರಿಂಟೆಂಡೆಂಟ್ ಇಂಜಿ ನೀಯರ್‌ಗಳಿಗೆ ಬಡ್ತಿ ಕೊಟ್ಟು ಚೀಫ್ ಇಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥ ವಿಷಯದ ಬಗ್ಗೆ ಇಲ್ಲಿ ಚರ್ಚೆ ಮಾಡಿದ್ದಾರೆ. ಈ ಬಗ್ಗೆ ಒಂದು ಸ್ಕ್ರೀನಿಂಗ್ ಕಮಿಟಿ ಇದೆ. ಈ ಸ್ಕ್ರೀನಿಂಗ್ ಕಮಿಟಿಯವರು 8 ಜನರ ಒಂದು ಪಟ್ಟಿಯನ್ನು ಮಾಡಿ ಕಳಿಸಿದ್ದಾರೆ. ಅದನ್ನು ಇಲ್ಲ ಎಂದು ನಾನು ಹೇಳುವುದಿಲ್ಲ. ಇದಾದಮೇಲೆ ನಾವು ಮೊದಲೇ 14 ಜನರಿಗೆ ಪ್ರಮೋಷನ್ ಕೊಟ್ಟಿ ದ್ದೇವೆ. ಅನಂತರ 4 ಜನರಿಗೆ ಪ್ರಮೋಷನ್ ಕೊಟ್ಟು, ಒಟ್ಟು 18 ಜನರ ಪ್ರಮೋಷನ್ ಎಲಿಜಿ ಬಲಿಟಿ ಲಿಸ್ಟನ್ನು ಮಾಡಿದ್ದೇವೆ. ಒಟ್ಟಿನಲ್ಲಿ ಹೇಳುವುದಾದರೆ ಒಟ್ಟು 18 ಜನಕ್ಕೆ ಪ್ರಮೋಷನ್ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು 'ಆಡಳಿತದ ದೃಷ್ಟಿಯಿಂದ ಮತ್ತು ಸಾಮಾಜಿಕ ನ್ಯಾಯ ದೃಷ್ಟಿಯಿಂದ ಯಾವ ಕೆಲಸವನ್ನು ಮಾಡಿದರೂ, ಅದು ಸ್ವಾಗತಾರ್ಹ, ಎಂದು ಅವರು ಹೇಳಿ ದ್ದಾರೆ. ಇದು ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ತರಹ ಎಲ್ಲಾ ದೇಶಗಳಲ್ಲೂ ಇದೆ, ಕೆನಡಾ ದೇಶದಲ್ಲೂ ಇದೆ. ಈ ಬಗ್ಗೆ ನಾನು ಅನೇಕ ಉದಾಹರಣೆಗಳನ್ನು ಉದಾಹರಿಸಬಲ್ಲೆ ಆದರೆ ಅಷ್ಟು ದೂರ ಹೋಗುವುದು ಬೇಡ. ಈ ಬಗ್ಗೆ ನಾವು ಒಂದು ತೀರ್ಮಾನವನ್ನು ತೆಗೆದು ಕೊಂಡಿದ್ದೇವೆ ಆಡಳಿತದ ದೃಷ್ಟಿಯಿಂದ ಮತ್ತು ಸಾಮಾಜಿಕ ದೃಷ್ಟಿಯಿಂದ ನ್ಯಾಯ ದೊರಕ ಬೇಕು ಎಂದು ಇಂಜಿನಿಯರ್ ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳಿಗೆ ಬಡ್ತಿಯನ್ನು ಕೊಟ್ಟಿದ್ದೇವೆ. ಮೊದಲು ಚೀಫ್ ಇಂಜಿನಿಯರ್ ವೇಕೆನ್ಸಿ 14 ಇತ್ತು, ನಂತರ 4 ವೇಕೆನ್ಸಿ ಸೇರಿ 18 ವೇಕೆನ್ಸಿ ಆಯಿತು. 29 ಸೂಪರಿಂಟೆಂಡೆಂಟ್ ಇಂಜಿನಿಯರ್ ಎಕ್ಸಿಸ್ಟಿಂಗ್ ವೇಕೆನ್ಸಿಗಳು ಇತ್ತು. ಇತ್ತೀಚೆಗೆ ಎಲ್ಲಾ ಸೇರಿ 46 ಜನರಿಗೆ ಪ್ರಮೋಷನ್ ಕೊಟ್ಟಿದ್ದೇವೆ. 52 ಜನರಿಗೆ ಎಕ್ಸಿ ಕ್ಯುಟಿವ್ ಇಂಜನಿಯರ್‌ಗಳಾಗಿ ಪ್ರಮೋಷನ್ ಕೊಟ್ಟಿದ್ದೇವೆ. ಸುಮಾರು 25-30 ವರ್ಷಗಳಿಂದ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಕೆಲಸಮಾಡಿಕೊಂಡು ಬಂದು ಯಾವುದೇ ಬಡ್ತಿ ಇಲ್ಲದೇ ಇದ್ದಂತಹ ವರಿಗೂ ಸರ್ಕಾರ ಬಡ್ತಿಯನ್ನು ಕೊಟ್ಟಿದೆ. ಎಲ್ಲಿಂದ ಎಲ್ಲಿಗೆ ನೋಡಿದರೂ ಈ ಇಲಾಖೆಯಲ್ಲಿ ಕಾರ್ಯಚಟುವಟಿಕೆಗಳು ಚೆನ್ನಾಗಿ ನಡೆಯುತ್ತಿವೆ. There is full of animation. ಮತ್ತೆ ಸ್ಕ್ರೀನಿಂಗ್ ಕಮಿಟಿಯವರು ಕಳಿಸಿರತಕ್ಕಂಥ 8 ಜನರ ಪಟ್ಟಿಯಲ್ಲಿ 5 ಜನರನ್ನು ಸೆಲೆಕ್ಟ್ ಮಾಡಿದ್ದೇವೆ. ಅವರನ್ನು ಸೆಲೆಕ್ಟ್ ಮಾಡುವ ಬಗ್ಗೆ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಏನೆಂದರೆ ಸ್ಯೂಟೆಬಲಿಟಿಯನ್ನು ಆಧಾರವಾಗಿಟ್ಟುಕೊಂಡು, ಸೀನಿಯಾರಿಟಿ ಜೊತೆಗೆ ಅರ್ಹತೆಯನ್ನೂ ಕೂಡ ಗಮನದಲ್ಲಿಟ್ಟುಕೊಂಡು ಈ ಕೆಲಸವನ್ನು ಮಾಡಬೇಕೆಂದು ತೀರ್ಮಾನವಾಗಿದೆ.

ಶ್ರೀ ಎಚ್.ಡಿ. ದೇವೇಗೌಡ.—ಸ್ಯೂಟೆಬಲಿಟಿಯನ್ನು ಹೇಗೆ ಅಳತೆ ಮಾಡುತ್ತೀರಿ? I would like to pose a hypothetical question. Suppose a corrupt PWD Minister sits in that place. ಒಬ್ಬನಿಗೆ 50,000 ರೂಪಾಯಿಗಳು ಸೂಟೆಬಲಿಟಿ ಇರುತ್ತದೆ. ಇನ್ನೊಬ್ಬನಿಗೆ 25 ಸಾವಿರ ರೂಪಾಯಿಗಳ ಸ್ಯೂಟೆಬಲಿಟಿ ಇರುತ್ತದೆ ಎಂದು ಇಟ್ಟುಕೊಳ್ಳಿ, ಆಗ

ಏನು ಮಾಡಬೇಕು? The suitability also must be based on certain norms. If you fix certain guidelines, I have no objection. ಆದರೆ ನಾನು ನಿಮ್ಮ ಪ್ರಾಮಾಣಿಕತೆಯ ಬಗ್ಗೆ ಹೇಳುತ್ತಾ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—That danger is also there. ಲಾಕ್ ಎಂಬ ಮಹನೀಯನು ಹಾನೆಸ್ಟಿ ಮತ್ತು ಮೊರಾಲಿಟಿ ಬಗ್ಗೆ ಹೇಳಿದ್ದಾರೆ. Mr. lock has said that honesty and morality are capable of not only demonstration, but capable of mathematics also ಒಬ್ಬ ಮಂತ್ರಿಯಾಗಿ ಒಂದು ವರ್ಷದಲ್ಲಿ ಟ್ರಾನ್ಸಾಕ್ಷನ್ ಮಾಡುತ್ತಾರೆಂದರೆ These demonstrations may be misleading but they may be upheld by an individual or a group of individuals. It is all capable of not only demonstration but also mathematics. ಒಟ್ಟಿನಲ್ಲಿ ನಾನು ಅಷ್ಟು ದೂರ ಹೋಗುವುದಿಲ್ಲ. ಅವರ ಒಂದೊಂದು ಮಾತನ್ನೂ ಹೇಳಿಕೊಂಡು ಹೋದರೆ ಸಂಜೆಯಾದರೂ ಈ ಡಿಬೇಟ್ ಮುಗಿಯುವುದಿಲ್ಲ ಆಮೇಲೆ ಈ ಸಿ ಆರ್.ಎಸ್ ಕಾನ್ಫಿಡೆನ್ಸಿಯಲ್ ರಿಕಾರ್ಡ್ಸ್ ಬಗ್ಗೆ ಈ ಮನೆಯಲ್ಲಿ ಚರ್ಚೆಯಾಗಿದೆ. ನಮ್ಮ ಹತ್ತಿರ ಬಂದು ಅಧಿಕಾರಿಗಳು ಪ್ರತ್ಯೇಕವಾಗಿ ಚರ್ಚೆಮಾಡಿದ್ದಾರೆ. ಈ ಬಗ್ಗೆ 'ಮಂತ್ರಿಗಳು ರಾಗದ್ವೇಷವಿಲ್ಲದೆ ಕೆಲಸಮಾಡುತ್ತಾರೆಂದು ಹೇಳುತ್ತಾರೆ, ಆದರೆ ನೀವು ಕೂಡ ಪಕ್ಷಪಾತ ಮಾಡುತ್ತೀರಿ'' ಎಂದ ಹೇಳತಕ್ಕಂಥಾದ್ದನ್ನು ನಾನು ಎಷ್ಟೋ ಸಂದರ್ಭಗಳಲ್ಲಿ ಕೇಳಿದ್ದೇನೆ. ಹಾಗೆ ಆಗುತ್ತದೆ ಎನ್ನತಕ್ಕಂಥಾದ್ದರ ಬಗ್ಗೆ ನಾನು ದೊಡ್ಡದಾಗಿ ಉಪನ್ಯಾಸ ಮಾಡಬೇಕಾದ್ದು ಇಲ್ಲ ಇದು ಈ ಮಾನ್ಯ ಸಭೆಯ ಸದಸ್ಯರಿಗೂ ಚೆನ್ನಾಗಿ ಅನುಭವ ಇದೆಯೆಂದು ಹೇಳುತ್ತೇನೆ. ಆಮೇಲೆ ಈ ಸಿ.ಆರ್.ಎಸ್. ಬಗ್ಗೆ ಕಂಪಾರಿಟಿವ್ ಸ್ಟಡಿಮಾಡಿ, ಕ್ಯಾಬಿನೆಟ್‌ನಲ್ಲಿ ಒಂದು ಡಿಸಿಷನ್ ತೆಗೆದುಕೊಂಡಮೇಲೆ ಈ 6 ತಿಂಗಳ ಕಾಲಾವಧಿ ಇರತಕ್ಕಂಥಾದ್ದು ಆರ್ಬಿಟ್ರರಿಯಾಗಿ ಕಾಣುತ್ತದೆ. ಮಾನ್ಯ ದೇವೇಗೌಡರು ಇದನ್ನೂ ಕೂಡ ಪ್ರಸ್ತಾಪಮಾಡಿದ್ದಾರೆ. ಆದರೆ ಕೇಂದ್ರಸರ್ಕಾರದಲ್ಲಿ 2-3 ವರ್ಷ ಒಬ್ಬನಿಗೆ ನಿವೃತ್ತಿ ಹೊಂದುವುದಕ್ಕೆ ಕಾಲಾವಧಿ ಇದ್ದರೆ ಅಂತಹವರನ್ನು ಇಲಾಖೆಯ ಮುಖ್ಯಾಧಿಕಾರಿಗಳನ್ನಾಗಿ ತೆಗೆದುಕೊಳ್ಳಕೂಡದು ಎಂದು ಅಲ್ಲಿ ಒಂದು ನಿಯಮಾವಳಿ ಇದೆ. ಇಲ್ಲಿ ಏನಾಗುತ್ತದೆ ಎಂದರೆ 6 ತಿಂಗಳ ಕಾಲಾವಧಿಯಲ್ಲಿ ಆತನು ಮುಖ್ಯ ಇಂಜಿನಿಯರ್ ಆಗಿ ಇಲಾಖೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ಒಂದು ರೌಂಡ್ ಹೋಗಿ ಬರುವುದರೊಳಗೆ 6 ತಿಂಗಳು ಮುಗಿದಿರುತ್ತದೆ. ಇನ್ನು ಕೆಲವರು ಮೈನಾರಿಟೀಸ್‌ಗೆ ಅನ್ಯಾಯವಾಗಿದೆ ಎಂದು ಮಾನ್ಯಸದಸ್ಯರು ಹೇಳಿದರು. ಈ ಬಗ್ಗೆ ಒಂದು ಕೇಸ್ ನನ್ನ ಗಮನದಲ್ಲಿದೆ.

ಕೇಂದ್ರಸರ್ಕಾರದವರು ಜೇಷ್ಠತೆಯ ಅಂತಿಮ ಪಟ್ಟಿಯನ್ನು ಪ್ರಚುರಪಡಿಸಿದಾಗ ಅದರಲ್ಲಿ ಆ ಒಂದು ಹೆಸರು ಬಿಟ್ಟುಹೋಗಿದೆ. ಆ ಬಗ್ಗೆ ರೆಪ್ರಸೆಂಟೇಷನ್ ಕೂಡ ಸರ್ಕಾರಕ್ಕೆ ಬಂದಿದೆ. ಇನ್ನೊಂದು ಕೇಸ್‌ನಲ್ಲಿ ಇನ್ನೊಬ್ಬ ಮೈನಾರಿಟಿ ಕಮ್ಯುನಿಟಿಯವರು ಬಿಟ್ಟುಹೋಗಿರುವುದು ನನ್ನ ಗಮನಕ್ಕೆ ಬಂದಿದೆ. ಒಂದು ಕಂಪಾರಟೀವ್ ಸ್ಟಡಿ ಮಾಡಿ best among the lot ಸೆಲೆಕ್ಷನ್ ಮಾಡಿದಾಗ many are called, few are chosen - I can't help - ಎಂದು ಹೇಳಿದರೆ ಅದು ಸ್ವಲ್ಪಮಟ್ಟಿಗೆ ಆರ್ಬಿಟ್ರರಿ ಆಗುತ್ತದೆ ಎಂದು ಅವರು ಹೇಳಿರತಕ್ಕದ್ದನ್ನು ನಾನು ಒಪ್ಪುತ್ತೇನೆ. ಸಾಮಾಜಿಕ ನ್ಯಾಯ ದೊರಕಿಸುವಾಗ ಕೆಲವು ಸಂದರ್ಭಗಳಲ್ಲಿ ಕೆಲವು ವಿಷಯಗಳನ್ನು ಕಡೆಗಣಿಸಬೇಕಾಗುತ್ತದೆ. ಈಗಲೂ ಕೂಡ there is scope for review. ಈಗ ಬಿಟ್ಟಿದ್ದರೆ ಅವರನ್ನು ಮತ್ತೆ ಸ್ಕ್ರೀನ್ ಮಾಡುವುದಕ್ಕೂ ಕೂಡ ಅವಕಾಶ ಇದೆ ಎಂದು ಹೇಳುತ್ತೇನೆ. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದ್ದಾರೆ. 41 ಜನರಿಗೆ ನಾವು ಪ್ರೊಮೋಷನ್ ಕೊಟ್ಟಿದ್ದೇವೆ, ಮತ್ತು 5 ಜನರನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ. ಆ ಒಂದು ಸರಪಳಿಯಲ್ಲಿ ಒಟ್ಟು 5 ಜನರೂ ಸೇರಿ ಒಟ್ಟು 46 ಜನ ಆಯಿತು. ಮತ್ತೆ 57 ಜನರನ್ನು ಸ್ಕ್ರೀನ್ ಮಾಡಿಸಿದೆವು. ಅದರಲ್ಲಿ ಎರಡು—ಮೂರು ಜನರ ರಿಪೋರ್ಟ್ ಚೆನ್ನಾಗಿಲ್ಲದೇ ಇರುವುದರಿಂದ ನಾವು ಹೀಗೆ ವರ್ಟಿಕಲ್ಲಾಗಿ ಮಾಡಬೇಕಾಗಿ ಬಂತು. ಯಾವ ತಾರೀಖು ಆರ್ಡರ್‌ಗಳನ್ನು ಇಷ್ಯೂ ಮಾಡಿದ್ದೇವೆ ಎಂಬ ಬಗ್ಗೆ ಮಾನ್ಯ ದೇವೇಗೌಡರು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—30ನೇ ತಾರೀಖು ಏಪ್ರಿಲ್ ರಾತ್ರಿ ಇಷ್ಯೂ ಮಾಡಿದ್ದೀರಿ,

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಏಪ್ರಿಲ್ 30ನೇ ತಾರೀಖಿನ ದಿವಸ 41+5 ಒಟ್ಟು 46 ಜನರ ಬಗ್ಗೆ ಆರ್ಡರ್ ಮಾಡಿದೆ. 52 ಅಸಿಸ್ಟೆಂಟ್ ಇಂಜನಿಯರುಗಳನ್ನು ಎಗ್ಸಿಕ್ಯೂಟೀವ್ ಇಂಜನಿಯರಾಗಿ ಮಾಡತಕ್ಕದ್ದು ಅದರ ಜೊತೆಗೆ 22 ಟ್ರಾನ್ಸ್‌ಫರ್‌ಗಳು ಒಟ್ಟು 74 ಆರ್ಡರ್‌ಗಳನ್ನು ಒಂದೇ ದಿವಸ ಹೊರಡಿಸಿವೆ. 30ನೇ ತಾರೀಖು ಏಪ್ರಿಲ್ ಶನಿವಾರ ಮಧ್ಯಾಹ್ನ 4-30ರಲ್ಲಿ ಇವತ್ತೇ ಆರ್ಡರ್ ಇಷ್ಯೂ ಮಾಡಿ ಎಂದು ಫೈಲ್ ಮೇಲೆ ಬರೆದು ಕಳಿಸಿದೆ. ಅದರಲ್ಲಿ ಪೋಸ್ಟಿಂಗ್ಸ್‌ನಲ್ಲಿ ಕೆಲವು ವ್ಯತ್ಯಾಸಗಳು ಬಂದಿತ್ತು. ಅದಕ್ಕೋಸ್ಕರ 5—5-15ರಲ್ಲಿ ಶನಿವಾರ ಸಂಜೆ ಮತ್ತೆ ಸೆಕ್ರೆಟೇರಿಯೇಟ್‌ಗೆ ಫೈಲ್ ಕಳಿಸಿಕೊಟ್ಟೆ, ಅದರಲ್ಲಿ ನಾನು 'May be issued today' ಎಂದು ಬರೆದಿದ್ದೆ. ಸಂಬಂಧಪಟ್ಟ ಅಧಿಕಾರಿಗಳು ಕೆಲವು ವಿಷಯಗಳನ್ನು ಹೇಳಿದರು. ಅದು ಎಲ್ಲಾ ನನಗೆ ಜ್ಞಾಪಕವಿಲ್ಲ. ನನಗೆ ಅದು ಗೊತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ —ಅನೇಕ ವಿಷಯಗಳು ತಮಗೆ ಗೊತ್ತಾಗುವುದಿಲ್ಲ. ನಿಮಗೆ ಗೊತ್ತಿದ್ದರೂ ಕೂಡ ಹೇಳುವುದಕ್ಕಾಗುವುದಿಲ್ಲ. You cannot express it, that is the problem. ನಿಮ್ಮ ಜಾಗದಲ್ಲಿ ನಾನು ಇದ್ದರೂ ಹಾಗೇ ಮಾಡಬೇಕಾಗುವುದು.

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ —ನಾವು ಕೆಲವು ವೇಳೆ ತಪ್ಪಕ್ಕೂ ರಾಯಲ್ಲಾಗಿ ಇರಬೇಕಾಗುತ್ತದೆ. ನಾವು ಈ ವಿಷಯಗಳಲ್ಲಿ ಹೆಚ್ಚಿಗೆ ಮಾತನಾಡಿದರೆ ಪ್ರಯೋಜನವಿಲ್ಲ ಮಾನ್ಯ ದೇವೇಗೌಡರ ಮನೆಯಲ್ಲಾಗಲಿ. ಶಂಕರೇಗೌಡ ಪಾಟೀಲರ ಮನೆಯಲ್ಲಾಗಲಿ ಒಂದು ಸಮಾರಂಭ ನಡೆದರೆ ಜಾಸ್ತಿ ಹೊತ್ತು ಕೆಲಸ ಮಾಡಬೇಕಾಗುತ್ತದೆ. ಹಾಗೆಯೇ ಈ ಇಲಾಖೆಯಲ್ಲಿ ಬೇಗ ಕೆಲಸ ಆಗಬೇಕಾದುದರಿಂದ ಹೆಚ್ಚು ಹೊತ್ತಾದರೂ ಆರ್ಡರ್ ಇಷ್ಯೂ ಮಾಡಬೇಕಾಗಿ ಬಂತು. ನಮ್ಮ ಅಧಿಕಾರಿಗಳು, ಮಂತ್ರಿಗಳು ಆರ್ಡರ್ ಮಾಡಿದ್ದಾರೆ ಅದನ್ನು ತಕ್ಷಣ ಮಾಡಬೇಕು. ನಾಳೆ ಭಾನುವಾರ ಬರುತ್ತದೆ ಎಂಬ ದೃಷ್ಟಿಯಿಂದ ಸಂಜೆಯಾದಮೇಲೆ ಆರ್ಡರ್ ಇಷ್ಯೂ ಮಾಡಿದ್ದಾರೆ. ಆದ್ದರಿಂದ ನಾನು ಅವರಿಗೆ ಈ ಸಭೆಯ ಮುಖೇನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

SRI H. D. DEVEGOWDA.—I must compliment those officers.

SRI M. MALLIKARJUNASWAMY.—I too join in complimenting. ಸಂಜೆ 5-15ಕ್ಕೆ ಕಳುಹಿಸಿದ್ದು 72 ಆರ್ಡರ್ ಇಷ್ಯೂ ಆಗಬೇಕಾದುದರಿಂದ ವಿಳಂಬವಾಯಿತು.

ಶ್ರೀ ಎಚ್. ಡಿ. ದೇವೇಗೌಡ.—ಎಸ್.ಇ.ಗಳಿಗೆ ಸಾಮಾಜಿಕ ನ್ಯಾಯ ದೊರಕಿಸುವುದಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರಜಾಪ್ರಭುತ್ವ ಎಂಬ ಮಾತಿನಲ್ಲಿ Socialism' Secularism and Social justice......

SRI H. D. DEVEGOWDA.—You said vertically.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—1961ನೇ ಇಸವಿಯಿಂದ ಈಚೆಗೆ ಎರಡು ಬ್ಯಾಚಸ ಲೋಕಸೇವಾ ಆಯೋಗದ ಮುಖಾಂತರ ಅಸಿಸ್ಟೆಂಟ್ ಇಂಜನಿಯರುಗಳ ನೇಮಕ ಏನು ಮಾಡಿದ್ದಾರೆ ಅದನ್ನು ಅವತ್ತಿನ ದಿವಸ ಮಾಡಿದ್ದರಿಂದ cast minority, national minority, Scheduled Caste, Scheduled Tribes ಎಲ್ಲರೂಕ ಕೂಡ ಬರುವುದಕ್ಕೆ ಸಾಧ್ಯವಾಯಿತು ಎಂಬ ಮಾತನ್ನು ಸಂತೋಷದಿಂದ ಈ ಸಭೆಗೆ ಹೇಳಬಯಸುತ್ತೇನೆ. 6 ಜನ ಷೆಡ್ಯೂಲ್ಡ್ ಕ್ಯಾಸ್ಟ್ ಷೆಡ್ಯೂಲ್ಡ್ ಟ್ರೈಬ್‌ನಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರುಗಳಾಗಿ ಬಂದಿದ್ದಾರೆ. ಈ ವಿಷಯದಲ್ಲಿ ಮಾನ್ಯ ಸದಸ್ಯರಾದ ತಾವುಗಳೂ ಕೂಡ ಹರ್ಷ ಪಡುತ್ತೀರಿ ಎಂದು ತಿಳಿದುಕೊಂಡಿದ್ದೇನೆ ಮತ್ತು ಡೈರೆಕ್ಟ್ ರಿಕ್ರೂಟ್‌ಮೆಂಟ್ ಈ ವಿಷಯವಾಗಿ ಹೇಳುತ್ತಾ ಲೋಕಸೇವಾ ಆಯೋಗದಿಂದ ನೇರವಾಗಿ ಅಸಿಸ್ಟೆಂಟ್ ಇಂಜನಿಯರುಗಳನ್ನು ತೆಗೆದುಕೊಳ್ಳತಕ್ಕ ಪದ್ಧತಿ ಸರಿಯಿಲ್ಲ, ಮಾಡಿದರೂ ಕೂಡ ಶೇಕಡವಾರು ಇಟ್ಟುಕೊಂಡು ಮಾಡಬೇಕು ಎಂದು ಹೇಳಿದ್ದಾರೆ. ಪಕ್ಕದ ರಾಜ್ಯದಲ್ಲಿ ಯಾವರೀತಿ ಮಾಡುತ್ತಿದ್ದಾರೆ ಎಂಬ ವಿಷಯ ನನಗೆ ಗೊತ್ತಿದೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಒಪ್ಪತಕ್ಕ ಸಂದರ್ಭದಲ್ಲಿ I agree to disagree with the Leader of the Opposition in this connection ...ತಮಿಳುನಾಡಿನಲ್ಲಿ ಎಲ್ಲ ಇಲಾಖೆಗಳಲ್ಲೂ ಎಷ್ಟು ಖಾಲಿ ಜಾಗಗಳಿವೆ ಎಂಬುದನ್ನು 6 ತಿಂಗಳಿಗೆ ಮೊದಲೇ ಒಂದು ಫೋರ್‌ಕಾಸ್ಟ್

ತಯಾರು ಮಾಡಿ ಲೋಕಸೇವಾ ಆಯೋಗಕ್ಕೆ ಕಳುಹಿಸಿಕೊಡುತ್ತಾರೆ. ಕರ್ನಾಟಕದ ದೌರ್ಭಾಗ್ಯವೋ ಏನೋ ಇಲ್ಲಿ ಹಾಗೆ ಆಗಿಲ್ಲ. ಹಿಂದಿನಿಂದ ಯಾವ ಸರ್ಕಾರವೇ ಮಾಡಿರಲಿ ಹಂಗಾಮಿ ಬಡ್ತಿ ಕೊಡತಕ್ಕದ್ದು ತಪ್ಪು. ರಾಷ್ಟ್ರಪತಿ ಆಳ್ವಿಕೆ ಇದ್ದಂಥ ಕಾಲದಲ್ಲಿ ಅಂದಿನ ರಾಜ್ಯಪಾಲರಾಗಿದ್ದ ಧರ್ಮವೀರಾ ಅವರು ಆ ಬಗ್ಗೆ ಬಹಳ ಚೆನ್ನಾಗಿ ಉಲ್ಲೇಖಿಸಿದ್ದಾರೆ. ನಾನು ಅವರು ಏನು ಹೇಳಿದ್ದಾರೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಈ ಇಲಾಖೆಯಲ್ಲಿ ಎಷ್ಟು ಮಟ್ಟಿಗೆ ಮೆಸ್ ಆಗಿದೆ ಎಂಬುದನ್ನು ಬಹಳ ಚೆನ್ನಾಗಿ ಹೃದಯಂಗಮವಾಗಿ ಧರ್ಮವೀರ ಅವರು ಚಿತ್ರಿಸಿದ್ದಾರೆ. ಅದನ್ನು ಪೂರ್ತಿ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಮೆಸ್ ಆಗಿದೆ ಎಂಬುದನ್ನು ಮಾತ್ರ ಒಟ್ಟಿನಲ್ಲಿ ಹೇಳುತ್ತಿದ್ದೇನೆ. ಈ ಬಗ್ಗೆ ಕ್ಯಾಬಿನೆಟ್ ಉಪ-ಸಮಿತಿಯೊಂದನ್ನು ಮಾಡಿದೆ. ನಾನು ಲೋಕೋಪಯೋಗಿ ಮಂತ್ರಿಯಾಗಿರುವುದರಿಂದ ಅದರ ಅಧ್ಯಕ್ಷನಾಗಿದ್ದೇನೆ, ಮತ್ತು ಕಂದಾಯ ಮಂತ್ರಿಗಳು ಮತ್ತು ಇನ್ನೊಬ್ಬರು ಮಂತ್ರಿಗಳು ಆ ಉಪ-ಸಮಿತಿಯಲ್ಲಿದ್ದಾರೆ.

SRI M. H. JAYAPRAKAAH NARAYAN.—You have appointed nearly 800 Assistant Engineers without classification.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—780 ಅಥವಾ 800 ಇರಬಹುದು, ಸ್ವಲ್ಪ ಹೆಚ್ಚು ಕಡಿಮೆ 320 ಜನರನ್ನು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಬೇಕು ಎಂಬ ಪ್ರಶ್ನೆ ಬಂದಾಗ ಸರ್ಕಾರ ತಪ್ಪು ಮಾಡಲಿಲ್ಲವೇ ಎಂದು ಅನೇಕ ಸದಸ್ಯರು ಕೇಳಿದಾಗ ನಾನು ಆ ತಪ್ಪನ್ನು ಒಪ್ಪಿಕೊಂಡೆ. There is no harm in unclearning if you have learnt something wrong ಎಂದು ನಾನು ಅವತ್ತು ಉತ್ತರ ಕೊಡುತ್ತಾ ಹೇಳಿದ್ದುಂಟು. ಆದನ್ನು ನೀವೆಲ್ಲ ನಿನ್ನೆ ಮೊದಲಿನ ಹಾಗೆ ಮೊದಲಿಸಲಿಲ್ಲ. ಅನೇಕ ಮಂದಿ ಸದಸ್ಯರು ಲೆಟರ್ ಆಫ್ ಕಂಗ್ರಾಚ್ಯುಲೇಷನ್ ಬರೆದರು. ಮಾಜಿ ಮಂತ್ರಿಗಳು ಲೆಟರ್ ಆಫ್ ಕಂಗ್ರಾಚ್ಯುಲೇಷನ್ ಬರೆದರು.

ಶ್ರೀ ಹೆಚ್. ಡಿ. ದೇವೇಗೌಡ.—ಉಡ್‌ಬಿ ಅಳಿಯಂದಿರ ಲೆಟರ್ ನೋಡಿ.

SRI M MALLIKARJUNASWAMY.—You are referring to vocational section and also it is they who are responsible for the creation of public opinion also. ಆದ್ದರಿಂದ ನಾನು ಮಾನ್ಯ ದೇವೇಗೌಡರಿಗೆ ಮತ್ತು ಈ ಸಭೆಗೆ ತಿಳಿಸಬಯಸುವುದೇನೆಂದರೆ 320 ಹುದ್ದೆಗಳಿಗೆ 100 ಮಂದಿ ಸರ್ವೀಸ್‌ನಲ್ಲಿರುವವರನ್ನು ಮತ್ತು 80 ಮಂದಿಯನ್ನು ಓಪನ್ ಮಾರ್ಕೆಟ್‌ನಿಂದ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಗಿ ಅಷ್ಟು ಅಭ್ಯರ್ಥಿಗಳು ಈಗಾಗಲೇ ಪಿ.ಎಸ್.ಸಿ. ಮುಂದೆ ಹೋಗಿದ್ದಾರೆ. ಆ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಲು ಸರ್ವೀಸಿನಲ್ಲಿರುವ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ 45 ವರ್ಷಗಳು ಮತ್ತು ಬೇರೆಯವರಿಗೆ 40 ವರ್ಷಗಳು ಎಂದು ವಯೋಮಿತಿಯನ್ನು ಗೊತ್ತುಪಡಿಸಿದ್ದೇವೆ. ಅದೇ ರೀತಿ ಓಪನ್ ಮಾರ್ಕೆಟ್ಟಿನಿಂದ ತೆಗೆದುಕೊಳ್ಳುವಾಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ 37 ವರ್ಷಗಳು ಮತ್ತು ಬೇರೆಯವರಿಗೆ 33 ವರ್ಷಗಳು ಎಂದು ಮಾಡಿದ್ದೇವೆ. ಹೀಗೆ ಮೊದಲಿಗೆ ಒಟ್ಟು 180 ಮಂದಿ ಅಭ್ಯರ್ಥಿಗಳನ್ನು ತೆಗೆದುಕೊಳ್ಳುತ್ತೇವೆ; ಉಳಿದ 140 ವೇಕೆನ್ಸಿಯನ್ನು 6 ತಿಂಗಳ ಅಂತರದಲ್ಲಿ ಭರ್ತಿ ಮಾಡಬೇಕೆಂದು ಮಾಡಲಾಗಿದೆ. ಈ ತೀರ್ಮಾನವನ್ನು ತೆಗೆದುಕೊಂಡು ಈಗಾಗಲೇ 8 ತಿಂಗಳ ಮೇಲಾಯಿತು- ಅಂದರೆ ಸೆಪ್ಟಂಬರ್ 1ರಂದು ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಇದಕ್ಕೆ ಎಲ್ಲ ಮಾನ್ಯ ಸದಸ್ಯರು ಧನ್ಯವಾದಗಳನ್ನು ಹೇಳುತ್ತಾರೆಂದು ನಂಬಿದ್ದೇನೆ. ನಮ್ಮ ಕರ್ನಾಟಕದಲ್ಲಿ ಪ್ರೊಮೋಷನ್ ಕೊಡುವುದು ಮತ್ತು ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡಿಕೊಳ್ಳುವುದು ಕ್ರಮವಾಗಿ ಶೇಕಡ 60 : 40ರ ಪ್ರಮಾಣದಲ್ಲಿದೆ, ಆದರೆ ಈ ಡೈರೆಕ್ಟ್ ರೆಕ್ರೂಟ್‌ಮೆಂಟ್ ಮದ್ರಾಸ್‌ನಲ್ಲಿ 6 ಪರ್ಸೆಂಟ್ ಮತ್ತು ಇನ್ನು ಕೆಲವು ಕಡೆ 10 ಪರ್ಸೆಂಟ್ ಇದೆ. ನಮ್ಮ ಕರ್ನಾಟಕದಲ್ಲಿ ಮಾತ್ರ ಡೈರೆಕ್ಟ್ ರೆಕ್ರೂಟ್‌ಮೆಂಟ್ 33-1/3 ಭಾಗ ಮತ್ತು ಪ್ರೊಮೋಷನ್ 66-2/3 ಭಾಗ ಕೊಡಬೇಕೆಂದು ಇದೆ. ಅದನ್ನೇ ನಾವು ಆಧಾರವಾಗಿ ಇಟ್ಟುಕೊಂಡು ಈ ಹುದ್ದೆಗಳನ್ನು ಭರ್ತಿ ಮಾಡಬೇಕಾಗಿದೆ. ಇದನ್ನೇ ನಾನು ಸಾಮಾಜಿಕ ನ್ಯಾಯ ಎಂದು ಹೇಳತಕ್ಕದ್ದು. ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಇದೆ,

ಪಾರ್ಲಿಮೆಂಟರಿ ಡೆಮಾಕ್ರಸಿ ನಮ್ಮ ದೇಶದಲ್ಲಿ ಇರತಕ್ಕದ್ದು. ಡೆಮಾಕ್ರಸಿ ವಿಚಾರದಲ್ಲಿ ಹೇಳತಕ್ಕದ್ದು ಸುಲಭ, ಆದರೆ ಅದನ್ನು ಅನುಷ್ಠಾನಕ್ಕೆ ತರತಕ್ಕದ್ದು ಕಷ್ಟ. ಸಮಾಜವಾದ ಇನ್ನೂ ಕಷ್ಟ. ಅದಕ್ಕಿಂತಲೂ ಸೆಕ್ಯೂಲರಿಸಂ ಬಹಳ ಕಷ್ಟ. ನಾವು ಆ ದಾರಿಯನ್ನು ಹಿಡಿದು ಹೋಗುತ್ತಿದ್ದೇವೆ. ಮಾನ್ಯ ಕೊಣಂದೂರು ಲಿಂಗಪ್ಪನವರು ಸೋಷಿಯಲಿಸಂ ಮೇಲೆ ದೊಡ್ಡ ಭಾಷಣ ಮಾಡುತ್ತಾರೆ. ಅವರು 'Socialism is a Science of a new society and a vision of a new civilisation' ಎಂದು ಹೇಳುತ್ತಿರುತ್ತಾರೆ, ಆದ್ದರಿಂದ ಇದನ್ನು ಕಾರ್ಯತಃ ಆಚರಣೆಗೆ ತರತಕ್ಕದ್ದು ಬಹಳ ಕಷ್ಟ ಇದೆ. ಇದರ ಮೇಲೆ ಈ ಮನೆಯ ಒಳಗೆ ಮತ್ತು ಹೊರಗೆ ಬಹಳ ದೊಡ್ಡ ಚರ್ಚೆ ನಡೆದಿದೆ. ಈ ಬಗ್ಗೆ ಬ್ಯಾಕ್‌ವರ್ಡ್ ಕ್ಲಾಸ್‌ನವರು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರು ಚರ್ಚೆ ಮಾಡಿದ್ದಾರೆ. ಅದರಿಂದ ಷೆಡ್ಯೂಲ್ಡ್ ಕ್ಯಾಸ್ಟಿಗಿಂತ ಬ್ಯಾಕ್‌ವರ್ಡ್ ಕ್ಲಾಸಿಗೆ ಹೆಚ್ಚು ಹೆಚ್ಚು ಲಾಭವಾಗಿದೆಯೆಂದು ಹೇಳಬಯಸುತ್ತೇನೆ. 23 ವರ್ಷಕ್ಕೆ, 21 ವರ್ಷಕ್ಕೆ ಬಿ.ಇ. ಪಾಸ್ ಮಾಡುವವರು ಇದ್ದಾರೆ. 33 ವರ್ಷದವರೆಗೆ ಅಂದರೆ 10 ವರ್ಷ ಸರ್ವೀಸ್ ಆಗಿದ್ದರೂ ಸಹ ಡೈರೆಕ್ಟಾಗಿ ಅಪ್ಲೈ ಮಾಡುವುದಕ್ಕೆ ಅವಕಾಶ ಇದೆ. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ 13-14 ವರ್ಷದವರೆಗೆ ಅವಕಾಶ ಇದೆ? ಈ 320 ಹುದ್ದೆಗಳ ಪೈಕಿ ಷೆಡ್ಯೂಲ್ಡ್ ಕ್ಯಾಸ್ಟಿಗೆ ಮತ್ತು ಬ್ಯಾಕ್‌ವರ್ಡ್ ಕ್ಲಾಸಿಗೆ 100 ವೇಕನ್ಸೀಸ್ ರಿಜರ್ವ್ ಆದರೂ ಕೂಡ ಇನ್ನು ಉಳಿದ 220 ಹುದ್ದೆಗಳಿಗೆ ಅಪ್ಲೈ ಮಾಡುವುದಕ್ಕೆ ಬೇರೆಯವರಿಗೆ ಪೂರ್ಣ ಅವಕಾಶ ಇದೆ. ಇನ್ನೂ ಉಳಿದವರ ಗತಿ ಏನು ಎಂದು ಪ್ರಾಮಾಣಿಕವಾದ ಪ್ರಶ್ನೆಯನ್ನು ಮಾನ್ಯ ಸದಸ್ಯರು ಎತ್ತಿದ್ದಾರೆ. ಅದನ್ನು ಅಷ್ಟು ಸುಲಭವಾಗಿ ಒಂದು ಮಾತಿಗೆ ಒತ್ತುವುದಕ್ಕಾಗುವುದಿಲ್ಲ. ಅದಕ್ಕೆ ಏನಾದರೂ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ. ಬೆಳಗಾಂನಲ್ಲಿ ಹರಿಜನ ಜೂನಿಯರ್ ಇಂಜನಿಯರ್ ಒಬ್ಬರು ನೀವು ಮಾಡತಕ್ಕದ್ದು ಸರಿಯಲ್ಲ ಎಂದು ಹೇಳಿದರು. ಈಗಲೂ ಕೂಡ ಇಲ್ಲಿನ ಎಲ್ಲ ಇಂಜನಿಯರ್‌ಗಳು ಸಹ ಈ ತಿಂಗಳ 30ರ ಒಳಗೆ ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಸತ್ಯಾಗ್ರಹ ಮಾಡುತ್ತೇವೆಂದು ಹೇಳಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇನೆ. ಅದಕ್ಕೆ ಬೇರೆ ಮಾರ್ಗಗಳು ಇವೆ. ಬ್ಯಾಕ್‌ವರ್ಡ್ ಕ್ಲಾಸಸ್ಸಿಗೆ ಮತ್ತು ಷೆಡ್ಯೂಲ್ಡ್ ಕ್ಲಾಸಸ್ಸಿಗೆ ಪ್ರೊಮೋಷನಲ್ ಅಪರ್ಚುನಿಟೀಸನ್ನು ರಿಸರ್ವೇಷನ್ ಮಾಡುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ ಅದರ ಜೊತೆಗೆ ಇನ್ನೊಂದು ಮಾತನ್ನು ಹೇಳಬಯಸುತ್ತೇನೆ. ಇವರಿಗೆ ಒಂದು ರನ್ನಿಂಗ್ ಸ್ಕೇಲನ್ನು ಏಕೆ ಕೊಡಬಾರದು ? ಇಷ್ಟು ವರ್ಷ ಸರ್ವೀಸ್ ಆದಮೇಲೆ ಒಂದೊಂದು ಹುದ್ದೆಗೆ ಹೋಗುವಂತೆ ಮಾಡಬಹುದು. ಈ ಬೇಡಿಕೆಯನ್ನು ಇಟ್ಟಂತಹ ಸಂದರ್ಭದಲ್ಲಿ ಇಂಜಿನಿಯರ್ಸ್ ಅಸೋಷಿಯೇಷನ್ನಿಗೆ ಅಡ್ರೆಸ್ ಮಾಡುತ್ತಾ, ಅಸಿಸ್ಟೆಂಟ್ ಇಂಜಿನಿಯರ್ಸ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಆಗಿರುವವರು 18 ವರ್ಷದ ಹಳೆಯ ರಜ್ಜನ್ನು ಮರೆಯಬೇಕೆಂದು ಹೇಳುತ್ತೇನೆ. ಬೇರೆ ರಾಜ್ಯಗಳಲ್ಲಿ ಕೇವಲ 8-10 ಪರ್ಸೆಂಟ್ ಡೈರೆಕ್ಟಾಗಿ ರೆಕ್ರೂಟ್ ಮಾಡಿಕೊಳ್ಳುತ್ತಿರುವಾಗ ನಮ್ಮ ರಾಜ್ಯದಲ್ಲಿ 40 ಪರ್ಸೆಂಟಿಗಿಂತ ಹೆಚ್ಚಿನ ಅವಶ್ಯಕತೆ ಏನು ಇದೆ ? ನಾವು 40 ಪರ್ಸೆಂಟಿಗಿಂತ ಕಡಿಮೆ ಇಲ್ಲದಂತೆ ಅಸಿಸ್ಟೆಂಟ್ ಇಂಜನಿಯರ್ಸ್‌ಗಳನ್ನು ಪ್ರೊಬೇಷನರ್‌ಗಳಾಗಿ ತೆಗೆದುಕೊಂಡು ಹೋಗಬೇಕೆಂದು ಮಾಡಿದ್ದೇವೆ. ಅದನ್ನು ಮುಂದೆ ಬರತಕ್ಕ ಸರ್ಕಾರದವರು ಅನುಸರಿಸಿಕೊಂಡು ಹೋಗಬಹುದು. ಈ ಒಂದು ಸಂದರ್ಭದಲ್ಲಿ ಇಷ್ಟನ್ನು ಹೇಳುತ್ತಾ, ಮಾನ್ಯ ದೇವೇಗೌಡರು ಸೆಂಟ್ರಲ್ ಮೆಕ್ಯಾನಿಕಲ್ ಆರ್ಗನೈಸೇಷನ್ ವಿಷಯವಾಗಿ ಒಂದು ಪ್ರಶ್ನೆಯನ್ನು ಎತ್ತಿದ್ದಾರೆ. ಅದಕ್ಕೆ 35 ಕೋಟಿ ರೂಪಾಯಿಗಳ ಬಂಡವಾಳ ಹಾಕಲಾಗಿದೆ. ಎಂದೂ, ಹಿಂದೆ ಆ ಬಗ್ಗೆ ಯಾರೆದೋ ಒಂದು ಕಮಿಟಿ ರಿಪೋರ್ಟ್ ಇತ್ತು ಎಂದು ಕೇಳಿದ್ದೇನೆ. ಆ ಕಮಿಟಿ ರಿಪೋರ್ಟ್ ಜೊತೆಗೆ ಒಂದು ಅಫಿಷಿಯಲ್ ಕಮಿಟಿ ರಿಪೋರ್ಟ್ ರಾಮನಾಥನ್ ಎಂಬುವರದ್ದು ಇತ್ತು. If I remember aright, that is the name mentioned with regard to that particular report. ಅವರು ಕೂಡ ಈ ಬಗ್ಗೆ ಹೇಳಿದ್ದಾರೆ. ಇದು ಸಮರ್ಪಕವಾಗಿಲ್ಲ ಎಂದು ನಾನು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಇದರ ಕಡೆ ಗಮನ ಕೊಡಬೇಕೆಂದು ಅವರು ಹೇಳಿರತಕ್ಕದ್ದು ಮತ್ತು ಡಿಪ್ಲೊಮಾ ಹೋಲ್ಡರ್ಸ್ ಅಪಾಯಿಂಟ್‌ಮೆಂಟ್ ವಿಷಯ ಮತ್ತು ಅವರ ವಯೋಮಿತಿ ವಿಷಯ ಎಲ್ಲವನ್ನು ಚರ್ಚೆ ಮಾಡಿದ್ದೇನೆ. ಇನ್ನು ಅವರಲ್ಲಿ ನಿರುದ್ಯೋಗ ಸಮಸ್ಯೆ ಬಹಳವಾಗಿರುವುದರಿಂದ ವರ್ಕ್ ಚಾರ್ಜ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ವಯೋಮಿತಿಯನ್ನು ಹೆಚ್ಚಿಸಬೇಕೆಂದು ಹೇಳಿದ್ದೇನೆ. ಇನ್ನು ಸಾರ್ವಜನಿಕ ಆರೋಗ್ಯ ಇಲಾಖೆಗೆ

ಸಂಬಂಧಪಟ್ಟಂತೆ ಕೇವಲ ಜನಗಳ ಆಧಾರವನ್ನೇ ಇಟ್ಟುಕೊಂಡರೆ ಸಾಲುವುದಿಲ್ಲ, ಅದನ್ನು ಬದಲಾಯಿಸಬೇಕೆಂದು ಒಂದು ಮುಖ್ಯವಾದ ವಿಷಯವನ್ನು ಎತ್ತಿದ್ದಾರೆ.

Regarding water supply programme-implementation of orders thereon-in a circular dated 13th August 1974 it is stated : "that in view of the adoption of curtailed scheme in Malnad and other sparsely-populated area and where special circumstances warrant, Government may, however, relax the population creation"

3-30 P. M.

ಈ ಒಂದು ಅಜ್ಞೆಯನ್ನು ಸರ್ಕಾರದವರು ಹೊರಡಿಸಿದ್ದಾರೆ; ಎಂದು ನಾನು ಮಾನ್ಯ ಸದಸ್ಯರ ಗಮನಕ್ಕೆ ತೆಗೆದುಕೊಂಡುಬರುತ್ತೇನೆ. ಸರ್ಕಾರದವರು ಹಾಕಿರತಕ್ಕ ಪಂಪು ಸೆಟ್ಟುಗಳಲ್ಲಿ ನೂರಕ್ಕೆ 90ರಷ್ಟು ಕೆಟ್ಟುಹೋಗಿವೆ ಎಂದು ಹೇಳುವುದು ಸರಿಯಲ್ಲ ಎಂದು ಮಾನ್ಯ ಮಾರ್ಗದ ಮಲ್ಲಪ್ಪನವರು ಹೇಳಿ, ಸುಮಾರು 10 ಪರ್ಸೆಂಟ್ ಪಂಪುಗಳು ಕೆಟ್ಟು ಹೋಗಿರಬಹುದು ಎಂದು ಹೇಳಿದರು. ಇದರ ಬಗ್ಗೆ ನಾವು ಸರಿಯಾದ ಸರ್ವೆ ಮಾಡಿಸಬೇಕು. ಸರಿಯಾದ ಅಂಕಿಅಂಶಗಳು ಇಲ್ಲದೆ ನಾವು ನಿರ್ಧಾರವಾಗಿ ಹೇಳುವುದಕ್ಕೆ ಬರುವುದಿಲ್ಲ. ಇತ್ತೀಚೆಗೆ ಸುಧಾರಿಸಿದಂಥ ಸರಪಳಿ ಇರತಕ್ಕ ಪಂಪನ್ನು ಏನು ಹಾಕಿದ್ದಾರೆ ಅವು ಬಹುಮಟ್ಟಿಗೆ ಕೆಟ್ಟು ಹೋಗತಕ್ಕದ್ದು ಇರುವುದಿಲ್ಲ. ಏನಾದರೂ ಕೆಟ್ಟು ಹೋದರೆ ಗ್ರಾಮಾಂತರ ಪ್ರದೇಶದ ಮಕ್ಕಳು ಆಟವಾಡತಕ್ಕವರು, ಮತ್ತೆ ಸ್ಕೂಲು ಪಕ್ಕದಲ್ಲಿ ಪಂಪುಗಳು ಇದ್ದರೆ ಸ್ಕೂಲು ಮಕ್ಕಳು, ಊರಿನ ಹೊರಗಡೆ ಒಳ್ಳೆಯ ಜಲ ಬರುತ್ತದೆಂದು ಪಂಪು ಹಾಕ್ಕಿದ್ದರೆ, ದನ ಕಾಯುವ ಹುಡುಗರು ಇದನ್ನು ಜಗ್ಗಿ ಕೆಡಿಸಿರತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೆ ಇಲ್ಲ. ಈ ಪಂಪುಗಳ ಮೇಂಟ್‌ನೆನ್ಸನ್ನು ಸರ್ಕಾರದವರು ಮಾಡಬೇಕು ಎಂದು ಕೆಲವು ಸದಸ್ಯರುಗಳು ಹೇಳಿದ್ದಾರೆ. 1959ರಲ್ಲಿ ಪಂಚಾಯತಿ ರಾಜ್ಯ ಸಂಸ್ಥೆಗಳು ಇರಬೇಕೆಂದು ಒಂದು ಕಾನೂನು ಮಾಡಿ, ಅದರ ಮುಖೇನ ಈ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದು ಸುಮಾರು ಮೂವತ್ತು ವರ್ಷಗಳಾಗಿದ್ದರೂ ಅವು ಇನ್ನೂ ಕೂಡ ಅರ್ಥಿಕವಾಗಿ ಸಮರ್ಥವಾಗಿಲ್ಲ. ಸ್ಥಾನೀಕ ಸ್ವರಾಜ್ಯ ಸಂಸ್ಥೆಗಳು, ಪುರಸಭೆಗಳು, ಇವೆಲ್ಲಕ್ಕೂ ಕುಡಿಯುವ ನೀರಿನ ಸೌಲಭ್ಯಕ್ಕೆ ಹಣ ಕೊಡತಕ್ಕ ಶಕ್ತಿ ಇಲ್ಲ. ಇವುಗಳು ಡೆಮಾಕ್ರಟಿಕ್ ಮರದ ಟೆಂಡರ್ ಟ್ವಿಗ್ಸ್ ಇದ್ದ ಹಾಗೆ. ಇದು ಯೋಚನೆ ಮಾಡುವುದಕ್ಕೆ ಪರಿಶೀಲನಾರ್ಹವಾದುದು ಎಂದು ಮಾತ್ರ ನಾನು ಹೇಳುತ್ತೇನೆ. ಇದನ್ನು ನಾನು ಒಬ್ಬನೇ ಮಾಡತಕ್ಕದ್ದು ಅಲ್ಲ. ಹಣಕಾಸಿನ ಇಲಾಖೆಯವರು, ರೆವಿನ್ಯೂ ಇಲಾಖೆಯವರು, ಸಂಬಂಧಪಟ್ಟ ಮುನಿಸಿಪಾಲಿಟಿಯವರು, ಇವರೆಲ್ಲರೂ ಕೂತುಕೊಂಡು ಒಂದು ತೀರ್ಮಾನ ಮಾಡಬೇಕಾಗುತ್ತದೆ. ನಾವು ಒಟ್ಟು 1579 ಬಾವಿಗಳನ್ನು ತೆಗೆದುಕೊಂಡಿದ್ದೇವೆ. ಇವುಗಳಲ್ಲಿ 149 ಭಾವಿಗಳನ್ನು ಅರ್ಬನ್ ವಾಟರ್‌ಸಪ್ಲೈ ಬೋರ್ಡಿಗೆ ವರ್ಗಾಯಿಸಿ ಕೊಟ್ಟಿದ್ದೇವೆ. ಕಂಪ್ಲೀಟ್ ಆಗಿರತಕ್ಕ ಬಾವಿಗಳು 966, ಬ್ಯಾಲೆನ್ಸ್ 470, 149 ಬಾವಿಗಳಲ್ಲಿ ಇನ್ನೂ ಕೂಡ ಸರಿಯಾಗಿ ನೀರು ಇಲ್ಲ. ಇಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ನಾವು ಆಲ್ ಇಂಡಿಯಾದ ಅಂಕಿ ಅಂಶಗಳನ್ನು ತೆಗೆದುಕೊಂಡರೆ, ಸುಮಾರು 30 ಕೋಟಿ ಜನ ಒಂದಲ್ಲ ಒಂದು ರೀತಿಯಿಂದ ಕುಡಿಯುವ ನೀರು ಇಲ್ಲದೆ ಬಾಯಿಲೆಯಿಂದ ನರಳುತ್ತಿದ್ದಾರೆಂದು ನಾವು ತಿಳಿದಿದ್ದೇವೆ. ಶುದ್ಧ ನೀರನ್ನು ಒದಗಿಸತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಸ್ತೆಗಳ ವಿಚಾರದಲ್ಲಿ ಸರ್ಕಾರದವರು ಒಂದು ಆಜ್ಞೆಯನ್ನು ಮಾಡಿದ್ದಾರೆ. ಇದುವರೆಗೂ ಸುಮಾರು 28 ಕೋಟಿ ರೂಪಾಯಿಗಳ ಯೋಜನೆಯನ್ನು ಸರ್ಕಾರದವರು ಹಾಕಿಕೊಂಡು ಸುಮಾರು 12 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರುವುದು. ಆದ್ದರಿಂದ ರಸ್ತೆಗಳು ಎಷ್ಟರಮಟ್ಟಿಗೆ ಆಗಿವೆ ಎಂದು ನೋಡಬಹುದು. ಇದನ್ನು ನಾವು ಮೂರುವರ್ಷದಲ್ಲಿ ಮುಗಿಸುತ್ತೇವೆಂದು ಪಟ್ಟಿಯಲ್ಲಿ ಹಾಕಿಕೊಂಡಿದ್ದರೂ ಕೂಡ, ಈ ಬಗ್ಗೆ ಸರ್ಕಾರದವರು ಒಂದು ಹುಕುಂ ಮಾಡಿದ್ದರೂ ಕೂಡ, ಈವರೆಗೆ ಖರ್ಚು ಮಾಡಿರತಕ್ಕದ್ದು ಸುಮಾರು 12 ಕೋಟಿ ರೂಪಾಯಿಗಳು ಮಾತ್ರ.

ಶ್ರೀ ಎಸ್. ವೈ. ಪಾಟೀಲ್.—ಮುಂದೆ ತಾವು ಮಾಡುವುದು ಏನು ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾರ್ಗದ ಮಲ್ಲಪ್ಪನವರು ಆಗಲೇ ಹೇಳಿದ್ದಾರೆ. ಇದರ ಬಗ್ಗೆ ನಮ್ಮ ವಾರ್ಷಿಕ ವರದಿಯಲ್ಲಿ ಹೇಳಿದ್ದೇವೆ. ಇದಕ್ಕೆ ನಾವು ಒಂದು ಸೆಸ್ ಫಂಡ್ ಕ್ರಿಯೇಟ್ ಮಾಡಿದ್ದೇವೆ. ಇದರಿಂದ ಸಾಧ್ಯವಾದಷ್ಟು ಕೆಲಸಗಳನ್ನು ತೆಗೆದುಕೊಂಡು ಮಾಡುತ್ತೇವೆ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ತೆಗೆದುಕೊಂಡಿರತಕ್ಕ ರಸ್ತೆಗಳು ಯಾವ ಸ್ಥಿತಿಯಲ್ಲಿವೆ ಎನ್ನುವುದನ್ನು ನೀವೂ ನೋಡಿದ್ದೀರಿ. ಸುಮಾರು 850 ಲಕ್ಷ ರೂಪಾಯಿಗಳನ್ನು ಹೋದ ವರ್ಷ ರಸ್ತೆಗಳಿಗಾಗಿ ನಾವು ಇಟ್ಟುಕೊಂಡಿದ್ದೆವು. ಈ ಸಾರಿ 50 ಲಕ್ಷ ರೂಪಾಯಿಗಳು ಕಡಿಮೆಯಾಗಿ ಅದು 8 ಕೋಟಿ ರೂಪಾಯಿಗಳಿಗೆ ಬಂದಿದೆ. ಶುಗರ್ ಕೇನ್ ಸೆಸ್‌ನಿಂದ ಬರತಕ್ಕದ್ದು 1.26 ಕೋಟಿ ರೂಪಾಯಿಗಳು, ಇದರಲ್ಲಿ ಸುಮಾರು 75-76 ಲಕ್ಷ ರೂಪಾಯಿಗಳನ್ನು ಈ ರಸ್ತೆಗಳ ರಿಪೇರಿ ಕೆಲಸಕ್ಕಾಗಿ ಖರ್ಚುಮಾಡುತ್ತಿದ್ದೇವೆ. ಈ ಕೆಲಸವೂ ಕೂಡ ನಡೆಯುತ್ತಿದೆ. ಇನ್ನೂ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಸ್. ವೈ. ಪಾಟೀಲ್.—ತಾಲ್ಲೂಕು ಬೋರ್ಡ್ ರಸ್ತೆಗಳಿಗೆ ರಿಪೇರಿ ಮಾಡಲು ಅವರ ಹತ್ತಿರ ಒಂದು ಪೈಸಾ ಕೂಡ ಇಲ್ಲ. ಪಿಡಬ್ಲ್ಯೂಡಿ ಯವರು ಈ ರಸ್ತೆಗಳನ್ನು ತಮ್ಮ ಆಡಳಿತಕ್ಕೆ ಸೇರಿಸಿಕೊಂಡಿಲ್ಲ, ಈ ರೀತಿಯಾದರೆ ಅಲ್ಲಿ ಓಡಾಡತಕ್ಕ ಜನರ ಪರಿಸ್ಥಿತಿ ಏನು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಣವನ್ನು ನಾವು ಮಾಯ ಮಂತ್ರ ಮಾಡಿ ಸೃಷ್ಟಿ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಮಲ್ಲಪ್ಪನವರು ಹೇಳಿದ ಹಾಗೆ ಕೆಲಸಗಳು ಬಜೆಟ್ಟಿನಲ್ಲಿ ಸೇರಿದ್ದರೂ ಕೂಡ ಹಣ ಇಲ್ಲದಿದ್ದರೆ ಕೆಲಸ ಅಲ್ಲಲ್ಲೇ ನಿಂತು ಹೋಗುತ್ತದೆ ಒಂದೊಂದು ಕಡೆ ಅರ್ಧಂಬರ್ಧ ಕೆಲಸ ಮಾಡಿ ಬಿಟ್ಟಿರುತ್ತಾರೆ. ಅಂಥ ಪರಿಸ್ಥಿತಿಯೂ ಕೂಡ ಇಲ್ಲದಿಲ್ಲ. ಇದಕ್ಕೆ ಸೆಕ್ಟೋರಲ್ ಇಂಬ್ಯಾಲೆನ್ಸ್ ಆಗದ ಹಾಗೆ ಸರ್ಕಾರದವರು ನೋಡಿಕೊಳ್ಳಬೇಕು. ಆದ್ದರಿಂದಲೇ ಈ ಕ್ಷೇತ್ರದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದರೆ ಒಳ್ಳೆಯದು ಎಂದು ಅದನ್ನೂ ಕೂಡ ನಾವು ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ವೈ. ಪಾಟೀಲ್.—ತಾವು ಹೀಗೆ ಹಾರಿಕೆ ಉತ್ತರ ಕೊಟ್ಟರೆ ಜನತೆಯ ಪರಿಸ್ಥಿತಿ ಏನು? ಸ್ಪಷ್ಟವಾಗಿ ಇದನ್ನು ಮಾಡಲಿಕ್ಕೆ ಸಾಧ್ಯ, ಸಾಧ್ಯವಿಲ್ಲ ಎನ್ನುವುದನ್ನು ಹೇಳಿಬಿಟ್ಟರೆ ಅದು ಜನತಾ ಪಾರ್ಟಿಗೆ ಚಾರ್ಜ್ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಅದೂ ಜನತಾ ಸರ್ಕಾರ, ಇದು ಜನತಾ ಸರ್ಕಾರ. ಅಸೆಂಬ್ಲಿ ಮುಗಿದ ಮೇಲೆ ನಿಮ್ಮ ಜಿಲ್ಲೆಯಲ್ಲಿ, ಅಂದರೆ ಸಿಂಧಗಿ ತಾಲ್ಲೂಕಿನಲ್ಲಿ ಸಂಚಾರ ಮಾಡುತ್ತೇನೆ. ಅಲ್ಲಿ ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದಾರೆ, ರಸ್ತೆಗಳು ಯಾವ ಸ್ಥಿತಿಯಲ್ಲಿವೆ ಎನ್ನುವುದನ್ನು ನೋಡುತ್ತೇನೆ. ಮತ್ತೆ ಕೆಲವು ಸದಸ್ಯರು ಯಾರು ವಸೂಲುಬಾಜಿ ಹಚ್ಚುತ್ತಾರೋ ಅಂಥವರ ಕಡೆ ಹೆಚ್ಚು ಕೆಲಸಗಳು ಆಗಿವೆ ಎನ್ನುವ ಮಾತುಗಳನ್ನು ಹೇಳಿದರು. 3-4 ತಾಲ್ಲೂಕುಗಳಲ್ಲಿ ಹೆಚ್ಚು ಕೆಲಸವಾಗಿದೆ, ಅರ್ಥಸಚಿವರ ತಾಲ್ಲೂಕಿನಲ್ಲಿ ಹೆಚ್ಚು ಕೆಲಸವಾಗಿದೆ, ಪಿಡಬ್ಲ್ಯೂಡಿ ಇಲಾಖೆ, ಪಕ್ಷದ ಇಲಾಖೆಯಾಗಿ ಕೆಲಸ ಮಾಡುತ್ತಿದೆ ಎಂದು ಮಾನ್ಯಸದಸ್ಯರಾದ ಸತ್ಯನಾರಾಯಣ ಸಿಂಗ್ ಅವರು ಹೇಳಿದರು. ಇಂಥ ಪರಿಸ್ಥಿತಿಗೆ ನಮ್ಮ ಇಲಾಖೆಗೆ ಹೋಗದೆ ಇದ್ದಹಾಗೆ ನೋಡಿಕೊಳ್ಳುತ್ತೇವೆ.

ನಮ್ಮಲ್ಲಿ ಇನ್ನೂ ದೊಡ್ಡ ದೊಡ್ಡ ಪ್ರೋಗ್ರಾಂಗಳು ಇವೆ. ಡಿ ಪಿ ಎ ಪಿ ಪ್ರೋಗ್ರಾಂ ಇದೆ.

ಶ್ರೀ ಎಸ್. ವೈ. ಪಾಟೀಲ್.— ಇದನ್ನೂ ಸಹ ನೀವೆ ತೆಗೆದುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕ ಸಲಹೆಗಳು ಮತ್ತು ಮಾಡಿರತಕ್ಕ ಟೀಕೆಗಳು ಏನು ಇವೆ ಅವುಗಳನ್ನು ನಾನು ಸ್ವಾಗತಿಸುತ್ತೇನೆ. ವಿರೋಧ ಪಕ್ಷದ ನಾಯಕರಾಗಲೀ, ವಿರೋಧಪಕ್ಷದವರಾಗಲೀ ಏನಾದರೂ ಕಟುವಾದ ಟೀಕೆಗಳನ್ನು ಮಾಡಿದ್ದರೂ ಕೂಡ ಅವುಗಳನ್ನು ನಾನು ಹೆಲ್ತಿ ಕ್ರಿಟಿಸಿಸಂ ಎಂದು ತಿಳಿದುಕೊಂಡು ಮತ್ತು ಅವುಗಳನ್ನು ನಾನು ಇದನ್ನು ಓಜೋನ್ ಆಫ್ ಪಬ್ಲಿಕ್ ಲೈಫ್ ಎಂದು ತೆಗೆದುಕೊಳ್ಳುತ್ತೇನೆ.

ಇನ್ನು ಚರ್ಚೆಯಾಗಿರತಕ್ಕ ಎಲ್ಲಾ ವಿಷಯಗಳಿಗೂ ಉತ್ತರ ಕೊಡುವುದಕ್ಕೆ ಇಷ್ಟಪಡುವುದಿಲ್ಲ.

ಮಾನ್ಯ ಸದಸ್ಯರುಗಳು ಇನ್ನೂ ಕೂಡ ಒಳ್ಳೆಯ ಸಲಹೆಗಳನ್ನು ಕೊಡಬೇಕು ಎಂದು ನಾನು ಆಗಲೇ ವಿನಂತಿ ಮಾಡಿಕೊಂಡಿದ್ದೇನೆ. ಇಷ್ಟು ಹೇಳಿ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ ಈ ಭಾಷಣವನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ರಾಜ್ಯದಲ್ಲಿ ಸ್ಟೇಟ್ ಫಂಡ್ ರೋಡ್ಸ್ ಏನು ಇವೆ ಅವುಗಳ ಮೆಂಟೇನೆನ್ಸ್‌ಗೆ ಕೊಟ್ಟಿರುವ ಹಣ ಕಡಿಮೆ. ಈ ಮೈಲೇಜ್ ವರ್ಕ್ಸ್‌ಗೆ ಮೆಂಟೇನ್ ಮಾಡುವುದಕ್ಕೆ 5?0 ರೂಪಾಯಿಯೋ ಅಥವಾ ಒಂದು ಸಾವಿರ ರೂಪಾಯಿಯೋ ಅಥವಾ 4 ಸಾವಿರ ರೂಪಾಯಿಯೋ ಏನು ಕೊಡುತ್ತೀರಿ ಅಷ್ಟು ದುಡ್ಡಿನಿಂದ ಆ ರೋಡ್ಸ್ ಕೆಲಸ ಆಗುವುದಿಲ್ಲಾ. 25 ವರ್ಷದಿಂದಲೂ ನಾನು ನೋಡುತ್ತಾ ಇದ್ದೇನೆ. ಕ್ಷಾಮ ಪರಿಸ್ಥಿತಿ ಬಂದಾಗ ಏನು ಕೆಲಸ ಮಾಡುತ್ತಾರೆ ಎಂದು ನಾನು ನೋಡಿದ್ದೇನೆ, ಆ ರೋಡ್ಸಿಗೆಲ್ಲಾ ಮಣ್ಣು ಗಿಣ್ಣು ಎರಚಿ ಇಷ್ಟು ಇಷ್ಟು ಕೆಲಸ ಮಾಡಿಬಿಡುತ್ತಾರೆ. ಅದು ಬಹಳ ದಿವಸ ಬರುವುದಿಲ್ಲಾ. ಆದುದರಿಂದ ಅದು ಪಕ್ಕಾ ರೋಡು ಆಗುವುದಿಲ್ಲಾ. ಈ ಬಗ್ಗೆ ಅಂತಹ ರಸ್ತೆಗಳನ್ನು ಪಕ್ಕಾ ರೋಡು ಮಾಡುವುದಕ್ಕೆ ಏನಾದರೂ ಒಂದು ಯೋಚನೆ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ತಾವು ಹೇಳಿದ ವಿಷಯವನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಪ್ರಶ್ನೆ ಎತ್ತಿದ್ದರು. ಆ ಬಗ್ಗೆ ಹೇಳುವುದಾದರೆ ಮಾರ್ಕೆಟ್ ಕಮಿಟಿಯವರು ಏನು ಒಂದು ತೆರಿಗೆಯನ್ನು ವಸೂಲ್ಮಾಡಿ ಸುಮಾರು ಸುಮಾರು 5 ಕೋಟಿ ರೂಪಾಯಿಯಷ್ಟು ಹಣ ಶೇಖರಿಸಿಟ್ಟುಕೊಂಡಿದ್ದಾರೋ ಆ ಬಗ್ಗೆ ಅವರಿಗೆ ಸೇರಿದಂಥಾ ರಸ್ತೆಗಳನ್ನು ಆಯಾಯಾ ಕಮಿಟಿಯವರ ವ್ಯಾಪ್ತಿಯಲ್ಲೇ ಬಿಡಬೇಕೆಂದು ಒಂದು ಪಟ್ಟಿಯನ್ನು ಸರ್ಕಾರಕ್ಕೆ ರವಾನಿಸಿದ್ದಾರೆ. ಆ ಬಗ್ಗೆ ಸರ್ಕಾರ ಗಮನಕ್ಕೆ ತೆಗೆದುಕೊಂಡು ನಮ್ಮ ಇಲಾಖೆಯಿಂದ ಒಂದು ಹುಕುಂ ಹೊರಡಿಸಿದೆ. ಈಗ ಅದು ಫೈನಾನ್ಸ್ ಇಲಾಖೆಯಲ್ಲಿ ಇದೆ. ಅದನ್ನು ಅತಿ ಶೀಘ್ರವಾಗಿ ಜಾರಿಗೆ ತರುತ್ತೇವೆ ಅಂತ ಅಷ್ಟು ಮಾತ್ರ ಹೇಳುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕಂಥಾ ಸಲಹೆಗಳು ಏನು ಇವೆ ಅದನ್ನು ಕಾರ್ಯಗತ ಮಾಡುವುದಕ್ಕೆ ಹಣಕಾಸಿನ ಕೊರತೆ ಅಡ್ಡಿ ಬಂದಿರುವುದೇ ಕಾರಣ. ಇಷ್ಟು ಹೇಳಿ ಈ ಸಭೆ ಈ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂಥಾ ಬೇಡಿಕೆಗಳಿಗೆ ಅಂಗೀಕಾರ ಕೊಡಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಉತ್ತರವನ್ನು ಮುಗಿಸುತ್ತೇನೆ.

(Mr. Deputy Speaker in the Chair)

† ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಸಣ್ಣ ನೀರಾವರೀ ಮತ್ತು ಪ್ರೊಟೋಕಾಲ್ ಶಾಖೆಗಳ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಸಣ್ಣ ನೀರಾವರಿ ಬಾಬಿಗೆ ಸಂಬಂಧಪಟ್ಟಂತೆ 17 ಕೋಟಿ 28 ಲಕ್ಷ 80 ಸಾವಿರ ರೂಪಾಯಿಗಳ ಬೇಡಿಕೆಯನ್ನು ಈ ಸಭೆಗೆ ಅನುಮೋದನೆಗೆ ಇಟ್ಟಂಥಾ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ನನ್ನ ಅನೇಕ ಮಿತ್ರರು ಈ ಬಗ್ಗೆ ಉತ್ತಮವಾದ ಸೂಚನೆ ಮತ್ತು ಸಲಹೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಪ್ರಾಮುಖ್ಯವಾಗಿ ಎಲ್ಲಾ ಸದಸ್ಯರೂ ಸಹ ಈ ಸಣ್ಣ ನೀರಾವರಿ ಬಾಬಿಗೆ ಹೆಚ್ಚು ಹಣ ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲ ವಾಸ ಮಾಡತಕ್ಕಂಥಾ ರೈತಾಪಿ ವರ್ಗಕ್ಕೆ ಇದಕ್ಕೆ ಹೆಚ್ಚು ಖರ್ಚು ಮಾಡಿದರೆ ಇದರಿಂದ ಅವರಿಗೆ ಶೀಘ್ರವಾಗಿ ಪ್ರತಿಫಲ ದೊರೆಯುತ್ತದೆ ಅನ್ನುವ ಮಾತನ್ನು ಮಾನ್ಯ ಸದಸ್ಯರುಗಳು ಒತ್ತಿ ಒತ್ತಿ ಹೇಳಿದ್ದಾರೆ. ಕಳೆದ 20–25 ವರ್ಷಗಳಿಂದಲೂ ಈ ಸಣ್ಣ ನೀರಾವರಿ ಬಾಬಿಗೆ ಸಂಬಂಧಪಟ್ಟಂತೆ ಆಗಿರತಕ್ಕಂಥಾ ಪ್ರಗತಿಯನ್ನು ನೋಡಿದಾಗ ಸುಮಾರು 1952 ರಿಂದ 72ನೇ ಇಸವಿಯವರೆಗೂ ಸುಮಾರು 20 ವರ್ಷಗಳ ಅವಧಿಯಲ್ಲಿ ಸರ್ಕಾರ ಸುಮಾರು 50 ಕೋಟಿ ರೂಪಾಯಿಗಳನ್ನು ಈ ಬಾಬಿಗೆ ಖರ್ಚು ಮಾಡಿ ಸುಮಾರು 5 ಲಕ್ಷ ಎಕರೆಯನ್ನು ಅಚ್ಚುಕಟ್ಟಿಗೆ ಒಳಪಡಿಸಿದೆ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರಲ್ಲೂ ಕಳೆದ 5 ವರ್ಷದಿಂದ ಈಚೆಗೆ ನಮ್ಮ ಸರ್ಕಾರ ಪ್ರಾಮುಖ್ಯವಾದ ಈ ಬಾಬಿಗೆ ಸುಮಾರು 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸುಮಾರು 3 ಲಕ್ಷ ಎಕರೆಗಳನ್ನು ನೀರಾವರಿಗೆ ಒಳಪಡಿಸಿದೆ ನಮ್ಮ ಸರ್ಕಾರ ಈ ಬಾಬಿಗೆ ವರ್ಷೇ ವರ್ಷೇ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಕಾರಣ ಬಹುಮುಖ್ಯವಾಗಿ

ರೈತರಿಗೆ ಇದರಿಂದ ಅನುಕೂಲವಾಗುತ್ತದೆ ಅನ್ನುವುದನ್ನು ಅರಿತು ಇದಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥಾ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಎಚ್.ಡಿ. ದೇವೇಗೌಡರು ಈ ಬಗ್ಗೆ ಅನೇಕ ಸೂಚನೆಗಳನ್ನೂ ಮತ್ತು ಉತ್ತಮವಾದ ಸಲಹೆಗಳನ್ನೂ ಕೊಟ್ಟಿದ್ದಾರೆ. ಏತಕ್ಕೆಂದರೆ ನಮ್ಮ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಹೇಳಿದ ಹಾಗೆ ಅವರಿಗೆ ಈ ಖಾತೆಯಲ್ಲಿ ಹೆಚ್ಚಿನ ಅಭಿಮಾನ ಹಾಗೂ ಹೆಚ್ಚಿನ ಒಂದು ಅನುಭವ ಸಹ ಇರುವುದರಿಂದ ಅವರು ಈ ರೀತಿ ಹೇಳುತ್ತಿದ್ದಾರೆ. ನಾನೂ ಸಹ 15-20 ವರ್ಷದಿಂದಲೂ ಅವರನ್ನು ನೋಡುತ್ತಾ ಇದ್ದೇನೆ. ಒಂದು ದೊಡ್ಡ ನೀರಾವರಿ ಯೋಜನೆಯ ವಿಷಯವಾಗಲಿ ಅಥವಾ ಒಂದು ಸಣ್ಣ ನೀರಾವರಿ ಯೋಜನೆಯ ವಿಷಯವಾಗಲಿ ಈ ಲೋಕೋಪಯೋಗಿ ಇಲಾಖೆ ಬಗ್ಗೆ ಅವರಿಗೆ ಒಂದು ಹೆಚ್ಚಿನ ಕಾತುರತೆ ಇರುವುದರಿಂದ ಅವರು ಅನೇಕ ಉತ್ತಮವಾದ ಸಲಹೆಗಳನ್ನು ಈ ಬಗ್ಗೆ ಕೊಟ್ಟಿದ್ದಾರೆ.

ಪ್ರಾಮುಖ್ಯವಾಗಿ ಹೇಳಬೇಕಾದರೆ ಈಗಾಗಲೇ ನಮ್ಮ ಲೋಕೋಪಯೋಗಿ ಇಲಾಖಾ ಮಂತ್ರಿಗಳು ಈ ಬಗ್ಗೆ ಉತ್ತರಿಸಿದ್ದಾರೆ. ಉತ್ತರ ಭಾಗಕ್ಕೆ ಸಂಬಂಧಪಟ್ಟಂತೆ ಒಬ್ಬ ಚೀಫ್ ಇಂಜನೀಯರ್ ಅವರನ್ನು ನೇಮಕ ಮಾಡಿದ ಬಗ್ಗೆ ಮಾನ್ಯ ದೇವೇಗೌಡರು ಕೆಲವು ಮಾತುಗಳನ್ನು ಆಡಿದರು. ಲೋಕೋಪಯೋಗಿ ಇಲಾಖಾ ಮಂತ್ರಿಗಳು ಹೇಳಿದ ಹಾಗೆ ನಾನು ಸಹ ಹೇಳುವುದು ಏನೆಂದರೆ ಆ ಭಾಗಕ್ಕೆ ಹೆಚ್ಚು ಹಣವನ್ನು ಖರ್ಚು ಮಾಡತಕ್ಕಂಥಾ ಪ್ರಾಮುಖ್ಯತೆ ಇಲ್ಲದಿದ್ದರೂ ಸಹ ಆ ಭಾಗದಲ್ಲಿ ಅಪೂರ್ಣವಾದಂಥಾ ಕೆಲಸಗಳು ಏನು ಇವೆ ಅವು ಬಹು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾವೆ, ಅಷ್ಟೇ ಅಲ್ಲದೆ ಇನ್ನೂ ಅಪೂರ್ಣವಾದಂಥಾ ಕೆಲಸಗಳು ಬಿಜಾಪುರ, ಗುಲ್ಬರ್ಗಾ ಹಾಗೂ ಇತರ ಜಿಲ್ಲೆಗಳಲ್ಲೂ ಸಹ ಇದ್ದಾವೆ. ಈ ಬಗ್ಗೆ ಸನ್ಮಾನ್ಯ ದೇವೇಗೌಡರು ನಿನ್ನೆ ದಿವಸ ಏನು ಹೇಳಿದರು ಎಂದರೆ ಉತ್ತರ ಭಾಗದಲ್ಲಿ ಚೀಫ್ ಇಂಜನೀಯರ್ ಏನು ಇದ್ದಾರೆ, ಆ ಭಾಗದಲ್ಲಿ ಹೆಚ್ಚಿನ ಹಣ ಪೋಲಾಗುತ್ತಾ ಇದೆ ಅಂತ ಹೇಳಿದರು. ಆದುದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಈ ಹಣ ದುರುಪಯೋಗವಾಗದಂತೆ ಹೆಚ್ಚಿನ ರೀತಿಯಲ್ಲಿ ಸಿಕ್ಕಾಪಟ್ಟೆ ಹಣ ಪೋಲು ಆಗದೇ ಇದ್ದಹಾಗೆ ಅದರ ಮೇಲ್ವಿಚಾರಣೆಗೆ ಒಬ್ಬರು ಇಂಜನೀಯರ್ ಅಲ್ಲಿ ಇದ್ದರೆ ಒಳ್ಳೆಯದು ಅಂತ ಯೋಚನೆ ಮಾಡಿ ಸರ್ಕಾರ ಒಂದು ವರ್ಷದ ಅವಧಿಯವರೆಗೆ ಅವರನ್ನು ನೇಮಕ ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಇನ್ನು 7 ತಿಂಗಳಲ್ಲಿ ರಿಟೈರ್ ಆಗುತ್ತಾರೆ ಅಂತ ಈವೊತ್ತು ನಾನು ಪೇಪರ್‌ನಲ್ಲಿ ಓದಿದೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನನಗೂ ಗೊತ್ತಿದೆ. ಆದುದರಿಂದ ಅವರನ್ನು ಒಂದು ವರ್ಷದ ಅವಧಿಯವರೆಗೆ ಮಾತ್ರ ನೇಮಕ ಮಾಡಿದೆ. ಈ ಒಂದು ನೇಮಕಾತಿ ಅಪ್ರಯೋಜಕ ಎಂದು ಕಂಡುಬಂದಲ್ಲಿ ಸರ್ಕಾರ ಅದನ್ನು ಪುನರ್ಪರಿಶೀಲನೆ ಮಾಡುತ್ತದೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಚ್ಛಿಸುತ್ತೇನೆ. ಮಾನ್ಯ ದೇವೇಗೌಡರು ಬಹು ಮುಖ್ಯವಾದ ಒಂದು ಮಾತನ್ನು ಹೇಳಿದರು. ಅದೇನೆಂದರೆ ಈ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಮುನ್ನ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡುವುದಕ್ಕೆ ಮುನ್ನ ಒಬ್ಬ ಹಿರಿಯ ಅಧಿಕಾರಿ, ಎಸ್ಟಿಮೇಟ್ ಸ್ಯಾಂಕ್ಷನ್ ಮಾಡತಕ್ಕಂಥಾ ಅಧಿಕಾರಿಯನ್ನು ಕಳುಹಿಸಿ, ಸ್ಥಳ ಪರಿಶೀಲನೆ ಮಾಡಿಸಿ ನಂತರ ಅದಕ್ಕೆ ಮಂಜೂರಾತಿ ಕೊಡಬೇಕು ಅನ್ನುವ ಒಂದು ಸಲಹೆ ಮಾಡಿದರು. ಅದು ಅತ್ಯುತ್ತಮವಾದ ಸಲಹೆಯಾದರೂ ಕೂಡ ಪ್ರತಿಯೊಂದು ಕೆಲಸಕ್ಕೂ ಕೂಡ ಹಾಗೆ ಮಾಡುವುದಕ್ಕಾಗುತ್ತದೆಯೇ, ಆ ಅಧಿಕಾರಿ ಎಲ್ಲ ಸ್ಥಳಗಳನ್ನೂ ಪರಿಶೀಲನೆ ಮಾಡಿ ಮಂಜೂರು ಮಾಡುವುದಕ್ಕೆ ಸಾಧ್ಯವೇ ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ದೊಡ್ಡ ದೊಡ್ಡ ಅಂದಾಜುಗಳು ಇವೆಯಲ್ಲಾ ಅಂಥಾದ್ದನ್ನಾದರೂ ಮಾಡಿಸಬಹುದಲ್ಲಾ. ಅವರು ಆ ಸ್ಥಳಗಳನ್ನು ಪರಿಶೀಲನೆ ಮಾಡಿ ನಂತರ ಮಂಜೂರಾತಿ ಮಾಡುವುದಕ್ಕೆ ಸಾಧ್ಯವಾಗಬಹುದಲ್ಲಾ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ದೊಡ್ಡ ದೊಡ್ಡ ಅಂದಾಜುಗಳು ಇದ್ದರೆ ಅಂಥಾದ್ದಕ್ಕೆ ಮಂಜೂರಾತಿ ಕೊಡುವುದನ್ನು ಪರಿಶೀಲಿಸಬಹುದು. ಏತಕ್ಕೆಂದರೆ ಸಾಮಾನ್ಯವಾಗಿ ತಾಲ್ಲೂಕಾ ಮಟ್ಟದಲ್ಲಿ ಅಸಿಸ್ಟೆಂಟ್ ಇಂಜಿನೀಯರ್ಸ್ ಮತ್ತು ಇನ್ನು ಇತರ ಇಂಜನೀಯರ್‌ಗಳು ಇರುವಾಗ

ಅವರು ಈ ಬಗ್ಗೆ ಯಾವುದಾದರೂ ಕೆಲಸಗಳಿಗೆ ಮಂಜೂರಾತಿ ಕೊಡಬೇಕಾದರೆ ಅದಕ್ಕೆ ಸಾಮಾನ್ಯವಾಗಿ ಬೇಕಾಗಿರತಕ್ಕಂಥಾ ದಾಖಲೆಗಳನ್ನು ಇಂಜಿನೀಯರ್ಸ್‌ಗಳಿಗೆ ಒದಗಿಸುತ್ತಾರೆ. ಅವರು ಆ ಆಧಾರದ ಮೇಲೆ ಆ ಕೆಲಸಗಳನ್ನು ಮಂಜೂರಾತಿ ಮಾಡುತ್ತಿದ್ದಾರೆ. ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ದೊಡ್ಡ ದೊಡ್ಡ ಕೆಲಸಗಳನ್ನು ತೆಗೆದುಕೊಳ್ಳುವಾಗ ಉದಾಹರಣೆಗೆ ಫ್ಲಡ್ ಡ್ಯಾಮೇಜಸ್ ಇಂತಹ ಕೆಲಸಗಳನ್ನು ತೆಗೆದುಕೊಳ್ಳುವಾಗ, ಅದಕ್ಕೆ ಮಂಜೂರು ಮಾಡುವಾಗ ಆ ಸ್ಥಳ ಪರಿಶೀಲನೆ ಮಾಡುವುದು ಸೂಕ್ತ. ಆದ್ದರಿಂದ ಅವರು ಹೇಳಿದ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆಂದು ತಿಳಿಸಲು ಇಚ್ಛಿಸುತ್ತೇನೆ. ಬಹು ಮುಖ್ಯವಾಗಿ ಲಿಫ್ಟ್ ಇರ್ರಿಗೇಷನ್ ಕೆಲಸಗಳು ಮಂಜೂರು ಮಾಡುವಾಗ ರಾಜಕೀಯವಾದಂಥಾದ್ದಕ್ಕೆ ಮಂಜೂರಾತಿ ಕೊಡಬೇಡಿ ಅನ್ನುವ ಒಂದು ಅನುಮಾನವನ್ನು ವ್ಯಕ್ತಪಡಿಸಿ ಒಂದು ಸೂಚನೆಯನ್ನು ಕೊಟ್ಟರು. ತಮಗೆ ಹೇಳಬೇಕಾದರೆ ಚಾಕೇನಹಳ್ಳಿ ಜಲಾಶಯ ಏನು ಇದೆ ಅದರ ಪೂರ್ಣ ಮಾಹಿತಿ ಮಾನ್ಯ ದೇವೇಗೌಡರಿಗೆ ಚೆನ್ನಾಗಿ ಗೊತ್ತಿದೆ. ನಿನ್ನೆ ಭಾಷಣದಲ್ಲೂ ಸಹ ಹೇಳಿದ್ದಾರೆ. ಅಲ್ಲಿ ಎಷ್ಟು ಎಕರೆಗಳು ಅಚ್ಚುಕಟ್ಟಾಗುತ್ತದೆ, ಎಷ್ಟು ಆಗಬೇಕು ಅನ್ನುವುದೂ ಸಹ ಅವರಿಗೆ ಗೊತ್ತಿದೆ. ಅದಕ್ಕೆ ಮೊದಲು ಅದೇನಾಗಿತ್ತು, ಅದರಲ್ಲಿ ಸೆಮಿ ಡ್ರೈ ಎಷ್ಟು ಇತ್ತು ಹಾಗೂ ಅದರಲ್ಲಿ ಭತ್ತ ಬೆಳೆಯತಕ್ಕಂಥಾ ಜಮೀನು ಎಷ್ಟು ಇದೆ, ಕಬ್ಬು ಬೆಳೆಯತಕ್ಕಂಥಾ ಜಮೀನು ಎಷ್ಟು ಇದೆ ಎಂಬುದನ್ನು ಅವರು ನಿಖರವಾಗಿ ಹೇಳಿದ್ದಾರೆ. ಅವರಿಗೆ ಗೊತ್ತಿರುವ ಹಾಗೆ ನಮ್ಮ ಹೇಮಾವತಿ ಕಮ್ಯಾಂಡ್ ಏರಿಯಾ ಏನು ಇದೆ ಅದಕ್ಕೆ ಅದು ಒಳಪಡುತ್ತದೆ. ಅದರಲ್ಲಿ ಎಡದಂಡೆ ನಾಲೆ ಏನು ಇದೆ ಆ ಕೆಲಸ ಮಾಡಿದರೆ ಆ ನೀರು ಪೂರ್ಣವಾಗಿ ಆ ಭಾಗದಲ್ಲಿಯೇ ಹರಿದು ಹೋಗುತ್ತದೆ ಅನ್ನುವ ಬಗ್ಗೆ ಒಂದು ರಿಪೋರ್ಟ್ ಸಹ ಇದೆ. ಇದು ಚಾಕೇನಹಳ್ಳಿ ಭಾಗದಲ್ಲಿರುವ ಜಮೀನಿಗೆ ಒಳಪಡುತ್ತದೆ ಎಂದು ಹೇಳುತ್ತೇನೆ. ಈಗಾಗಲೇ ನಾನು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ ಆ ಭಾಗದಲ್ಲಿ ಹೇಮಾವತಿ ನಾಲೆ ಏನು ಇದೆ, ಅಲ್ಲಿ ಲಿಫ್ಟ್ ಇರ್ರಿಗೇಷನ್ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇನೆ ನೀರಾವರಿ ಆಗತಕ್ಕಂಥಾ ಜಮೀನುಗಳು ಆ ಭಾಗದಲ್ಲಿ ಏನು ಇವೆಯೋ ಅವಕ್ಕೆ ಪ್ರಯೋಜನ ಮಾಡಿಕೊಡಬೇಕೆಂದು ಗಣನೆಗೆ ತೆಗೆದುಕೊಂಡು ಆ ಭಾಗದಲ್ಲಿ ಲಿಫ್ಟ್ ಇರ್ರಿಗೇಷನ್ ಸರ್ಕಾರ ಮಂಜೂರಾತಿ ಕೊಟ್ಟಿದೆ. ಈ ಸಂದರ್ಭದಲ್ಲಿ ತಮಗೆ ಒಂದು ವಿಷಯ ಹೇಳುವುದೇನೆಂದರೆ ನಾನು ಮಂತ್ರಿಯಾಗುವುದಕ್ಕೆ ಮುಂಚೆ ಇನ್ನೊಂದು ಪ್ರಾಜೆಕ್ಟ್ ಬಗ್ಗೆ ಸ್ಟೇ ಆರ್ಡರ್ ಕೊಡುವುದಕ್ಕೆ ಒಂದು ತಿಂಗಳ ಮುಂಚಿತವಾಗಿಯೇ ಅದನ್ನು ವೇಕೇಟ್ ಮಾಡಿಸಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರ ಆಜ್ಞೆ ಮಾಡಿದೆ ಎಂದು ಹೇಳುತ್ತೇನೆ.

ಲ್ಯಾಂಡ್ ಲೆಸ್ ಜನಗಳಿಗೆ ಅನೇಕ ಕಡೆಗಳಲ್ಲಿ ಭೂಮಿ ಮತ್ತು ಎತ್ತುಗಳನ್ನು ಕೊಡತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೀರಿ ಆದರೆ ಈ ಯೋಜನೆ ಅನೇಕ ಕಡೆ ಇಲ್ಲವಾಗಿದೆ. ಇದು ನಿಂತು ಹೋಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಯೋಜನೆಯನ್ನು ಸರ್ಕಾರದವರು ಮತ್ತೆ ಜಾರಿಗೆ ತಂದರೆ ಸಣ್ಣಪುಟ್ಟ ರೈತರಿಗೆ ಅನುಕೂಲವಾಗುತ್ತದೆ ಎಂದು ನಾನು ಹೇಳುತ್ತೇನೆ.

ಸೋಷಿಯಲ್ ವೆಲ್‌ಫೇರ್ ಇಲಾಖೆಯವರ ಕಮ್ಯೂನಿಟಿ ವೆಲ್ಸ್ ಎಷ್ಟು ತೆಗೆದಿದ್ದಾರೋ ನಮಗೆ ಗೊತ್ತಾಗಿಲ್ಲ ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲಿ ಒಂದು ಕಮ್ಯೂನಿಟಿ ವೆಲ್ಸ್ ಪೂರ್ತಿಯಾಗಿಲ್ಲ. ಇದಕ್ಕೆ ಕಾರಣ ಏನೆಂದರೆ, ಸರ್ಕಾರದವರು ಇದರ ಬಗ್ಗೆ ಹಾಕಿರತಕ್ಕ ಕಂಡಿಷನ್ಸ್ ಅನ್ನು ರಿಲ್ಯಾಕ್ಸ್ ಮಾಡಿದರೆ ಈ ಸ್ಕೀಂ ಹೆಚ್ಚಿನ ಫಲಪ್ರದವಾಗಿ ಕಾಣುತ್ತದೆ ಸಿರಿಕಲ್ಚರ್‌ಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಸಿರಿಕಲ್ಚರ್ ರೇರಿಂಗ್ ಹೌಸ್ ಕಟ್ಟಿಸುವ ಬಗ್ಗೆ ನಾನು ಒಂದು ಸಲಹೆ ಕೊಡುತ್ತೇನೆ. ಮೊದಲು ಒಂದು ಇನ್‌ಸ್ಟಾಲ್‌ಮೆಂಟ್ ಹಣವನ್ನು ಕೊಡುತ್ತಾರೆ, ಎರಡನೆಯ ಇನ್‌ಸ್ಟಾಲ್‌ಮೆಂಟ್ ಕೊಡುವಾಗ, ಅಸಲು ಬಡ್ಡಿ ಎಲ್ಲವನ್ನು ಹಿಡಿದುಕೊಂಡು ಕೊಡುತ್ತಾರೆ, ಆದ್ದರಿಂದ ಈ ಹಣದಿಂದ ಅವನು ತನ್ನ ಕೆಲಸವನ್ನು ಪೂರ್ತಿಯಾಗಿ ಮಾಡುವುದಕ್ಕಾಗುವುದಿಲ್ಲ. ಬಂದಷ್ಟು ಬರಲಿ, ಏನು ಮಾಡುವುದು ಎನ್ನುವ ಬೇಜಾರು ಅವನಲ್ಲಿ ಬೆಳೆದು ಯಾವ ಕೆಲಸಗಳೂ ಪೂರ್ತಿಯಾಗುವುದಿಲ್ಲ. ಮತ್ತು ಸರ್ಕಾರ ದವರು ಕೊಟ್ಟ ಹಣದಿಂದಲೂ ಯಾವ ಪ್ರಯೋಜನವೂ ಅವನಿಗಾಗುವುದಿಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ ಸರ್ಕಾರವನ್ನು ಮತ್ತೆ ದೂರುವಂಥ ಪ್ರಸಂಗಬರುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಸರಿಯಾಗಿ ಪರಿಶೀಲನೆ ಮಾಡಿ, ಸರಿಯಾದ ವ್ಯವಸ್ಥೆಯನ್ನು ಮಾಡಿ ಹಣವನ್ನು ಕೊಡದೇಹೋದರೆ ಯಾವ ಒಂದು ಯೋಜನೆಯನ್ನು ಕಾರ್ಯಗತ ಮಾಡಲು ಸಾಧ್ಯವಾಗುವುದಿಲ್ಲ, ಮತ್ತು ಈ ಯೋಜನೆಗಳನ್ನೂ ಸಹ ಕೈಬಿಡಬೇಕಾಗುತ್ತದೆ.

ಸರ್ಕಾರದವರು ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್ ಮಾಡಿದ್ದಾರೆ. ನಮ್ಮ ಅನುಭವದಲ್ಲಿ ಹೇಳುವುದಾದರೆ, ಇದರಿಂದ ಎಷ್ಟು ಉಪಯೋಗವಾಗುತ್ತದೆಯೋ ಗೊತ್ತಿಲ್ಲ. ಇವರಿಗೆ ಕೊಟ್ಟಿರತಕ್ಕ ಸಿಬ್ಬಂದಿಯೂ ಕಡಿಮೆ, ಹೆಚ್ಚಿನ ಸಿಬ್ಬಂದಿ ಬೇಕಾದರೆ ಮತ್ತೆ ಪೋಲೀಸ್ ಡಿಪಾರ್ಟ್‌ಮೆಂಟಿನವರನ್ನೇ ಆಶ್ರಯ ಪಡೆಯಬೇಕಾಗುತ್ತದೆ. ಅನೇಕ ಕಡೆ ಸೋಷಿಯಲ್ ಬಯಕಾಟ್ ಆಗಿದೆ. ಎಲೆಕ್ಷನ್ ಸಮಯದಲ್ಲಿ ಎಲೆಕ್ಟೋರೆಲ್ ರೋಲನ್ನು ಕಿತ್ತುಕೊಂಡು ಹೋದರು. ನಾನೇ ಕಂಪ್ಲೇಂಟ್ ಕೊಟ್ಟರೂ ಇವತ್ತಿನವರೆಗೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ನಾನೇ ಖುದ್ದಾಗಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ ತೋರಿಸಿದ್ದೇನೆ. ಆದ್ದರಿಂದ ಏನು ಸೆಲ್ ಮಾಡಿದರೂ ಏನು ಪ್ರಯೋಜನ ಎಂದು ನಾನು ಕೇಳಬೇಕಾಗುತ್ತದೆ.

ಹರಿಜನ ಗಿರಿಜನರಿಗೋಸ್ಕರ ಎಂಪ್ಲಾಯ್‌ಮೆಂಟ್ ಸೆಲ್ ಸರ್ಕಾರದವರು ಮಾಡಿದಾಗ ಮಾಜಿ ಪ್ರಧಾನಿಯವರು ಬಹುಶಃ ಎಲ್ಲಾ ಖರ್ಚನ್ನು ಗವರ್ನಮೆಂಟ್ ಆಫ್ ಇಂಡಿಯಾದವರೇ ಕೊಡಬೇಕು ಎಂದು ತಿಳಿಸಿದ್ದರು. ಆದರೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಜನಗಳ ಅಭಿವೃದ್ಧಿಗೆ ಹಣವನ್ನು ಕೊಟ್ಟರೆ, ಅದನ್ನು ತೆಗೆದುಕೊಂಡು ಹೋಗಿ ಸಿವಿಲ್ ರೈಟ್ಸ್ ಎನ್‌ಫೋರ್ಸ್‌ಮೆಂಟ್ ಸೆಲ್‌ಗೆ ಕೊಟ್ಟರೆ ಹೇಗೆ ? ಮಾನ್ಯ ಸಚಿವರು ಇದರ ಬಗ್ಗೆ ನಾನು ಸರಿಯಾದಂಥ ವಿವರಣೆಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರ ದುಡ್ಡು ಇದಕ್ಕೆ ಬರಬೇಕು ಎಂದು ನಾನು ಹೇಳುತ್ತೇನೆ. ಇನ್ನು ನಮ್ಮ ಜನಗಳಿಗೆ ಲೀಗಲ್ ಅಸಿಸ್ಟೆನ್ಸ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. 19 ಜಿಲ್ಲೆಗಳಲ್ಲಿ 19 ಜನ ಲೀಗಲ್ ಆಫೀಸರ್ಸ್‌ಗಳನ್ನು ಮಾಡಿರಬಹುದು. ಇವರಿಂದ ನಮ್ಮ ಜನಗಳಿಗೆ ಲೀಗಲ್ ಅಸಿಸ್ಟೆನ್ಸ್ ಯಾವರೀತಿಯಿಂದ ಸಿಕ್ಕುತ್ತದೆಯೋ ಇಲ್ಲವೋ ಗೊತ್ತಿಲ್ಲ. ಎಷ್ಟು ಜನಗಳಿಗೆ ಸರ್ಕಾರದವರು ಈವರೆಗೆ ಲೀಗಲ್ ಎಡ್ ಕೊಟ್ಟಿದ್ದಾರೆ ಎನ್ನುವುದಕ್ಕೆ ಯಾವ ಒಂದು ಸ್ಟ್ಯಾಟಿಸ್ಟಿಕ್ಸ್ ಕೂಡ ಇಲ್ಲ, ಇದನ್ನು ಮಾನ್ಯ ಸಚಿವರು ತಿಳಿಸಿದರೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಜೊತೆಗೆ ಸರ್ಕಾರದವರು ಟೆಂಪರೆನ್ಸ್ ಬೋರ್ಡ್ ಎಂದು ಮಾಡಿದ್ದಾರೆ. ನಮ್ಮ ಜನಗಳು ಹೆಚ್ಚಾಗಿ ಕುಡಿಯುವುದರಿಂದ, ಕುಡಿತ ಸರಿಯಲ್ಲವೆಂದು, ಮತ್ತು ಇದಕ್ಕೆ ಪ್ರೋತ್ಸಾಹ ಮಾಡಬಾರದು ಎಂದು ಈ ಬೋರ್ಡ್ ಮಾಡಿದ್ದಾರೆ. ಈ ದೃಷ್ಟಿಯಿಂದ ಈ ಕೆಲಸ ಮಾಡಿರತಕ್ಕುದು ಸ್ವಾಗತಾರ್ಹವಾದುದು. ಆದರೂ ಸಹ ಟೆಂಪರೆನ್ಸ್ ಬೋರ್ಡ್‌ಗೆ ಸೋಷಿಯಲ್ ವೆಲ್‌ಫೇರ್ ಇಲಾಖೆಯಿಂದ ದುಡ್ಡು ಹೋಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎಕ್ಸೈಜ್ ಡಿಪಾರ್ಟ್‌ಮೆಂಟಿಗೆ ಕುಡಿತದಿಂದ ಕೋಟ್ಯಾಂತರ ರೂಪಾಯಿಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ಸ್ವಲ್ಪ ಹೆಂಡವನ್ನು ಈಚಲ ಗಿಡದಿಂದ ತೆಗೆದು ಕೆಮಿಕಲ್ಸ್ ಮಿಕ್ಸ್ ಮಾಡಿ ಅದನ್ನು ಮಾರಿ ಬಂದಂಥ ಹಣದಲ್ಲಿ ಇವರಿಗೆ ಅಭಿವೃದ್ಧಿಗೆ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿದ್ದರೆ ಇದು ಯಾವ ನ್ಯಾಯ? ನಿಮ್ಮ ಕಾಲವಲ್ಲಿಯಾದರೂ ಇದಕ್ಕೆ ಹೆಚ್ಚು ಹಣವನ್ನು ಒದಗಿಸಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಸರ್ಕಾರದವರು ಮಾಡಿರತಕ್ಕ ಫೈನಾನ್ಸ್ ಕಾರ್ಪೋರೇಷನ್ ಬಗ್ಗೆ ಹೇಳುವುದಾದರೆ, ನಾನು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದನ್ನು ನೋಡಿದರೆ ಸರ್ಕಾರದವರು ಇದರ ಎಸ್ಟಾಬ್ಲಿಷ್‌ಮೆಂಟಿಗೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅಲ್ಲಿ ಏನು ಅಂಥ ಲೀಗಲ್ ಕಾಂಪ್ಲಿಕೇಷನ್ ಇದೆಯೋ ಎಂದು ಲೀಗಲ್ ಅಸಿಸ್ಟೆಂಟ್‌ಗಳನ್ನು ನೇಮಕ ಮಾಡಿಕೊಂಡಿದ್ದಾರೆ ಇದುವರೆಗೆ ಇವರು ಸುಮಾರು 55 ಜನಕ್ಕೆ ಸಹಾಯವನ್ನು ಕೊಟ್ಟಿದ್ದಾರೆ, ಇದಕ್ಕೆ ಒಂದು ಎಕ್ಸಿಕ್ಯುಟೀವ್ ಬಾಡಿಯು ಒಂದು ಇದೆ ಇದರ ಬಗ್ಗೆ ನನ್ನ ಸಲಹೆ ಏನೆಂದರೆ ರೂಲ್ಸ್ ಪ್ರಕಾರ ಒಂದೊಂದು ತಾಲ್ಲೂಕಿನಲ್ಲಿ 10 ಅಲ್ಲ 5 ಜನಕ್ಕೆ ಸಹಾಯ ಕೊಡಬೇಕು ಅರ್ಬನ್ ಏರಿಯಾಗೆ ಇಷ್ಟು, ರೂರಲ್ ಏರಿಯಾಗಳಿಗೆ ಇಷ್ಟು ಮಿನಿಮಂ ಇಷ್ಟು, ಮ್ಯಾಕ್ಸಿಮಂ ಇಷ್ಟು ಎಂದು ರೂಲ್ಸನ್ನು ತಾವು ಹಾಕಿಕೊಳ್ಳಬೇಕು ಅಧ್ಯಕ್ಷರೆ ಇವೊತ್ತು ಒಂದೊಂದು ಜಿಲ್ಲೆಗೆ ಇಷ್ಟು ಎಂದು ಲೆಕ್ಕಾಚಾರ ಹಾಕಿಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ಇವೊತ್ತು ಏನಾಗಿದೆ ಎಂದರೆ ಒಂದು ತಾಲ್ಲೂಕಿನಲ್ಲಿ ನಾನು ಹೇಳಿದ ರೀತಿಯಲ್ಲಿ ಒಂದು ವರ್ಷಕ್ಕೆ ಇಬ್ಬರಿಗೆ ಮಾತ್ರ ಸಿಕ್ಕುತ್ತದೆ. ನಮ್ಮ ಚಾಮರಾಜನಗರದಲ್ಲಿ ಈ ಬಗ್ಗೆ ಸುಮಾರು ಒಂದು ಸಾವಿರ ಅರ್ಜಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ

ಇಬ್ಬರಿಗೆ ಕೊಡುವುದು ಎಂದರೆ ಹೇಗೆ ? ಇದು ಏನಾಗಿದೆ ಎಂದರೆ ಜನರು ನಮಗೆ ಏನೋ ಸಿಕ್ಕುತ್ತದೆ ಎಂದು ಲಂಚ ವಗೈರೆ ಕೊಟ್ಟು ಒಂದೊಂದು ಪಾರಂಗೆ 5—6ರೂಪಾಯಿ ಕೊಟ್ಟಿದ್ದಾರೆ. ಆದ್ದರಿಂದ ತಾವು ಇನ್ನು ಮುಂದಾದರೂ ಪ್ರತಿ ಜಿಲ್ಲೆಗೆ, ಅಥವಾ ಪ್ರತಿ ತಾಲ್ಲೂಕಿಗೆ ಇಷ್ಟು ಎಂದು ಲೆಕ್ಕಾಚಾರ ಹಾಕಿಕೊಡುವಂತೆ ಏರ್ಪಾಡು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಷಯ ಹೇಳಬೇಕು ಎಂದರೆ, ಈ ಜನಾಂಗಗಳಲ್ಲಿ ಎಜುಕೇಟೆಡ್ ಅನ್‌ಎಂಪ್ಲಾಯ್‌ಮೆಂಟ್ ಜನರು ಬಹಳ ಇದ್ದಾರೆ, ಈಗ ಅವರು ಬಹಳ ಕಷ್ಟದಲ್ಲಿ ಇದ್ದಾರೆ, ಅವರಿಗೆ ಯಾವುದೇ ಜಮೀನು ಇಲ್ಲ, ಮತ್ತೆ ಉದ್ಯೋಗ ಇಲ್ಲ, ಜೀವನೋಪಾಯ ಸಾಗಿಸುವುದಕ್ಕೆ ಕಷ್ಟವಾಗಿದೆ. ಆದ್ದರಿಂದ ಇಂತಹವರಿಗೆ ಒಂದು ಸ್ಪೆಷಲ್ ಸ್ಕೀಮ್ ಮಾಡಿ ಇಂಡಸ್ಟ್ರೀಸ್‌ಗಳಲ್ಲಿ ಕೆಲಸ ಒದಗಿಸುವುದಾಗಲಿ, ಅಥವಾ ಅವರಿಗೆ ಜಮೀನು ಕೊಡುವಂತದ್ದನ್ನಾಗಲಿ ನಿಮ್ಮ ಕಾಲದಲ್ಲ ಮಾಡಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇವೊತ್ತು ಎಜುಕೇಟೆಡ್ ಅನ್‌ಎಂಪ್ಲಾಯೀಸ್ ಅವರಿಗೆ ತಮ್ಮ ಸರ್ಕಾರದಿಂದ ಜಮೀನನ್ನು ಒದಗಿಸಿಕೊಟ್ಟರೆ ಅವರು ಜೀವನ ಸಾಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಈಗ ನಮ್ಮ ಕಡೆಗಳಲ್ಲಿ ಬೇಕಾದಷ್ಟು ಲ್ಯಾಂಡ್ಸ್ ಇದೆ, ಅದನ್ನು ಇಂತಹವರಿಗೆ ಹಂಚಿದರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಿ, ಇಷ್ಟು ಮಾತನಾಡಲು ಕಾಲಾವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ) —ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರುಗಳು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಮೊದಲನೆಯದಾಗಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಬಗ್ಗೆ ಈ ಮನೆಯ ಹಿರಿಯ ಸದಸ್ಯರಾದ ದೊಡ್ಡತಿಮ್ಮಯ್ಯನವರು ಬಹಳ ಚೆನ್ನಾಗಿ ಹೇಳಿದ್ದಾರೆ. ಅಲ್ಲದೆ ರಚನಾತ್ಮಕವಾದ ಅನೇಕ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ, ಈಗ ಇಲ್ಲಿ ಏನಾಗಿದೆ ಎಂದರೆ ಈ ಸದನದಲ್ಲೇ ಆಗಲಿ, ಅಥವಾ ಹೊರಗಡೆಯಾಗಲಿ, ರಚನಾತ್ಮಕ ಸಲಹೆಗಳನ್ನು ಕೊಟ್ಟರು ಕೂಡ ಸರ್ಕಾರ ಕೇಳಿಕೊಂಡು ಸುಮ್ಮನೆ ಕೂತಿರುತ್ತದೆಯೇ ಹೊರತು ಅದರ ಬಗ್ಗೆ ಕಾರ್ಯಗತ ಮಾಡುವುದಕ್ಕೆ ಹೋಗುವುದಿಲ್ಲ. ಈಗ ನಾನು ನಮ್ಮ ಕರ್ತವ್ಯ ದೃಷ್ಟಿಯಿಂದ ಹೇಳಬೇಕಾಗಿದೆ. ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ವರದಿಯಲ್ಲಿ ಎಕನಾಮಿಕ್ ಅಬ್ಜೆಕ್ಟ್ ಬಗ್ಗೆ ಒಂದು ಕಡೆ ಬಹಳ ಒಳ್ಳೆಯ ಮಾತನ್ನು ಹೇಳಿದ್ದಾರೆ ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್, ಮತ್ತೆ ಹಿಂದುಳಿದ ಜನಾಂಗದ ಬಗ್ಗೆ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಕ್ಕೆ ಏನು ಪರಿಹಾರ ಇದೆ ಎನ್ನುವುದಕ್ಕೆ ಸಾಕಷ್ಟು ಹೇಳಿದ್ದಾರೆ. ಈಗ ಒಂದು ಸಣ್ಣ ಉದಾಹರಣೆ ಹೇಳಬೇಕು ಎಂದರೆ ತಮ್ಮ ಇಲಾಖೆ ಅನಿಮಲ್ ಹಸಬೆಂಡರಿ ಇಲಾಖೆಯೊಡನೆ ಸಂಪರ್ಕ ಬೆಳೆಸಿ, ಹಳ್ಳಿಗಾಡಿನಲ್ಲಿ ಇರತಕ್ಕ ಬೇಸಾಯ ಮಾಡತಕ್ಕ ಕೂಲಿಗಾರರು ಯಾರು ಇದ್ದಾರೆ. ಹಿಂದುಳಿದ ಜನರು ಯಾರು ಇದ್ದಾರೆ, ನೆಲ ಹಿಡಿದಂತ ಜನರು ಯಾರು ಇದ್ದಾರೆ, ಲ್ಯಾಂಡ್‌ಲೆಸ್ ಲೇಬರರ್ಸ್ ಯಾರು ಇದ್ದಾರೆ, ಅಂತಹವರಿಗೆ, ಅನಿಮಲ್ ಹಸ್‌ಬೆಂಡರಿ, ಡೈರಿ ಫಾರಂಗಳ ಮುಖಾಂತರ ಒಂದೊಂದು ಹಸುವನ್ನು ಒಂದೊಂದು ಮನೆಗೆ ಕೊಡಿಸಿದರೆ ಅವರ ಒಂದು ತಲೆಮಾರುಗಳು ಉದ್ಧಾರವಾಗುತ್ತವೆ, ಅದರ ಬಗ್ಗೆ ಯಾವ ಭಿನ್ನಾಭಿಪ್ರಾಯವಿಲ್ಲ, ಇವೊತ್ತು ಇವರು ಕ್ಷೀರದ ಭ್ರಾಂತಿ ಹುಟ್ಟಿಸುತ್ತಾರೆಯೇ ಹೊರತು ಕ್ಷೀರದ ಕ್ರಾಂತಿ ಮಾಡುವುದಿಲ್ಲ, ಆದ್ದರಿಂದ ಈಗ ನಾನು ಹೇಳಿರುವ ರೀತಿ ಅನಿಮಲ್ ಹಸ್‌ಬೆಂಡರಿ ಇಲಾಖೆಯೊಡನೆ ಸಮಾಲೋಚನೆ ನಡೆಸಿ ಸುಮಾರು ಒಂದು ಗ್ರಾಮದಲ್ಲಿರತಕ್ಕ 10 ಕುಟುಂಬಗಳಲ್ಲಿ, 2 ಕುಟುಂಬಗಳಿಗೆ ಒಂದೊಂದು ಹಸು ಕೊಡುವಂತೆ ಏರ್ಪಾಡು ಮಾಡಬೇಕು ಇವೊತ್ತು ಒಂದು ತಾಲೋಕಿನಲ್ಲಿ 300 ಹಳ್ಳಿಗಳು ಇದ್ದರೆ ಸುಮಾರು 600 ಹಸುಗಳನ್ನು ಕೊಡಬೇಕಾಗುತ್ತದೆ, ನಂತರ ಅದರಿಂದ ಬತರತಕ್ಕ ಹಾಲನ್ನು ತಾಲೋಕು ಕೇಂದ್ರಗಳಲ್ಲಿ ಸಂಗ್ರಹಿಸಿ ಮಾರಾಟ ಮಾಡಿದರೆ. ಈ ಅನಿಮಲ್ ಹಸ್‌ಬೆಂಡರಿ ಫಾರಂ ಏನು ಇದೆ ಇದಕ್ಕೂ ಕೂಡ ಯಾವ ನಷ್ಟವಾಗುವುದಿಲ್ಲ. ಆದುದರಿಂದ ಇಂತಹ ಒಂದು ರಚನಾತ್ಮಕವಾದ ಯೋಜನೆಯನ್ನು ತಾವು ಮಾಡಲಿಕ್ಕೆ ಪ್ರಯತ್ನ ಮಾಡಬೇಕು, ಇದು ಬಹಳ ಸುಲಭವಾದಂತ ಕೆಲಸ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸೋಷಿಯಲ್ ಡಿಪಾರ್ಟ್‌ಮೆಂಟ್‌ನಲ್ಲ ತಮಗೆ ಗೊತ್ತಿರುವ ಹಾಗೆ 1974 ರಿಂದ ಈಚೆಗೆ ನಡೆದಂತ ಅವ್ಯಾವಗಳನ್ನು ನಾನು ಹೇಳಬೇಕಾಗಿಲ್ಲ- ಆ ಬಗ್ಗೆ ವಿಜಿಲೆನ್ಸ್ ಕಮಿಷನ್ ರಿಪೋರ್ಟ್, ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಪೋರ್ಟ್, ಲೆಜಿಸ್ಲೇಚರ್ ಸಬ್ ಕಮಿಟಿ ರಿಪೋರ್ಟ್ ಇದೆ, ಇಷ್ಟೆಲ್ಲಾ ರಿಪೋರ್ಟ್ ಇದ್ದರೂ

ಕೂಡ ಆ ಬಗ್ಗೆ ಯಾವುದೇ ರೀತಿಯ ಕ್ರಮವನ್ನು ಈ ಸರ್ಕಾರ ಕೈಗೊಂಡಿಲ್ಲ. ಇದಕ್ಕೆ ಕಾರಣ ಕರ್ತರು ಯಾರು ಎಂದು ಸಮಿತಿಗಳ ರಿಪೋರ್ಟಿನಲ್ಲಿ ನಮೂದಿಸಿದ್ದರೂ, ಇದರ ಬಗ್ಗೆ ಕೂಲಂಕಷ ವಾಗಿ ಇನ್ನೂ ಪರಿಶೀಲನೆ ಮಾಡುವುದರ ಸಲುವಾಗಿ ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆ ಮಾಡಿದರೆ ತಪ್ಪಿಲ್ಲ. ಅದಕ್ಕೆ ಯಾರು ಜವಾಬ್ದಾರರಾಗುತ್ತಾರೆ. ಅವರ ಆಸ್ತಿ-ಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಇವತ್ತು ಏನಾಗಿದೆ ಎಂದರೆ ಕಾನೂನು ಗದ್ದುಗೆ ಬಿಟ್ಟು ಇಳಿದ ಕೂಡಲೇ ನೀತಿ ಬೋಧೆ ಮಾಡತಕ್ಕ ಪರಿಪಾಠ ಇದೆ. ಅಧಿಕಾರದಲ್ಲಿ ಇದ್ದಾಗ ಮಾಡಬಾರ ದನ್ನು ಮಾಡಿ, ಆಡಬಾರದ್ದನ್ನು ಆಡಿ ಕೆಲವು ಇಲಾಖೆಗಳನ್ನು, ಸರ್ಕಾರದ ಹಣವನ್ನು ಸಾರ್ವ ಜನಿಕರ ಹಣವನ್ನು ಲೂಟಿ ಮಾಡಿದಂತ ಜನ ಇವೊತ್ತು ನೀತಿ ಬೋಧೆ ಮಾಡಲಿಕ್ಕೆ ಬರುತ್ತಿದ್ದಾರೆ. ಈಗಾಗಲೇ ಯಾರು ಭ್ರಷ್ಟಾಚಾರ ಮಾಡಿದ್ದಾರೆ ಎಂದು ರುಜುವಾತಾಗಿದೆ, ಇನ್ನು ಹೆಚ್ಚು ರುಜುವಾತು ಮಾಡುವುದಕ್ಕೆ ನ್ಯಾಯಾಂಗ ತನಿಖೆ ಮಾಡಿ, ಯಾರಿಂದ ಅನ್ಯಾಯವಾಗಿದೆ ಅವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಹೇಳುತ್ತೇನೆ. ಅಧ್ಯಕ್ಷರೆ, ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್, ಬ್ಯಾಕ್‌ವರ್ಡ್ ಕ್ಲಾಸ್. ಹಿಂದುಳಿದ ವರ್ಗದವರ ಉದ್ಧಾರದ ಬಗ್ಗೆ ದೊಡ್ಡ ದೊಡ್ಡ ಮಾತನ್ನು ಹೇಳಿಕೊಂಡು ಬಂದಿದ್ದಾರೆ. ತಮಗೆ ಗೊತ್ತಿರುವ ಹಾಗೆ ಇವೊತ್ತು ಯಾವುದೇ ತಾಂತ್ರಿಕ ಕಾಲೇಜುಗಳಲ್ಲಾಗಲಿ, ಅಥವಾ ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಾಗಲಿ, ಇಂಜಿನಿಯರಿಂಗ್ ಅಥವಾ ಎಂ. ಬಿ. ಬಿ. ಎಸ್. ಕಾಲೇಜುಗಳಿಗೆ ಸೇರ ಬೇಕಾದರೆ ನಮ್ಮ ವಿದ್ಯಾರ್ಥಿಗಳಿಗೆ ಯಾವ ಕಂಡೀಷನ್ ಹಾಕಿದೆ ಅದನ್ನು ನೋಡಿದರೆ ಅರ್ಥ ವಾಗುತ್ತದೆ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

50 ಪರ್ಸೆಂಟಿಗಿಂತ ಕಡಿಮೆ ಮಾರ್ಕ್ಸ್ ಬಂದರೆ ಆ ಹುಡುಗರಿಗೆ ಯಾವ ಕಾಲೇಜಿನಲ್ಲೂ ಸೀಟ್ ಸಿಕ್ಕುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮಗೇ ಗೊತ್ತಿದೆ. ಇದರ ಬಗ್ಗೆ ನಾನು ಹೆಚ್ಚು ಹೇಳಬೇಕಾದುದಿಲ್ಲ. ಆ ''ಮೆರಿಟ್'' ಎಂಬ ಶಬ್ದಕ್ಕೆ ಅರ್ಥ ಏನು ಎಂಬು ದನ್ನು ಈ ದಿವಸ ಸರ್ಕಾರದಿಂದ ನಾನು ಕೇಳಬಯಸುತ್ತೇನೆ, ಕಾನ್‌ವೆಂಟ್‌ನವರು ಬಾಯಿ ಪಾಠ ಮಾಡಿ ಪರೀಕ್ಷೆಯಲ್ಲಿ ಬರೆದು ಪಾಸ್ ಆದರೆ ಅವರದು ಮೆರಿಟ್ಟೇ? ಅಥವಾ ಜ್ಞಾಪಕ ಶಕ್ತಿ ಯಿಂದ ಪರೀಕ್ಷೆಯಲ್ಲಿ ಬರೆದು ಪಾಸ್ ಮಾಡಿದರೆ ಅದು ಮೆರಿಟ್ಟೇ? ಇದರಲ್ಲಿ ಯಾವುದು ಮೆರಿಟ್? ಇವತ್ತು ಹಳ್ಳಿ ಹುಡುಗರು ದೊಡ್ಡ ದೊಡ್ಡ ಬುಟ್ಟಿಗಳಲ್ಲಿ, ಕಸ ಹೊರುತ್ತಾರೆ, ಹಾರೆಯಿಂದ ಅಗೆ ಯುತ್ತಾರೆ. ಕುಡುಗೋಲಿನಿಂದ ಕೊಯ್ಯುತ್ತಾರೆ, ಇವರಿಗೆ ಫಿಸಿಕಲ್ ಸ್ಟ್ರೆಂತ್ ಇರುತ್ತದೆ, ಹಾಗಾದರೆ ಇವರದು ಫಿಸಿಕಲ್ ಸ್ಟ್ರೆಂಗ್ತ್ ಮೆರಿಟ್ ಅಲ್ಲವೆ? ಮಾನ್ಯ ಅಧ್ಯಕ್ಷರ ಒಂದು ಮಾತು ಹೇಳುತ್ತೇನೆ, ಯಾರು 100ಕ್ಕೆ 30-35 ನಂಬರ್ ತೆಗೆದುಕೊಳ್ಳುತ್ತಾರೆ ಅಂಥವರಿಗೆ ಶಾಲಾ ಕಾಲೇಜುಗಳಲ್ಲಿ 50 ಪರ್ಸೆಂಟ್ ಸೀಟ್ ರಿಸರ್ವ್ ಮಾಡಬೇಕು, ಈ ಮೆರಿಟ್ ಎಂಬ ಪದವನ್ನು ನಿಮ್ಮ ಕೈಗೆ ಕೊಟ್ಟು ನಾವು ಇವತ್ತು ಕುತ್ತಿಗೆಗೆ ನೇಣನ್ನು ಬಿಗಿಸಿಕೊಂಡಿದ್ದೇವೆ, ಇದರಿಂದ ನಾವು ಇವತ್ತು ಹತರಾಗುತ್ತಿದ್ದೇವೆ, ಇವತ್ತು ಹಳ್ಳಿಗರ, ಚರಮ ಗೀತೆ ಹಾಡುವ ಕಾಲ ಬಂದಿದೆ. ಆದ್ದರಿಂದ ಈ ಮೆರಿಟ್ ಎಂಬ ಪದವನ್ನು ಸಂಪೂರ್ಣವಾಗಿ ತೊಡೆದು ಹಾಕಿ. ಇದರಿಂದ ಹಳ್ಳಿಯ ಜನಗಳಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ. ನೀವು ಇಂಗ್ಲೀಷ್‌ನ್ನು ಕಡ್ಡಾಯ ಮಾಡು ವುದು ಬೇಡ. ತಾವು ಈ ಇಂಗ್ಲೀಷನ್ನು ಕಡ್ಡಾಯ ಮಾಡಿದ್ದರಿಂದ ಇವತ್ತು ಇಂಗ್ಲೀಷ್‌ನಲ್ಲಿ 100ಕ್ಕೆ 10 ಮಾರ್ಕ್ಸ್ ಕೂಡ ತೆಗೆದುಕೊಳ್ಳುತ್ತಿಲ್ಲ. ಆದರೆ ಈ ಇಂಗ್ಲೀಷ್ ಇರುವುದು ಬೇಡ ಎಂದು ಹೇಳುವುದಿಲ್ಲ. ಅವಶ್ಯಕತೆ ಇರುವವರು ಬೇಕಾದವರು, ಅದು ಕಲಿತುಕೊಳ್ಳಲಿ. ಎಲ್ಲಾ ವಿಷಯಗಳಲ್ಲೂ 100ಕ್ಕೆ 70-80 ನಂಬರುಗಳನ್ನು ತೆಗೆದುಕೊಳ್ಳುವವರು ಇಂಗ್ಲೀಷ್‌ನಲ್ಲಿ 30-35 ನಂಬರ್‌ಗಳನ್ನು ತೆಗೆದುಕೊಂಡಿದ್ದಾರೆ. ಇಂಗ್ಲೀಷ್‌ನ ವ್ಯಾಮೋಹಕ್ಕೆ ಬಲಿಯಾಗಿ ಮೆರಿಟ್ ಎಂಬ ಪದವನ್ನು ಇಟ್ಟುಕೊಂಡು ಹಳ್ಳಿ ಹುಡುಗರಿಗೆ ಸರ್ಕಾರ ಇವತ್ತು ಬಹಳ ತೊಂದರೆ ಮಾಡುತ್ತಿವೆ. ಇದು ಸರಿಯಲ್ಲವೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ರೂರಲ್ ಡೆವಲಪ್‌ಮೆಂಟ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಇದು ಬಹಳ ಮುಖ್ಯವಾದುದು. ಈ ವರ್ಷ ಡಿಸೆಂಬರ್‌ನೊಳಗೆ ಪಂಚಾಯ್ತಿ ಗಳ ಚುನಾವಣೆಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈಗ ಚುನಾವಣೆಯು ಯಾಗ ಪ್ರಾರಂಭ

ವಾಗಿದೆ. ಪಂಚಾಯ್ತಿಗಳ ಚುನಾವಣೆಗಳಾದ ಮೇಲೆ ನಿಮ್ಮ ಸರ್ವಾಧಿಕಾರಕ್ಕೆ ಚರಮಗೀತೆ ಯನ್ನು ಹಾಡತಕ್ಕ ಕಾಲ ಬರುತ್ತದೆ. ಮಾನ್ಯ ಪ್ರಭಾಕರ್‌ರವರು ಒಂದು ಮಾತು ಹೇಳಿದರು. ಪ್ರತಿ ಗ್ರಾಮ ಪಂಚಾಯ್ತಿಗಳಿಗೂ ಯಾರ್ಯಾರನ್ನು ನೇಮಕ ಮಾಡಬೇಕೆಂಬುದಕ್ಕೆ ಹೆಸರು ಗಳನ್ನು ಬರೆದು ಕಳುಹಿಸಿ ತಿಳಿಸುವಂತೆ ಕಾಂಗ್ರೆಸ್ ಕಮಿಟಿಗಳಿಗೆ ಬರೆಯಲಾಗುತ್ತದೆ ಎಂದು. ಇದರಲ್ಲಿ ನಾನು ಅಂದುಕೊಂಡಿದ್ದೇನೆ ನಮ್ಮ ಮಾನ್ಯ ಪ್ರಭಾಕರ್‌ರವರಿಗೆ ಅಂಥ ಒಂದು ದುರ್ಬುದ್ಧಿ ಬಂದಿಲ್ಲ ಎಂದು ಆದ್ದರಿಂದ ಇಂಥ ಒಂದು ನಾಮಿನೇಷನ್ ಮಾಡುವ ಮನೋಭಾವ ಏನಿದೆ ಅದನ್ನು ಬಿಟ್ಟು ಪಂಚಾಯ್ತಿಗಳಿಗೆ ನೇರವಾಗಿ ಚುನಾವಣೆಗಳನ್ನು ಮಾಡುವ ಒಂದು ನಿರ್ಧಾರಕ್ಕೆ ಸರ್ಕಾರ ಬರಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನು ರೂರಲ್ ವಾಟರ್ ಸಪ್ಲೈ ಬಗ್ಗೆ ನಮ್ಮ ಅನೇಕ ಮಾನ್ಯ ಸ್ನೇಹಿತ ರುಗಳು ತಮ್ಮ ತಮ್ಮ ಸಲಹೆಗಳನ್ನು, ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಕೆಂಚೇಗೌಡರು ಇದರ ಬಗ್ಗೆ ಮಾತನಾಡುವವರಿದ್ದಾರೆ. ಇವತ್ತು ಗ್ರಾಮಪಂಚಾಯ್ತಿಗಳು ಎಂದರೆ ಸಾಮಾನ್ಯವಾಗಿ ಒಂದು ಚರ್ಮದ ಚೀಲದಲ್ಲೇ ಇರುತ್ತವೆ. ಹೇಗೆ ಎಂದರೆ ಪಂಚಾಯ್ತಿ ಗಳಲ್ಲಿ ಛೇರ್‌ಗೆ ಒಬ್ಬ ಮಾನ್ಯ ಇರಬೇಕೆಂದು ಒಬ್ಬನನ್ನು ಛೇರ್ಮನ್ ಎಂದು ಮಾಡಿರುತ್ತಾರೆ. ಆತನು ಒಂದು ಚರ್ಮದ ಬ್ಯಾಗನ್ನು ಹಿಡಿದುಕೊಂಡು ಅದರಲ್ಲಿ ಒಂದು ಸೀಲು, ಒಂದು ಇಂಕ್ ಪ್ಯಾಡ್, ಒಂದು ಲೆಟರ್‌ಹೆಡ್ ಪುಸ್ತಕ ಇಷ್ಟನ್ನೂ ಇಟ್ಟುಕೊಂಡು ಅವನು ಎಲ್ಲಾ ಕಡೆಯೂ ಸುತ್ತುತ್ತಿರುತ್ತಾನೆ. ಬಿ. ಡಿ. ಓ. ಆಫೀಸಿಗೆ ಹೋದರೂ ಅವನೇ, ತಹಸೀಲ್ದಾರ್ ಆಫೀಸಿಗೆ ಹೋದರೂ ಅವನೇ, ಅವನು ಎಲ್ಲಾ ಕಡೆ ಓಡಾಡುತ್ತಿರುತ್ತಾನೆ. ಎಷ್ಟೋ ಗ್ರಾಮ ಪಂಚಾಯ್ತಿ ಗಳಲ್ಲಿ 4 ದಿವಸವಾದರೂ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಇರುವುದಿಲ್ಲ ಯಾವ ಪಂಚಾಯ್ತಿಯವರು ಒಂದು ಸಾರಿ ದುಡ್ಡು ಕಟ್ಟಿರುತ್ತಾರೆ. ಅಂಥವರಿಗೆ ಆಯಾಯ ವರ್ಷದಲ್ಲೇ ಕೆಲಸ ಮಾಡಿಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಆದರೆ ನಿಮ್ಮ ಅಧಿಕಾರಿಗಳು ಆ ರೀತಿ ಮಾಡದೆ ಒಂದು ವರ್ಷ, ಎರಡು ವರ್ಷ ನಿಧಾನ ಮಾಡುವುದರಿಂದ ಮೆಟೀರಿಯಲ್ಸ್ ಕಾಸ್ಟ್ ಜಾಸ್ತಿಯಾಗಿ ಎಸ್ಟಿಮೇಟ್ ಜಾಸ್ತಿಯಾಗುತ್ತದೆ. ಮತ್ತೆ ಗ್ರಾಮಪಂಚಾಯ್ತಿಯವರನ್ನು ಹಣ ಕೊಡಿ ಎಂದು ಕೇಳುತ್ತಾರೆ. ಇದು ಸರಿಯಲ್ಲ ಉದಾಹರಣೆಗೆ ಹೇಳುವುದಾದರೆ ನಮ್ಮ ಊರಿ ನಲ್ಲಿ ಈಗ 4000 ರೂಪಾಯಿಗಳನ್ನು ಗ್ರಾಮಪಂಚಾಯ್ತಿಯವರು ಕಟ್ಟಿದ್ದಾರೆ, ಮತ್ತೆ ಈಗ ಎಸ್ಟಿಮೇಟ್ ಜಾಸ್ತಿಯಾಗಿದೆ ಆದ್ದರಿಂದ ಇನ್ನೂ ಹಣ ಕೊಡಿ ಎಂದು ಕೇಳುತ್ತಿದ್ದಾರೆ. ಕೆಲವು ಪಂಚಾಯ್ತಿಗಳಿಗೆ ಉತ್ಪತ್ತಿಯೇ ಇರುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಯಾವ ಪಂಚಾಯ್ತಿಯವರು ಒಂದು ಸಾರಿ ಹಣವನ್ನು ಕಟ್ಟುತ್ತಾರೆ ಅಂಥವರನ್ನು ಮತ್ತೆ ಹಣ ಕೊಡಿ ಎಂದು ಕೇಳುವುದಕ್ಕೆ ಹೋಗಬೇಡಿ. ಉಳಿದ ಹಣವನ್ನು ನೀವೇ ಹಾಕಿಕೊಂಡು ಕೆಲಸ ಮಾಡಿಕೊಡಿ.

ಇನ್ನು ಲ್ಯಾಂಡ್ ಆರ್ಮಿ ಬಗ್ಗೆ ಹೇಳಿದ್ದೀರಿ. ಇದು ಒಂದು ದೊಡ್ಡ ಭೂ ಸೇನೆ ಆಗಿದೆ, ಆದರೆ ಇದು ಅನ್ನ ಸೇನೆ ಆಗಿರಬೇಕು ಎಂದು ದಿವಂಗತ ಡಾಕ್ಟರ್ ಲೋಹಿಯಾ ಅವರು ಹೇಳಿದ್ದಾರೆ. ಇವತ್ತು ಎಲ್ಲೆಲ್ಲಿ ಅನಕ್ಷರಸ್ಥರಿದ್ದಾರೆ, ನಿರುದ್ಯೋಗಿಗಳಿದ್ದಾರೆ. ಬಡವರಿದ್ದಾರೆ, ಹಿಂದುಳಿದ ವರ್ಗ ದವರಿದ್ದಾರೆ, ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿದ್ದಾರೆ ಅವರನ್ನೆಲ್ಲಾ ಒಂದು ಕಡೆ ಸಂಘಟನೆ ಮಾಡಿ ಗ್ರಾಮಗಳಲ್ಲಿರತಕ್ಕ ಸರ್ಕಾರಿ ಭೂಮಿಯಾಗಲಿ ಅಥವಾ ಅರಣ್ಯ ಭೂಮಿಯಾಗಲಿ ಫಲವತ್ತಾಗಿದ್ದರೆ ಸಾಮೂಹಿಕವಾಗಿ ಕೋಆಪರೇಟಿವ್ ಬೇಸಿಸ್ ಮೇಲೆ ವ್ಯವ ಸಾಯ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಅವರ ನಿರುದ್ಯೋಗ ಸಮಸ್ಯೆ ನಿವಾರಣೆ ಯಾಗುತ್ತದೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇಲ್ಲಿ ಒಂದು ಕನ್‌ಫ್ಯೂಷನ್ ಇದೆ. ಇಲ್ಲಿ ಮಹಿಳಾ ಸಂಘಗಳ ಬಗ್ಗೆಯೂ ಒಂದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇದೆ, ಅದೇರೀತಿ ವಿಮೆನ್ ಅಂಡ್ ಚಿಲ್ಡ್ರನ್ಸ್ ಬಗ್ಗೆಯೂ ಒಂದು ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಇದೆ. ಇದು ಯಾವುದು, ಅದು ಯಾವುದು ಎಂದು ಸರಿಯಾಗಿ ಅರ್ಥವಾಗುತ್ತಿಲ್ಲ. ಇದಕ್ಕೆ ಸೂಕ್ತ ವಿವರಣೆ ಬೇಕು. ಏಕೆಂದರೆ ಇಲ್ಲಿ ಒಂದು ಗೊಂದಲವಾಗಿದೆ. ನನಗೆ ಗೊತ್ತಿರುವಂತೆ ಈ ಮಹಿಳಾ ಮಂಡಲಿ ಬಗ್ಗೆ ಗ್ರಾಂಟ್ ಕೇಳಿದರೆ ವಿಮೆನ್ ಅಂಡ್ ಚಿಲ್ಡ್ರನ್ಸ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರನ್ನು ಕೇಳಿ ಎಂದು ಹೇಳುತ್ತಾರೆ,

ವಿಮೆನ್ ಅಂಡ್ ಚಿಲ್ಡ್ರನ್ಸ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ರವರನ್ನು ಕೇಳಿದರೆ ಮಹಿಳಾ ಮಂಡಲಿಯವರನ್ನು ಕೇಳಿ ಎಂದು ಹೇಳುತ್ತಾರೆ, ಅಂದರೆ ಅವರ ಮೇಲೆ ಇವರು ಇವರ ಮೇಲೆ ಅವರು ತೋರಿಸುತ್ತಿದ್ದಾರೆ. ಇದಕ್ಕೆ ಒಬ್ಬರೇ ಮಂತ್ರಿಗಳಿರುವುದರಿಂದ ಈ ಎರಡೂ ಇಲಾಖೆಗಳನ್ನು ಒಂದೇ ಕಡೆ ಇರುವಂತೆ ಮಾಡಬೇಕೆಂದು ಹೇಳಬಯಸುತ್ತೇನೆ. ಮತ್ತು ಇನ್ನು ಮುಂದೆ ಈ ನರ್ಸರಿ ಎಜುಕೇಷನ್‌ನ ಮಕ್ಕಳು ಕೂಡ ಈ ಇಲಾಖೆಯ ಕೆಳಗಡೆಯೇ ಬರುವಂತೆ ಮಾಡಬೇಕು. ಈ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂಗಳ ಬಗ್ಗೆ ಸರ್ಕಾರ ಏನೋ ಒಂದು ಯೋಜನೆಯನ್ನು ಹಾಕಿಕೊಂಡಿದೆ ಇದನ್ನು ಬೇಗ ಅಗುವಂತೆ ಮಾಡಬೇಕು ; ಒಟ್ಟಿನಲ್ಲಿ ಹೇಳುವುದಾದರೆ ಈ ಇಲಾಖೆಯವರು ಏನೇನು ಬೇಡಿಕೆಗಳನ್ನು ಮಂಡಿಸಿದ್ದಾರೆ ಇದರ ಬಗ್ಗೆ ನಾವು ಕೊಟ್ಟಿರತಕ್ಕ ಸಲಹೆಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಂತರ ಕ್ರಮ ಕೈಗೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ.ಡಿ. ಬಂಗೇರಾ (ಸುಳ್ಯ).—ಸನ್ಮಾನ್ಯ ಸಭಾಧ್ಯಕ್ಷರೆ. ಇವತ್ತು ನಮ್ಮ ಮೂರು ಜನ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ. ಮೊದಲನೆಯದಾಗಿ ಹೇಳುವುದಾದರೆ ಈ ವರ್ಷ ನಮ್ಮ ರಾಜ್ಯದಲ್ಲಿ ಹರಿಜನ ಗಿರಿಜನರ ಮಕ್ಕಳಿಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ದೊಡ್ಡ ಬರೆಯನ್ನೇ ಹಾಕಿದ್ದಾರೆಂದು ನಾನು ಹೇಳಬಯಸುತ್ತೇವೆ. ಇವತ್ತಿನ ದಿವಸ ಹರಿಜನ ಗಿರಿಜನರ ಮಕ್ಕಳು ಓದು ಕಲಿಯಬೇಕು, ನಾವು ಅವರಿಗೆ ಸ್ಕಾಲರ್‌ಷಿಪ್ ಕೊಡುತ್ತೇವೆಂದು ಹೇಳುತ್ತೀರಿ,

5-30 P. M.

ಒಂದು ಅಫಿಡವಿಟ್ ಸರ್ಟಿಫಿಕೇಟ್ ಬೇಕೆಂದರೆ 10 ರೂಪಾಯಿನಿಂದ 20 ರೂಪಾಯಿಗಳವರೆಗೆ ಖರ್ಚು ಮಾಡಿಕೊಂಡು ಅವರ ತಂದೆ ತಾಯಿಗಳನ್ನು ಬೆಂಗಳೂರು ಪಟ್ಟಣಕ್ಕೆ ಕರೆದುಕೊಂಡು ಬರಬೇಕಾಗಿರುತ್ತದೆ. ಇದು ಒಂದು ಶೋಚನೀಯವಾದ ವಿಷಯವಾಗಿರುತ್ತದೆ. ಇದನ್ನು ಆದಷ್ಟು ಬೇಗ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ರವರು ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ಕ್ಯಾಸ್ಟ್ ಸರ್ಟಿಫಿಕೇಟ್ ಬೇಕಾಗಿದ್ದ ಪಕ್ಷದಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರಾಗಲಿ, ಅಥವಾ ಬಿ.ಡಿ.ಓ. ಆಗಲಿ ಕೊಟ್ಟರೆ ಅದಕ್ಕೆ ಮಾನ್ಯತೆ ಇತ್ತು. ಆದರೆ ಈ ವರ್ಷದಿಂದ ಅದಕ್ಕೆ ಮಾನ್ಯತೆ ಇಲ್ಲದಂತೆ ಮಾಡಿರುತ್ತಾರೆ ಇದನ್ನು ನೋಡಿದರೆ ಹರಿಜನ-ಗಿರಿಜನರಿಗೆ ಒಂದು ರೀತಿಯಾದ ಟ್ಯಾಕ್ಸನ್ನು ಹಾಕತಕ್ಕಂಥಾ ಯೋಜನೆ ಎಂದು ಹೇಳಿದರೆ ತಪ್ಪಾಗಲಾರದು. ಇದಲ್ಲದೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸೋಷಿಯಲ್ ವೆಲ್‌ಫೇರ್ ಆಫೀಸರುಗಳಲ್ಲಿ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರುಗಳು ಇರುತ್ತಾರೆ, ಇವರು ಕೊಡುವಂಥ ಕಿರುಕುಳವನ್ನು ಹೇಳಲು ಸಾಧ್ಯವಿಲ್ಲ. ಅವರು ಎಷ್ಟರಮಟ್ಟಿಗೆ ಕಿರುಕುಳವನ್ನು ಕೊಡುತ್ತಾರೆಂಬ ಬಗ್ಗೆ ಕಳೆದ ವರ್ಷ ಈ ಸದನದಲ್ಲಿಯೇ ಹೇಳಿರುತ್ತೇನೆ. ಇವತ್ತಿಗೂ ಸೋಷಿಯಲ್ ಇನ್‌ಸ್ಪೆಕ್ಟರವರು ಹಾಸ್ಟೆಲ್‌ಗಳಿಗೆ ಹೋಗುವುದು ಕ್ಲಾಸ್‌ಗಳಿಗೆ ಹೋಗುವುದು ಮಕ್ಕಳಿಗೆ ಕಿರುಕುಳವನ್ನು ಕೊಡುವಂಥ ಪರಿಸ್ಥಿತಿ ಮುಂದುವರಿದುಕೊಂಡೇ ಬರುತ್ತಿದೆ. ಇದನ್ನು ಆದಷ್ಟು ಬೇಗ ತಪ್ಪಿಸಬೇಕೆಂದು ಈ ಸದನದಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟವನ್ ಮತ್ತು ಅರ್ಬನ್ ಏರಿಯಾ ಎಂದು ಇರುತ್ತದೆ. ಮಂಗಳೂರು ಪಟ್ಟಣದಲ್ಲಿ ಯಾವ ಹರಿಜನ ಗಿರಿಜನರಿಗೆ ಸಂಬಂಧಪಟ್ಟ ಉಪಾಧ್ಯಾಯರು ಕೆಲಸ ಮಾಡುತ್ತಿಲ್ಲ ಪಟ್ಟಣದಲ್ಲಿ ಕೆಲಸ ಮಾಡತಕ್ಕಂಥ ಉಪಾಧ್ಯಾಯರು ಯಾವಾಗಲೂ ರೂರಲ್ ಏರಿಯಾಕ್ಕೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ. ಅವರು 5-6 ವರ್ಷಗಳಾಗಿದ್ದರೂ ಅವರನ್ನು ವರ್ಗಾಯಿಸುವ ಕೆಲಸವನ್ನು ಮಾಡುವುದಿಲ್ಲ. ಆದರೆ ಅದೇ ಹರಿಜನ ಗಿರಿಜನ ಉಪಾಧ್ಯಾಯರು ಕೆಲಸ ಮಾಡುತ್ತಿದ್ದು ಒಂದು-ಒಂದೂವರೆ ವರ್ಷ ಸರ್ವೀಸ್ ಆಗಿದ್ದರೆ ಸಾಕು ಅವರನ್ನು ಕೂಡಲೇ ವರ್ಗಾಯಿಸುವ ಕೆಲಸ ನಡೆಯುತ್ತವೆ. ಆದ್ದರಿಂದ ಸಾಕಷ್ಟು ಹರಿಜನ-ಗಿರಿಜನ ಉಪಾಧ್ಯಾಯರುಗಳಿಗೆ ಪಟ್ಟಣದಲ್ಲಿ ಕೆಲಸ ಮಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದರೂ ಕೂಡ ಅದೂ ಸಾಧ್ಯವಾಗುತ್ತಿಲ್ಲ,

ಅಧಿಕಾರಿಗಳ ಬಗ್ಗೆ ನಾನು ಹೇಳುವುದಿಲ್ಲ. ಇದರಲ್ಲಿ ವಿಶೇಷವಾಗಿ ಸೋಷಿಯಲ್ ವೆಲ್‌ಫೇರ್ ಇನ್‌ಸ್ಪೆಕ್ಟರ್‌ರವರ ಕೈವಾಡವಿರುತ್ತದೆಂದು ಹೇಳುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಸೇರಿದಂತೆ ಕೊರಗರು ಎನ್ನುವಂಥ ಪಂಗಡವಿರುತ್ತದೆ. ಅವರ ವಿಷಯದಲ್ಲಿ ಮಾತನಾಡುವುದಾದರೆ ಆ ಒಂದು ಪಂಗಡದವರು ನಮ್ಮ ಭಾರತ ದೇಶದಲ್ಲಿ ಕ್ರೈತೋರಿ ಮಾನನಾಡುವಂಥ ಪರಿಸ್ಥಿತಿ ಯಲ್ಲಿರುತ್ತಾರೆ. ಇದು ಒಂದು ಶೋಚನೀಯವಾದ ವಿಷಯವಾಗಿರುತ್ತದೆ. ಅವರು ಇಂದಿಗೂ ಎಂಜಿಲನ್ನವನ್ನು ತಿಂದು ಜೀವಿಸುತ್ತಿದ್ದಾರೆ. ಮದುವೆ, ಮುಂಜಿ, ಜಾತ್ರೆಯಲ್ಲಿ ಈವತ್ತಿಗೂ ಅವರು ಎಂಜಿಲನ್ನವನ್ನು ತಿನ್ನುವುದು ರೂಢಿಯಲ್ಲಿರುತ್ತದೆ. ಇದನ್ನು ತಪ್ಪಿಸಬೇಕೆಂದು 1955ನೇ ಇಸವಿಯಲ್ಲಿ ಮಾನ್ಯ ಸಚಿವರಾದ ಶ್ರೀಮಾನ್ ರಾಚಯ್ಯನವರು ಅಧಿಕಾರದಲ್ಲಿದ್ದಾಗ ಒಂದು ಪರಿಷತ್ತನ್ನು ಕರೆದು ಇದನ್ನು ತೊಲಗಿಸಲು ಹೋರಾಟ ಮಾಡಿದೆವು. ಆದರೆ ಅದು ಇಂದಿನ ವರೆಗೂ ಹಾಗೆಯೇ ಇರುತ್ತದೆ. ಹರಿಜನ ಗಿರಿಜನರಿಗೆ ಇರತಕ್ಕಂಥ ಸೌಲಭ್ಯವೆಂದರೆ ಹೋಟೆಲ್ ಪ್ರವೇಶ, ಟೆಂಪಲ್ ಪ್ರವೇಶ ಇನ್ನಿತರೆ ಸವಲತ್ತುಗಳು ಇವರಿಗೆ ಸಿಗುತ್ತಾ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂಥ ಈ ಕೊರಗರ ಅಭಿವೃದ್ಧಿಗೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಆದ್ದರಿಂದ ಈ ಒಂದು ಪಂಗಡದ ಉದ್ಧಾರಕ್ಕಾಗಿ ಒಂದು ಸಮಿತಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ರೆಸಿಡೆನ್ಷಿಯಲ್ ಸ್ಕೂಲ್‌ಗಳಲ್ಲಿ ಹರಿಜನ ಗಿರಿಜನರಿಗೆ ಯಾವರೀತಿ ಸೌಕರ್ಯಗಳನ್ನು ದೊರಕಿಸಿಕೊಡುತ್ತಿದ್ದೀರಿ ಅದರಂತೆ ಇವರಿಗೂ ಸೌಕರ್ಯಗಳನ್ನು ದೊರಕಿಸಿಕೊಡಬೇಕು.

ಹರಿಜನ ಗಿರಿಜನರಿಗೆ 18 ಪರ್ಸೆಂಟ್ ಹುದ್ದೆಗಳನ್ನು ಮೀಸಲಾಗಿಡುವ ವಿಚಾರದಲ್ಲಿ ಹೇಳುವು ದಾದರೆ ಈ ಜನಾಂಗವನ್ನು ಹುದ್ದೆಗಳಿಗೆ ನೇಮಿಸುವಾಗ ಪ್ರಾತಿನಿಧ್ಯವನ್ನು ಕೊಡುವ ಬಗ್ಗೆ ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಸರ್ಕಾರದೊಡನೆ ಒಂದು ರೀತಿಯಾದ ರಿಲೇಶನ್ ಇಟ್ಟುಕೊಳ್ಳಬೇಕೆಂದು ಇತ್ತ ಕಡೆ ಗಮನವನ್ನು ಸೆಳೆಯುತ್ತೇನೆ. ಬರಿ ಮಾತನಾಡುವುದರಿಂದ ಏನು ಪ್ರಯೋಜನವಿಲ್ಲ. ಕಾರ್ಯತಹ ಮಾಡಬೇಕಾಗಿರುತ್ತದೆ. ಹರಿಜನ ಗಿರಿಜನ ಹಾಸ್ಟೆಲ್ ಗಳಲ್ಲಿ ಎಲೆಕ್ಟ್ರಿಸಿಟಿ ವಾಟರ್ ಫೆಸಿಲಿಟಿ ಸರಿಯಾಗಿ ಇರುವುದಿಲ್ಲ. ಟ್ರೈಬಲ್ ಮಕ್ಕಳಿಗೆ ಗ್ರಾಂಟೆಂದು ಏನು ಕೊಡುತ್ತಿದ್ದಾರೆ ಅದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನವರ ಒಂದು ವಿಳಂಬ ದಿಂದ ಸಕಾಲದಲ್ಲಿ ಸಿಕ್ಕುತ್ತಿಲ್ಲ. ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಅಡುಗೆಯನ್ನು ಮಾಡುತ್ತಾರೆ, ಅಡುಗೆ ಮಾಡುವ ಪಾತ್ರೆ ಪದಾರ್ಥಗಳು ಚೊಕ್ಕಟವಾಗಿರುವುದಿಲ್ಲ. ಪಾತ್ರೆಗಳಿಗೆ ಕಲಾಯಿಯೇ ಇರುವುದಿಲ್ಲ. ಇದರಿಂದ ತಯಾರು ಮಾಡಿದ ಆಹಾರದಿಂದ ಮಕ್ಕಳ ಆರೋಗ್ಯ ಕೆಡುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಆದ್ದರಿಂದ ಒಂದು ವಾರಕ್ಕೆ ಒಂದು ಸಲವಾದರೂ ಮೆಡಿಕಲ್ ಚೆಕಪ್ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಹೆಸರಿಗೆ ಮಾತ್ರ ಡಾಕ್ಟರುಗಳು ಇರುತ್ತಾರೆ. ಇಂಥ ಹಾಸ್ಟೆಲ್‌ಗೆ ಎಂಥವರು ಹೋಗಿ ಇದನ್ನೆಲ್ಲ ಪರಿಶೀಲನೆ ಮಾಡಬೇಕೆಂದು ಇರುತ್ತದೆ. ಆದರೆ ಅವರು ಒಂದು ದಿವಸವೂ ಬಂದು ನೋಡಿದ್ದು ನಾವು ನೋಡಿಲ್ಲ. ಆದ್ದರಿಂದ ಅದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತಾ ಆದಷ್ಟು ಜಾಗ್ರತೆ ಇದರ ವ್ಯವಸ್ಥೆಯನ್ನು ಮಾಡ ಬೇಕೆಂದು ಹೇಳುತ್ತೇನೆ.

ಇನ್ನು ಹಾಸ್ಟೆಲ್‌ಗಳಲ್ಲಿ ಸೀಟುಗಳನ್ನು ಕೊಡುವ ಬಗ್ಗೆ ಕೆಲವು ಕಡೆ ಕೆಲವು ರೀತಿಯ ವ್ಯವಸ್ಥೆ ಯನ್ನು ಮಾಡಿರುತ್ತಾರೆ. ಬ್ಯಾಕ್‌ವರ್ಡ್‌ಕ್ಲಾಸ್‌ನವರಿಗೆ ಇಂತಿಷ್ಟು ಮತ್ತು ಷೆಡ್ಯೂಲ್‌ಕ್ಯಾಸ್ಟ್ ನವರಿಗೆ, ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಇಂತಿಷ್ಟು ಸೀಟುಗಳನ್ನು ಕೊಡಬೇಕೆಂದು ಇರುತ್ತದೆ. ಆದರೆ ಷೆಡ್ಯೂಲ್ ಕ್ಯಾಸ್ಟ್‌ನವರು ಸಮಯಕ್ಕೆ ಸರಿಯಾಗಿ ಬರಲಿಲ್ಲವೆಂದು ಇತರರಿಗೆ ಸೀಟುಗಳನ್ನು ಕೊಟ್ಟಿರುವುದು ಉಂಟು. ಇದನ್ನು ವಿಚಾರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಟೆಂಪರೆನ್ಸ್ ಬೋರ್ಡ್‌ನ ಬಗ್ಗೆ ಮಾನ್ಯ ಸದಸ್ಯರು ಮಾತನಾಡಿದರು. ಟೆಂಪರೆನ್ಸ್ ಬೋರ್ಡ್‌ನಲ್ಲಿ ನಾನು ಕೂಡ ಒಬ್ಬ ಸದಸ್ಯನಾಗಿದ್ದೇನೆ. ಈ ಟೆಂಪರೆನ್ಸ್ ಬೋರ್ಡ್ ಮೂರು ತಿಂಗಳಿಗೊಂದುಸಾರಿ ಸಭೆ ಸೇರಿ ಅರ್ಧ ಗಂಟೆಯಲ್ಲಿ ಮುಗಿಸುತ್ತಾರೆ. ಸದಸ್ಯರು ಏನಾದರು

ಸೂಚನೆಯನ್ನು ಕೊಟ್ಟರೆ ಅವನ್ನೇನು ಕಾರ್ಯಗತ ಮಾಡುವುದಿಲ್ಲ. ಏತಕ್ಕೆಂದರೆ ಇದರಲ್ಲಿ ಒಂದು ವಿಧವಾದ ಸರ್ವಾಧಿಕಾರತ್ವ ನಡೆಯುತ್ತಿದೆ. ಆದ್ದರಿಂದ ಈ ಟೆಂಪರೆನ್ಸ್ ಬೋರ್ಡನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ತೆಗೆದು ಬೇರೆ ಡಿಪಾರ್ಟ್‌ಮೆಂಟಿಗೆ ವರ್ಗಾಯಿಸಿದರೆ ಒಳ್ಳೆಯದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೊಂದು ವಿಷಯವೆಂದರೆ ಶಿಶುಕಲ್ಯಾಣ ಇಲಾಖೆಯವರು ಬಾಲಭವನವೆಂದು ಬೆಂಗಳೂರಿನಲ್ಲಿ ಮಾಡಿದ್ದಾರೆ ಮೂರು ಬಾಲಭವನಗಳನ್ನು ತೆರೆಯುವ ಯೋಜನೆಯನ್ನು ಇಟ್ಟುಕೊಂಡಿರುತ್ತಾರೆ. ಉಡುಪಿ ಮೈಸೂರು, ಮತ್ತು ದಾವಣಗೆರೆಯಲ್ಲಿ, ಅದೇರೀತಿಯಲ್ಲಿ ಮಂಗಳೂರಿನಲ್ಲೂ ಒಂದು ಬಾಲಭವನವನ್ನು ತೆರೆಯಬೇಕೆಂದು ಹೇಳುತ್ತೇನೆ. ದಾವಣಗೆರೆ, ಮೈಸೂರು, ಮಂಗಳೂರುಗಳಲ್ಲಿ ಇನ್ನೂ ಕಾರ್ಪೊರೇಷನ್ ಆಗಬೇಕಾಗಿದೆ, ಆದ್ದರಿಂದ ಈ ಮಂಗಳೂರಿನಲ್ಲಿ ಬಾಲಭವನ ಏತಕ್ಕೆ ಬೇಕು ಎಂದು ಹೇಳುತ್ತಿದ್ದಾರೆ. ಆದರೂ ಮಂಗಳೂರಿನಲ್ಲಿ ಈ ಬಾಲಭವನವನ್ನು ಬೇಗ ತೆಗೆಯಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ),—ಮಾನ್ಯ ಅಧ್ಯಕ್ಷರೇ, ನಾನು ಈ ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಏನನ್ನೂ ಮಾತನಾಡಲಾರೆ. ಆದರೂ ನಮ್ರತೆಯಿಂದ ಕೆಲವೊಂದು ಸೂಚನೆಗಳನ್ನು ಸರ್ಕಾರಕ್ಕೆ ಮಾಡಬೇಕೆಂದು ಇಷ್ಟಪಡುತ್ತೇನೆ. ಈ ಹಿಂದುಳಿದ ವರ್ಗದವರು ಹರಿಜನ ಗಿರಿಜನರು, ಲಂಬಾಣಿ ಬಂಧುಗಳು ಏನಿದ್ದಾರೆ ಅವರ ಶಿಕ್ಷಣದ ಕಡೆಗೆ ತಾವು ಲಕ್ಷ್ಯವನ್ನು ಕೊಡುತ್ತಿದ್ದೀರಿ. ಆದರೆ ಅವರ ಆರ್ಥಿಕ ಸಮಸ್ಯೆಯ ಕಡೆಗೆ ಗಮನ ಕೊಡುತ್ತಿಲ್ಲ. ಇನ್ನು ಮುಂದೆಯೂ ಈ ರೀತಿಯಾಗಿಯೇ ಹೋಗುವುದಾದರೆ ಸಾವಿರಾರು ವರ್ಷಗಳಾದರೂ ಅವರ ಆರ್ಥಿಕ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವರ ಆರ್ಥಿಕ ಸಮಸ್ಯೆ ತೀವ್ರವಾಗಿ ಪರಿಹಾರವಾಗುವ ಬಗ್ಗೆ ತಾವು ಪ್ರಯತ್ನಮಾಡಬೇಕು. ನಾನೂ ಸಹ ಲ್ಯಾಂಡ್ ಟ್ರಿಬ್ಯುನಲ್ ಮೆಂಬರ್ ಇದ್ದೇನೆ. ಹರಿಜನರಿಗೆ ಭೂಮಿಯನ್ನು ಕೊಡತಕ್ಕಂಥ ವಿಷಯದಲ್ಲಿ ಅನೇಕ ಸಮಸ್ಯೆಗಳಿವೆ ಈ ಸಮಸ್ಯೆಗಳು ಈಗಲೇ ಪರಿಹಾರವಾಗುವುದಕ್ಕೆ ಸಾಧ್ಯವಿಲ್ಲ ಅವುಗಳನ್ನು ಹಂತಹಂತವಾಗಿ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅನಂತರ ಎಲ್ಲೆಲ್ಲಿ ಸರ್ಕಾರಿ ಗುಡ್ಡಗಳಿವೆಯೋ ಆ ಗುಡ್ಡಗಳಲ್ಲಿ ಭೂತರಕ್ಷಿ ನಾರು ಸಿಕ್ಕುತ್ತದೆ. ಹಳೇ ಮೈಸೂರಿನ ಕಡೆ ಇದಕ್ಕೆ ಏನು ಹೇಳುತ್ತಾರೋ ನನಗೆ ಗೊತ್ತಿಲ್ಲ. ಈ ಗುಡ್ಡಗಳಲ್ಲಿ ಲಂಬಾಣಿ ಜನರಿಗೆ ಒಂದು ಏರಿಯಾವನ್ನು ಕೊಟ್ಟು ಅಲ್ಲಿ ಒಂದು ಕಮ್ಯುನಿಟಿ ಸೆಂಟರನ್ನು ತೆಗೆದು ಈ ನಾರನ್ನು ಮತ್ತು ಸೆಣಬನ್ನು ತೆಗೆಯತಕ್ಕಂಥ ವ್ಯವಸ್ಥೆಯನ್ನು ಅವರಿಗೆ ಮಾಡಿಕೊಡಬೇಕು. ಇದರಿಂದ ಆ ಜನಗಳ ಜೀವನಕ್ಕೆ ಅನುಕೂಲವಾಗುತ್ತದೆ. ಹಳ್ಳಿಗಳಲ್ಲಿ ಲಂಬಾಣಿ ಜನರು ಮೊದಲು ಸೆಣಬಿನಿಂದ ಚೀಲವನ್ನು ಮಾಡತಕ್ಕಂಥ ಉದ್ಯೋಗ ಮಾಡುತ್ತಿದ್ದರು. ಇವತ್ತು ಹರಿಜನರಲ್ಲಿ ಕೆಲವರು ಬಿ.ಎ ಬಿ.ಟಿ, ಎಂ.ಎ ಯನ್ನು ಮಾಡಿದ್ದಾರೆ. ಅಲ್ಲಿ ಅವರು ಶೇವ್ ಮಾಡಿಕೊಳ್ಳುವುದಕ್ಕೆ ಪ್ರತ್ಯೇಕವಾದ ವ್ಯವಸ್ಥೆಯಿಲ್ಲ. ಅವರು ಎದುರಿಗೆದುರು ಕುಳಿತುಕೊಂಡು ಷೇವ್ ಮಾಡಿಕೊಳ್ಳುತ್ತಿದ್ದಾರೆ. ಹರಿಜನರಿಗೆ ಷೇವ್ ಮಾಡೆಂದರೆ ಬಾರಬರ್ ಉದ್ಯೋಗವನ್ನೇ ಬಿಡುತ್ತೇವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ತಾವು ಗಮನ ಹರಿಸಬೇಕು. ಹಳ್ಳಿಗಳಲ್ಲಿ ಹರಿಜನರ ಮನೆಗಳು 3 ಅಥವಾ 4 ಇರುತ್ತವೆ. ಅಲ್ಲಿ ಅವರ ಮಕ್ಕಳಿಗೆ ಪ್ರೈಮರಿ ಮತ್ತು ಹೈಸ್ಕೂಲು ಎಜುಕೇಷನ್ ಕೊಡುವುದಕ್ಕೆ ಸಾಧ್ಯವಿಲ್ಲವಾಗಿದೆ. ಹಳ್ಳಿಗಳಲ್ಲಿಯ ಶಾಲೆಗಳೆಂದರೆ ಶಿಕ್ಷಕರ ಉಪಜೀವನದ ವ್ಯವಸ್ಥೆ ಆಗಿದೆ. ಇದರಿಂದ ಈ ವರ್ಗದ ಮಕ್ಕಳಿಗೆ ಅಲ್ಲಿ ಸರಿಯಾದ ರೀತಿಯಲ್ಲಿ ಪ್ರೈಮರಿ ಶಿಕ್ಷಣ ಮತ್ತು ಹೈಸ್ಕೂಲು ಶಿಕ್ಷಣ ದೊರಕುತ್ತಾ ಇಲ್ಲ. ಆದ್ದರಿಂದ ಮೊದಲು ಈ ಎಲ್ಲಾ ಹರಿಜನಗಿರಿಜನರನ್ನು ತಾಲ್ಲೂಕು ಪ್ಲೇಸ್‌ನಲ್ಲಿ ಒತ್ತಟ್ಟಿಗೆ ತಂದರೆ ಅವರಿಗೆ ಶಿಕ್ಷಣದ ಬಗ್ಗೆ ಹೆಚ್ಚು ಲಕ್ಷ್ಯ ಕೊಡಲು ಅನುಕೂಲವಾಗುತ್ತದೆ. ನನ್ನ ಕ್ಷೇತ್ರವಾದ ಈ ಸಿಂದಗಿ ತಾಲ್ಲೂಕಿನಲ್ಲಿ ಅಂತರಗಂಗಿ ಎಂಬ ಹಳ್ಳಿಯಿದೆ. ಈ ಹಳ್ಳಿಯಲ್ಲಿ ಈ ಹರಿಜನಗಿರಿಜನರ ಗುಡಿಸಲುಗಳಲ್ಲಿ ನೆರಿಕೆಯನ್ನು ಕಟ್ಟಿಕೊಂಡು ಆ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ಅಲ್ಲಿ ಸೈಟು ಸಿಕ್ಕುವುದಿಲ್ಲ. ಆದ್ದರಿಂದ ಹಳ್ಳಿಯಲ್ಲಿರುವ ಎಲ್ಲಾ ಹರಿಜನಗಿರಿಜನರನ್ನೂ ತಾಲ್ಲೂಕ್ ಪ್ಲೇಸ್ ಅಥವಾ ಡಿಸ್ಟ್ರಿಕ್ಟ್ ಪ್ಲೇಸ್‌ಗೆ ತಂದು ಅವರಿಗೆ ಎಲ್ಲಾ ವಿಧದಲ್ಲೂ ಅನುಕೂಲ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಏಕೆಂದರೆ ಇಲ್ಲಿ ನಾನೂ ಒಬ್ಬ ಹರಿಜನ ಪ್ರತಿನಿಧಿಯಾಗಿ ಇದ್ದೇನೆ.

ಬಹಳ ಕಾಲದಿಂದಲೂ ಇರತಕ್ಕಂಥ ಈ ಹರಿಜನ ಸಮಸ್ಯೆಗಳು ನನ್ನ ಮೇಲೆ ಪರಿಣಾಮವನ್ನುಂಟು ಮಾಡಿದೆ. ಈಗ ಎಲ್ಲೆಲ್ಲೂ ಈ ಹರಿಜನರು ಎಂದರೆ ತಿರಸ್ಕಾರ ಭಾವನೆ ಇದೆ. ಮಹಾತ್ಮ ಗಾಂಧೀಜಿಯವರು ಈ ಒಂದು ಸಮಸ್ಯೆಯನ್ನು ಹೋಗಲಾಡಿಸಲು ಬಹಳ ಹೋರಾಟಮಾಡಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ಹಳ್ಳಿಯಲ್ಲಿರುವ ಎಲ್ಲಾ ಹರಿಜನ ಗಿರಿಜನರನ್ನು ಹಳ್ಳಿಯಿಂದ ತಾಲ್ಲೂಕು ಪ್ಲೇಸ್ ಮತ್ತು ಡಿಸ್ಟ್ರಿಕ್ಟ್ ಪ್ಲೇಸ್‌ಗಳಿಗೆ ತಂದು ಅವರಿಗೆ ಪ್ರೈಮರಿ ಮತ್ತು ಹೈಸ್ಕೂಲು ಶಿಕ್ಷಣವನ್ನು ಕೊಡಬೇಕೆಂದು ಒತ್ತಾಯವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಇವತ್ತಿನ ದಿವಸ ಬೆಂಗಳೂರಿನಲ್ಲಿರುವ ಕಾಲೇಜುಗಳನ್ನು ನೋಡುತ್ತಿದ್ದೇನೆ; ಮತ್ತು ನಮ್ಮ ಸಿಂದಗಿ ತಾಲ್ಲೂಕಿನಲ್ಲಿರುವ ಕಾಲೇಜನ್ನೂ ನೋಡುತ್ತಿದ್ದೇನೆ. ಇಲ್ಲಿ ಏನಾಗಿದೆ ಎಂದರೆ ಸಣ್ಣ ಸಣ್ಣ ಊರುಗಳಲ್ಲಿರತಕ್ಕಂಥ ಹೈಸ್ಕೂಲುಗಳು ಗ್ರಾಂಟ್ ಸಲುವಾಗಿ ಇರುತ್ತವೆಯೇ ವಿನಃ ಸರಿಯಾದ ಎಜುಕೇಷನ್ ಕೊಡುವುದಕ್ಕೆ ಇರುವುದಿಲ್ಲ. ಇವತ್ತಿನದಿವಸ ಈ ಹೈಸ್ಕೂಲುಗಳಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಕ್ಕುತ್ತಾ ಇಲ್ಲ. ಇದರಿಂದ ಹರಿಜನ ಗಿರಿಜನ ಮಕ್ಕಳಿಗೆ ಬಿ.ಎ. ಗಿಂತ ಹೆಚ್ಚಿನ ವಿದ್ಯಾಭ್ಯಾಸ ಇಲ್ಲಿ ದೊರಕುವುದಿಲ್ಲ. ಆದ್ದರಿಂದ ತಾಲ್ಲೂಕು ಪ್ಲೇಸ್‌ನಲ್ಲಿ ಅವರಿಗಾಗಿ ಒಂದು ಕಾಲೋನಿ ಮಾಡಿ, ಅವರನ್ನೆಲ್ಲಾ ಒತ್ತಟ್ಟಿಗೆ ತರಬೇಕು ಮತ್ತು ಅವರ ಹೆಚ್ಚಿನ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಇಲ್ಲಿ ಸರ್ಕಾರಿ ಏರಿಯಾ ಎಂದು ಏನಿದೆ, ಇಲ್ಲಿ ಭೂಮಿಯನ್ನು ಎಕರೆವಾರು ಹಂಚುವುದಕ್ಕೆ ಸಾಧ್ಯವಿಲ್ಲವಾಗಿದೆ. ಇವತ್ತು ಇಲ್ಲಿ ನೂರಾರು ನಿಂಬೆಗಿಡ, ಚಿಕ್ಕು ಗಿಡ, ಮಾವಿನ ಗಿಡಗಳನ್ನು ಬೆಳೆಸಬೇಕೆಂದು ಅಗ್ರಿ ಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಮತ್ತು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರು ಯೋಚನೆ ಮಾಡಿದ್ದಾರೆ. ಈ ಕೆಲಸವನ್ನು ಹಿಂದುಳಿದ ವರ್ಗದ ಜನರಿಗೆ ಕೊಡಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಮಾನ್ಯ ರಾಥೋಡ್‌ರವರನ್ನು ಕೇಳುತ್ತೇನೆ. ಈ ಬಗ್ಗೆ ಒಂದು ಉದಾಹರಣೆಯನ್ನು ಕೊಡಬೇಕಾದರೆ ದೇವರಹಿಪ್ಪರಿಗಿಯಿಂದ ಬಿಜಾಪುರದವರೆಗೆ ಮತ್ತು ನಾಗಠಾಣದಿಂದ ಬಿಜಾಪುರದವರೆಗೆ ಬ್ಯಾಕ್‌ವರ್ಡ್ ತಾಲ್ಲೂಕುಗಳಲ್ಲಿರುವ ಎಲ್ಲಾ ಎಕರೆಗಳನ್ನು ಕೊಡಿಸಿದರೆ ಸುಮಾರು 50 ಸಾವಿರ ಎಕರೆ ಸಾಮಾನ್ಯ ಭೂಮಿಸಿಕ್ಕುತ್ತದೆ. ಇದರಲ್ಲಿ ಒಂದೊಂದು ಎಕರೆಯೊಳಗೆ ಮಾವಿನ ಗಿಡಗಳನ್ನು, ಚಿಕ್ಕುಗಿಡಗಳನ್ನು ಮತ್ತು ನಿಂಬೆಗಿಡಗಳನ್ನು ಹಾಕಬಹುದು. ಈ ಭೂಮಿಯನ್ನು ಹಿಂದುಳಿದವರಿಗೆ ಕೊಡಬೇಕು. ಇದನ್ನು ಬೆಳೆಸಲು ಅವರಿಗೆ ತಕಾವಿ ಲೋನ್ ಕೊಟ್ಟರೆ ಗಿಡಗಳು ಡೆವಲಪ್ ಆಗುವುದಿಲ್ಲ ಎಲ್ಲೆಲ್ಲಿ ನೀರಾವರಿ ಸೌಲಭ್ಯಗಳು ಇದೆ ಅಂತಹ ಕಡೆಗಳಲ್ಲಿ ಅವರು ಈ ಕೆಲಸವನ್ನು ಮಾಡುವುದಕ್ಕೆ ಕೊಡಬೇಕು. ಈ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಭಾವಿಯನ್ನು ಹೊಡೆದುಕೊಳ್ಳಿ ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ. ಈ ಬಗ್ಗೆ ನಾನು ಅಲಿಗೇಷನ್ ಮಾಡುವುದಿಲ್ಲ. ಇವತ್ತು ತಾವು ಅಲ್ಲಿ ಹೋಗಿ ನೋಡಿ. ಆಮೇಲೆ ಹಂಡಿಗನೂರು ತಾಂಡೆ ಮತ್ತು ಕೊಕಮನೂರತಾಂಡದಲ್ಲಿ ಮನೆಕಟ್ಟುವ ಕೆಲಸ ಪ್ರಾರಂಭವಾಗಿ ಬಹಳ ದಿವಸ ಆದವು ಅಲ್ಲಿ ಮನೆಗಳನ್ನು ಕಟ್ಟುವ ಕೆಲಸ ಇನ್ನೂ ಮುಗಿದಿಲ್ಲ. ಆ ಮನೆಗಳನ್ನು ಕಟ್ಟಿ ಮುಗಿಸುವ ಬಗ್ಗೆ ತಾವು ಏನು ಪ್ರಯತ್ನ ಮಾಡುತ್ತಿದ್ದೀರಿ ಎಂದು ಕೇಳುತಿದ್ದೇನೆ. ಈ ಪ್ರಜಾಪ್ರಭುತ್ವದ ಬಾಲ್ಯಾವಸ್ಥೆಯಲ್ಲಿ ಕೆಲವು ಸಮಯದಲ್ಲಿ ಮಿನಿಷ್ಟರುಗಳಿಂದಲೂ ತಪ್ಪಾಗುತ್ತದೆ. ಈ ಒಂದು ಕೆಲಸದಲ್ಲಿ ಅಧಿಕಾರಿಗಳಿಗೆ ಸರಿಯಾಗಿ ಆರ್ಡರ್ ಕೊಡುವುದಿಲ್ಲ ಇದರಿಂದ ಅಧಿಕಾರಿಗಳು ಜನರನ್ನು ಸತಾಯಿಸತಕ್ಕಂಥ ಪ್ರಸಂಗ ಬರುತ್ತದೆ. ಇದು ಕಾಂಟ್ರಾವರ್ಷಿಯಲ್ ಕಾಂಪ್ಲಿಕೇಟೆಡ್ ಮ್ಯಾಟರ್. ಇದರಲ್ಲಿ ಒಬ್ಬ ಅಧಿಕಾರಿಯು ಸಸ್ಪೆಂಡ್ ಆಯಿತು ಎಂದು ಕೇಳಿದೆ. ಅವರು ಯಾವ ಆಫೀಸರ್ ಎಂದು ನನಗೆ ಗೊತ್ತಿಲ್ಲ. ಯಾವೊಬ್ಬ ಆಫೀಸರ್‌ಗೆ ಗಂಡಾಂತರ ಬರುವುದಕ್ಕೆ ನಾವೇ ಕಾರಣರು ಇರುತ್ತೇವೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಈ ಬಗ್ಗೆ ಎಗ್ಜಾಮಿನ್ ಮಾಡಿದಮೇಲೆ ಅಲ್ಲಿ ಒಬ್ಬ ಆಫೀಸರನ್ನು ಹಾಕುವುದಕ್ಕೆ ಅಡ್ಡಿ ಇಲ್ಲ. ಈ ಮನೆಗಳನ್ನು ಏನು ಕಟ್ಟುತ್ತಿದ್ದಾರೆ. ಇದರ ಬಗ್ಗೆ ನಾನೊಂದು ಸೂಚನೆಯನ್ನು ಮಾಡುತ್ತೇನೆ. ಮಾನ್ಯ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಮತ್ತು ಮಾನ್ಯ ಕೋಆಪರೇಟಿವ್ ಮಿನಿಸ್ಟರ್‌ರವರು ಕುಳಿತುಕೊಂಡು ಈ ಬಗ್ಗೆ ವಿಚಾರ ಮಾಡಬೇಕು. ನಾನು ಹೇಳುವುದೇನೆಂದರೆ 2 ಉದ್ದದ ಗೋಡೆಗಳನ್ನು ಹಾಕಬೇಕು. ಇದರಿಂದ 10 ಮನೆಗಳು ಅಥವಾ 100 ಮನೆಗಳನ್ನು ಮಾಡಬೇಕು. ತಾವು ಗೋಡೆಗಳನ್ನು ಕಟ್ಟಿಸಿಕೊಟ್ಟರೆ ಅವರು ನೆರಿಕೆಗಳನ್ನು ಕಟ್ಟಿಕೊಳ್ಳುತ್ತಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಮನೆಗಳನ್ನು ಕುದುರೆ ಲಾಯದ ತರಹ ಕಟ್ಟಬೇಕೇ.

ಶ್ರೀ ಎಸ್. ವೈ. ಪಾಟೀಲ್.—ಅಷ್ಟು ದೊಡ್ಡದಾಗಿ ಕಟ್ಟುವುದಕ್ಕೆ ಅವರಿಗೆ ಲ್ಯಾಂಡ್ ಸಿಕ್ಕುವುದಿಲ್ಲ. ಅದರ ಸಲುವಾಗಿ ನಿಮ್ಮ ಬಂಗಲೆಯ ತರದ ಮನೆಗಳನ್ನು ಕಟ್ಟಿ ಎಂದು ತಮ್ಮಲ್ಲಿ ಪ್ರಾರ್ಥಿಸುತ್ತೇನೆ. ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿ ಎಂದು ನಾನು ಹೇಳುವುದಿಲ್ಲ. ಮಾನ್ಯ ಸೋಷಿಯಲ್ ವೆಲ್‌ಫೇರ್ ಇಲಾಖೆಯ ಮಂತ್ರಿಯವರಾದ ವಿ. ಎಲ್. ಪಾಟೀಲ್‌ರವರು ನನಗೆ ಬಹಳ ವರ್ಷಗಳಿಂದ ಪರಿಚಯಸ್ಥರಾಗಿದ್ದಾರೆ. ಅವರು ಎಷ್ಟೋ ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗಾಗಿ ಸಣ್ಣ ಪುಟ್ಟ ಖರ್ಚನ್ನು ಮಾಡಿದ್ದಾರೆ. ಇನ್ನು ಮಾನ್ಯ ಪ್ರಭಾಕರ್‌ರವರು ಹಳ್ಳಿಗಳಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಆ ಬಗ್ಗೆ ಟೀಕೆ ಮಾಡುವುದು ಏನಿಲ್ಲ. ಅವರು ಪಕ್ಕಾ ಗಾಂಧಿವಾದಿಗಳು ಇದ್ದಾರೆ. ಅವರ ತಪ್ಪು ನನಗೆ ಗೊತ್ತಾಗಿಲ್ಲ. ಗೊತ್ತಾದರೆ ಟೀಕೆ ಮಾಡುವುದನ್ನು ನಾವು ಬಿಡುವುದಿಲ್ಲ. ಇನ್ನು ಈ ಹರಿಜನಗಿರಿಜನರ ಆರ್ಥಿಕ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಹೇಳಬೇಕೆಂದರೆ ಈ ಹಳ್ಳಿಗಳಲ್ಲಿರುವ ಆರ್ಥಿಕ ಸಮಸ್ಯೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಗ್ಗೆ ನಾನು ಯಾರನ್ನೂ ಟೀಕೆ ಮಾಡುವುದಿಲ್ಲ. ಈ ಬಗ್ಗೆ ರಕ್ತಜನ್ಯವಾಗಿ ಬಂದಿರತಕ್ಕ ಆರ್ಥಿಕ ಸಮಸ್ಯೆಗಳನ್ನು ಬಿಡಿಸುವಲ್ಲಿ ಹಳ್ಳಿಗಳಲ್ಲಿಯ ಹರಿಜನ ಗಿರಿಜನ ಲಂಬಾಣಿ ಇತ್ಯಾದಿ ಹಿಂದುಳಿದ ಬಂಧುಗಳ ಆರ್ಥಿಕ ಸ್ಥಿತಿ ಸುಧಾರಿಸುವ ಬಗ್ಗೆ ಸರಕಾರದ ಈಗಿನ ಪ್ರಯತ್ನ ಸಾಲದು ಬೆಂಗಳೂರದಂಥ ಶಹರ್‌ವಾಸಿಗಳಂತೆ ಹಳ್ಳಿಗರ ಸ್ಥಿತಿ ಸುಧಾರಿಸುವಂತೆ ಮಾಡಬೇಕು. ಮಾನ್ಯ ರಾಥೋಡ್ ಅವರೂ ದೊಡ್ಡ ಊರಿನಲ್ಲಿದ್ದುದರಿಂದ ಮುಂದೆ ಬಂದರು ಸಣ್ಣ ಊರಿನಲ್ಲಿದ್ದಿದ್ದರೆ ಬರುತ್ತಿರಲಿಲ್ಲ. ಸಿಲಬಸ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ, ಸಿಲಬಸ್‌ಗಳು ಮಾತೃಭಾಷೆಯಲ್ಲಿದ್ದರೆ ಹುಡುಗರಿಗೆ ಚೆನ್ನಾಗಿ ತಿಳಿಯುತ್ತವೆ. ಬೇರೆ ಭಾಷೆಯಲ್ಲಿದ್ದರೆ ತಿಳಿದುಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಇಂಗ್ಲೀಷಿನಲ್ಲಿ 35 ಪರ್ಸೆಂಟ್ ತೆಗೆದುಕೊಳ್ಳತಕ್ಕ ಹುಡುಗ ಯಾವರೀತಿ ಎಂ.ಬಿ.ಬಿ.ಎಸ್. ಮತ್ತು ಎಫ್ ಆರ್.ಸಿ.ಎಸ್. ಪರೀಕ್ಷೆಗಳನ್ನು ಪಾಸ್ ಮಾಡುತ್ತಾನೆ ಎಂಬುದನ್ನು ಯೋಚನೆ ಮಾಡಬೇಕು. ದೊಡ್ಡ ದೊಡ್ಡ ಮನುಷ್ಯರ ಮನೆಯವರು ಇಂಗ್ಲೆಂಡಿಗೆ ಅಥವಾ ಅಮೆರಿಕಾಕ್ಕೆ ಹೋಗಿಬರುತ್ತಾರೆ, ಸಾಮಾನ್ಯ ಜನತೆಗೆ ಅಲ್ಲಿಗೆ ಹೋಗುವುದಕ್ಕೆ ಶಕ್ತಿ ಇಲ್ಲ. ಇವತ್ತು ವಿದ್ಯಾಭ್ಯಾಸ ಇಲಾಖೆ ತಮಗೆ ಸಂಬಂಧವಿಲ್ಲದೇ ಇದ್ದರೂ ತಾವು ಸಂಬಂಧವಿಟ್ಟುಕೊಂಡು ಮಾತೃಭಾಷೆಯಲ್ಲಿ ಶಾಲೆಗಳಲ್ಲಿ ಸಿಲಬಸ್‌ಗಳು ಇರುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ನಾನ್ ಅಫಿಷಿಯಲ್ ಜನರಾದ ನಾವು ನಿರಪರಾಧಿ ಅಧಿಕಾರಿಗಳಿಗೆ ತೊಂದರೆ ಕೊಡಬಾರದು. ಅಂತಹ ಒಂದು ಸಂದರ್ಭ ಬರಬಾರದು ಎಂದು ಹೇಳಿ ನನಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪ್ಪಣೆ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ) -- ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಮುಂದೆ ಇಟ್ಟಿರುವ ಕಮ್ಯೂನಿಟಿ ಡೆವೆಲಪ್‌ಮೆಂಟ್, ಸೋಷಿಯಲ್ ವೆಲ್‌ಫೇರ್ ಮತ್ತು ಮಹಿಳೆ ಮತ್ತು ಶಿಶುಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಅದರಲ್ಲೂ ಕಮ್ಯೂನಿಟಿ ಡೆವೆಲಪ್ಮೆಂಟ್ ವಿಚಾರದಲ್ಲಿ ಇಟ್ಟಿರುವ ಬೇಡಿಕೆಯನ್ನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛಿಸುತ್ತೇನೆ. ಗ್ರಾಮಿಣಾಭಿವೃದ್ಧಿ ಇಲಾಖೆಯ ವರದಿಯಲ್ಲಿ ಏನು ಹೇಳಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದರಲ್ಲಿ "The Panchayat Raj institutions namely the village panchayats, the Taluka Development Boards, and the District Development Councils have functioned well. The Taluk Development Boards, have worked well under the Administrators. During the year, a sum of Rs. 4,23,76,400 has been distributed amongst the village panchayats and Taluka Development Boards as Land Revenue Assignment.' ಎಂದು ಹೇಳಿದ್ದೀರಿ. ಮತ್ತೆ "During the year under report the programme will continue to be oriented towards securing the fullest development of the material and human resources of rural areas, development of local leadership

and local institutions, with a view to raise the rural community to higher levels of living by active participation and initiative of people themselves," ಎಂದು ರಿಪೋರ್ಟ್‌ನಲ್ಲಿ ಹೇಳಿದ್ದೀರಿ. ಇದನ್ನು ಅವರು ನಿಜವಾಗಿ ಸಾಧನೆ ಮಾಡಿದ್ದಾರೆಯೋ ? ಎಂಬ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ಹಿಂದಿನಿಂದಲೂ ನಮ್ಮ ದೇಶದ ಮುಖಂಡರು ಸುಮಾರು ಮೂರು ಘಟಕಗಳಲ್ಲಿ ಆಡಳಿತ ನಡೆಯಬೇಕು ಎಂಬ ಉದ್ದೇಶವನ್ನಿಟ್ಟುಕೊಂಡು ಬಂದಿದ್ದಾರೆ. ತಾಲ್ಲೋಕ್‌ಬೋರ್ಡ್, ಪಂಚಾಯಿತಿ, ಹಾಗೂ ಸರ್ಕಾರ ಈ ಮೂರು ಘಟಕಗಳಿಂದ ಆಡಳಿತ ನಡೆಸಬೇಕು ಎಂಬ ಉದ್ದೇಶ ಇದೆ. ಗ್ರಾಮಮಟ್ಟದಲ್ಲಿ ಅವರು ಹೇಳಿರುವ ಪ್ರಕಾರ ಮುಖಂಡರುಗಳು ತಯಾರಾಗಬೇಕು. ಎರಡನೆಯದಾಗಿ ಗ್ರಾಮಾಂತರಗಳಲ್ಲಿ ತಮ್ಮ ತಮ್ಮ ಅಭಿವೃದ್ಧಿ ಕಾರ್ಯಗಳನ್ನು ಗ್ರಾಮದ ಜನರೇ ಮಾಡಿಕೊಳ್ಳಲು ಅವರ ಕೈಯ್ಯಲ್ಲಿ ಆಡಳಿತ ನಡೆಸತಕ್ಕ ಅಧಿಕಾರ ಬಂದಲ್ಲಿ, ಆಡಳಿತ ಅನುಭವ ಬಂದಲ್ಲಿ ಅವರ ಅಭಿವೃದ್ಧಿ ಕಾರ್ಯಗಳನ್ನು ಒಳ್ಳೆಯ ರೀತಿಯಿಂದ, ನಿಷ್ಠೆಯಿಂದ ಮಾಡುತ್ತಾರೆ ಎಂಬ ಸದುದ್ದೇಶದಿಂದ ಆ ಘಟಕಗಳನ್ನು ಮಾಡಲುದ್ದೇಶಿಸಲಾಗಿದೆ ಉದಾಹರಣೆಗಾಗಿ ಹೇಳಬೇಕಾದರೆ ಗ್ರಾಮಪಂಚಾಯತಿಗಳು. ಒಂದು ಗ್ರಾಮದಲ್ಲಿ ಗ್ರಾಮದ ಏಳಿಗೆಯಾಗಬೇಕಾದರೆ ಅಲ್ಲಿರತಕ್ಕ ಪಂಚಾಯತಿ ಚೆನ್ನಾಗಿ ಕೆಲಸ ಮಾಡಬೇಕು. ಅಲ್ಲಿರುವ ಸೊಸೈಟಿ ಚೆನ್ನಾಗಿ ಕೆಲಸ ಮಾಡಬೇಕು. ಶಾಲೆಗಳು ಚೆನ್ನಾಗಿ ಕೆಲಸ ಮಾಡಬೇಕು. ಇವೆಲ್ಲಾ ತಾಲ್ಲೂಕು ಬೋರ್ಡ್ ಅಥವಾ ಪಂಚಾಯತಿ ವ್ಯಾಪ್ತಿಯಲ್ಲಿ ಇರುವುದರಿಂದ ತಾಲ್ಲೂಕ್ ಬೋರ್ಡು ಮತ್ತು ಪಂಚಾಯತಿಗಳೂ ಕೂಡ ಒಂದು ಸಣ್ಣ ಸರ್ಕಾರವಿದ್ದಂತೆ. ಸರ್ಕಾರದಲ್ಲಿ ಯೋಜನೆಗಳು ಯಶಸ್ವಿಯಾಗಲು ಇಲಾಖೆಗಳು ಯಾವರೀತಿ ಕೆಲಸ ಮಾಡುತ್ತದೆಯೋ ಅದೇ ರೀತಿ ಎಲ್ಲ ಘಟಕಗಳೂ ಕೆಲಸ ಮಾಡಬೇಕು. ಯೋಜನೆಗಳು ಯಶಸ್ವಿಯಾಗಬೇಕಾದರೆ ಗ್ರಾಮಮಟ್ಟದಲ್ಲಿ ರೈತರ ಹಿತ ಕಾರ್ಯಗತವಾಗಿ ಅಭಿವೃದ್ಧಿಯಾಗಬೇಕಾದರೆ ಈ ಒಂದು ಗ್ರಾಮಮಟ್ಟದ ಘಟಕಗಳು ಒಳ್ಳೆಯ ವ್ಯವಸ್ಥಿತ ರೀತಿಯಲ್ಲಿ ದಕ್ಷತೆಯಿಂದ ನಿಷ್ಠೆಯಿಂದ ಕೆಲಸ ಮಾಡಬೇಕಾಗುತ್ತದೆ. ಈ ರೀತಿ ಕೆಲಸ ಮಾಡಿದಪಕ್ಷದಲ್ಲಿ ಗ್ರಾಮಮಟ್ಟದ ಅಭಿವೃದ್ಧಿ ಕಾರ್ಯಗಳು ವೇಗವಾಗಿ, ಚೆನ್ನಾಗಿ ಕಾರ್ಯಗತವಾಗುತ್ತದೆ ಎಂಬ ವಿಚಾರ ನಿರ್ವಿವಾದವಾದುದು. ಇವತ್ತು ತಮ್ಮ ವರದಿಯಲ್ಲಿ ಗ್ರಾಮಪಂಚಾಯತಿಗಳು. ತಾಲ್ಲೂಕು ಬೋರ್ಡುಗಳು ಒಳ್ಳೆಯ ರೀತಿಯಲ್ಲಿ ಸಮರ್ಪಕವಾಗಿ ಕೆಲಸ ಮಾಡಿವೆ ಎಂದು ಹೇಳಿದ್ದೀರಿ ಮತ್ತು ಅವುಗಳಿಗೆ ಖರ್ಚು ಮಾಡುವುದಕ್ಕೆ ರೆವಿನ್ಯೂ ಇಲಾಖೆಯಿಂದ ಬರತಕ್ಕ ಕಂದಾಯದಲ್ಲಿ ಹಣವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಗ್ರಾಮಪಂಚಾಯತಿಗಳು ಮತ್ತು ತಾಲ್ಲೂಕು ಬೋರ್ಡುಗಳು ಇವತ್ತಿನ ದಿವಸ ಯಾವ ಸ್ಥಿತಿಯಲ್ಲಿವೆ ಎಂಬುದನ್ನು ನಾವು ಮನಗಾಣಬೇಕು. ಮೊದಲು ತಾಲ್ಲೂಕುಬೋರ್ಡ್ ಮಟ್ಟದಲ್ಲಿ ಕಮ್ಯುನಿಟಿ ಡೆವಲಪ್‌ಮೆಂಟ್ ಮಾಡುವ ಕೆಲಸ ಅಂದರೆ ಉದಾಹರಣೆಗೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಇತ್ತು. ತಾಲ್ಲೂಕುಮಟ್ಟದಲ್ಲಿ ತಾಲ್ಲೂಕುಬೋರ್ಡ್ ಅಧ್ಯಕ್ಷರು ಸದಸ್ಯರು ಒಬ್ಬ ಬಿ.ಡಿ.ಒ. ಅದರ ಜೊತೆಗೆ ಎಲ್ಲ ಇಲಾಖಾ ಅಧಿಕಾರಿಗಳು ಇರುತ್ತಿದ್ದರು ವ್ಯವಸಾಯ ಇಲಾಖೆ, ವಿದ್ಯಾ ಇಲಾಖೆ ಸಮಾಜ ಕಲ್ಯಾಣ ಇಲಾಖೆ, ಸಣ್ಣ ಕೈಗಾರಿಕೆಗಳ ಇಲಾಖೆ, ಮುಂತಾದ ಇಲಾಖೆಗಳ ಎಕ್ಸ್‌ಟೆನ್‌ಷನ್ ಆಫೀಸರುಗಳು ಇರುತ್ತಿದ್ದರು. ಅದರ ಮುಖ್ಯ ಉದ್ದೇಶ ಏನೆಂದರೆ ಗ್ರಾಮದ ಎಲ್ಲ ಅಭಿವೃದ್ಧಿ ಕಾರ್ಯಗಳನ್ನೂ ಕಾರ್ಯಗತ ಮಾಡಿ ಗ್ರಾಮಾಭಿವೃದ್ಧಿ ಮಾಡುವುದು. ಇವತ್ತು ಹಳ್ಳಿಗಳಲ್ಲಿ ಯಾವ ರಸ್ತೆ ಕೆಲಸವಾಗಲೀ ಸರಿಯಾಗಿ ನಡೆದಿಲ್ಲ. ತಾಲ್ಲೂಕು ಬೋರ್ಡ್ ಅಥವಾ ಪಂಚಾಯತಿಯವರು ಆ ಕೆಲಸವನ್ನು ಮಾಡಬೇಕು. ಲೋಕೋಪಯೋಗಿ ಇಲಾಖೆಯವರು ಯಾವ ರಸ್ತೆ ಕಾಮಗಾರಿಗಳನ್ನೂ ಸರಿಯಾಗಿ ಮಾಡಿಸುತ್ತಿಲ್ಲ ಹಳ್ಳಿಗಳಲ್ಲಿ ಹೋದರೆ ಒಂದು ಹಳ್ಳಿಯ ರಸ್ತೆಯಲ್ಲಿ ಒಂದು ಮಂಡಿ ಉದ್ದ ಮಣ್ಣು ಇರುತ್ತದೆ. ರಸ್ತೆಯಾಗಲೀ, ಚರಂಡಿಯಾಗಲೀ ಸರಿಯಾಗಿ ಇರುವುದಿಲ್ಲ ಪಟ್ಟಣಗಳಲ್ಲಿ ಇಷ್ಟೊಂದು ಸೌಕರ್ಯಗಳನ್ನು ಮಾಡುತ್ತಿದ್ದೀರಿ, ಆದರೆ ಹಳ್ಳಿಗಳಲ್ಲಿ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವವರು ಯಾರು ? ಮಾನ್ಯ ಲೋಕೋಪಯೋಗಿ ಮಂತ್ರಿಗಳು ಉತ್ತರ ಹೇಳುವಾಗ ಪಂಚಾಯತಿಗಳಿಗೆ ಹಣದ ಕೊರತೆ ಇದೆ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಹಣ ಸಾಲುವುದಿಲ್ಲ ಎಂಬ ಅಭಿಪ್ರಾಯ ಬರುವಂತೆ ಹೇಳಿದರು ಇನ್ನೊಂದು ವಿಚಾರ ಇದರಲ್ಲಿ ಹೇಳಿದ್ದಾರೆ. ನಾಲ್ಕು ಕೋಟಿ ಚಿಲ್ಲರೆ ಹಣವನ್ನು ಕಂದಾಯದ ದುಡ್ಡಿನಲ್ಲಿ ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ನಾವು ಕೊಡುವ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ಇವತ್ತು

ಕ್ಷಾಮುಡಾಮರಗಳಿಂದ ಜನರು, ರೈತರು ಕಂದಾಯ ಸರಿಯಾಗಿ ಕೊಡದೇ ಇರುವಾಗ, ಕಂದಾಯದ ವಸೂಲಿ ಸರಿಯಾಗಿ ಆಗದೇ ಇರುವಾಗ ಯಾವ ರೀತಿಯಲ್ಲಿ ಎಷ್ಟುಮಟ್ಟಿಗೆ ಹಣವನ್ನು ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಇವರು ಕೊಡುತ್ತಾರೆ ಎಂಬುದನ್ನು ವಿಚಾರ ಮಾಡಿ ನೋಡಬೇಕಾಗುತ್ತದೆ. ಇವತ್ತು ಎಲ್ಲ ವಿಧವಾದ ದೊಡ್ಡ ದೊಡ್ಡ ರಸ್ತೆಗಳು, ಆಸ್ಪತ್ರೆಗಳು, ವಿದ್ಯಾಸೌಕರ್ಯಗಳು ಪಟ್ಟಣಗಳಲ್ಲಿವೆ. ಹಳ್ಳಿಗಳಲ್ಲಿ ಆ ಸೌಕರ್ಯಗಳನ್ನು ಒದಗಿಸಬೇಕಾದರೆ ಯಾವ ಹಣದಿಂದ ಮಾಡಬೇಕು ? ಪಂಚಾಯತಿಗಳು ಸುವ್ಯವಸ್ಥಿತವಾಗಿ ಕೆಲಸ ಮಾಡುವ ಸಲುವಾಗಿ ಸರ್ಕಾರದವರು ಏನಾದರೂ ಸರಿಯಾದ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದೆಯೇ ? ಇವತ್ತು ಪಂಚಾಯತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಕಳಿಸಿಲ್ಲ. ಚುನಾಯಿತ ಪ್ರತಿನಿಧಿಗಳಿದ್ದರೆ ಗ್ರಾಮಮಟ್ಟದಲ್ಲಿ ಆಗಲೀ ತಾಲ್ಲೂಕು ಮಟ್ಟದಲ್ಲಾಗಲೀ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಒಂದು ವೇಳೆ ಚುನಾವಣೆಯಲ್ಲಿ ಆರಿಸಿಬಂದವರು ದುರ್ವ್ಯವಹಾರ ಮತ್ತು ದುರಾಡಳಿತ ನಡೆಸಿದರೆ ಅದೇ ಒಂದು ಕಾರಣದಿಂದ ಚುನಾವಣೆಯನ್ನೇ ರದ್ದು ಮಾಡಿ ಸರ್ವಾಧಿಕಾರದಿಂದ ಅಧಿಕಾರಿಗಳ ಮುಖಾಂತರ ಆಡಳಿತ ನಡೆಸಬೇಕು ಎಂಬ ದುರುದ್ದೇಶದಿಂದ ಕೆಲಸ ಮಾಡಿದರೆ ಎಷ್ಟರಮಟ್ಟಿಗೆ ಗ್ರಾಮಮಟ್ಟದಲ್ಲಿ ಕೆಲಸ ಕಾರ್ಯಗಳು ನಡೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಗ್ರಾಮಮಟ್ಟದಲ್ಲಿ ಮುಖಂಡತ್ವ ಬೆಳೆಯಲು ಅವಕಾಶ ಮಾಡಿಕೊಟ್ಟು ಪ್ರಜಾಪ್ರಭುತ್ವದಲ್ಲಿ ತರಬೇತಿ ಕೊಡಬೇಕು. ಆ ರೀತಿ ಮಾಡಿದರೆ ಪಂಚಾಯತಿಗಳು ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

6-00 P.M.

ನನಗೂ ಸಹ 6 ವರ್ಷಗಳ ಕಾಲ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ ಕೆಲಸ ಮಾಡಿದ ಅನುಭವ ಇದೆ. ಉದಾಹರಣೆಗೆ, ಹಿಂದೆ ಒಂದು ಪ್ರಾಥಮಿಕ ಶಾಲಾ ಕಟ್ಟಡ ಆಗಬೇಕೆಂದರೆ ಅದಕ್ಕೆ ಜನರಿಂದ ಹಣವನ್ನು ವಸೂಲ್ಮಾಡಿ, ಬೆಂಗಳೂರಿಗೆ ಬಂದು ಮಂತ್ರಿಗಳನ್ನು ಕಂಡು ಮಂಜೂರ್ಮಾಡಿಸಿಕೊಂಡು ಕೆಲಸ ಮಾಡಿಸಲಾಗುತ್ತಿತ್ತು. ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದಾಗ ಸುಮಾರು 250 ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಿಸಿದ್ದು ಉಂಟು. ಆದರೆ ಈಗ ಆ ರೀತಿ ಆಗುತ್ತಿಲ್ಲ. ಇದೇ ರೀತಿ ಎಲ್ಲ ವಿಚಾರಗಳನ್ನು ತೆಗೆದುಕೊಳ್ಳುವುದಾದರೆ, ವ್ಯವಸಾಯದ ಇಲಾಖೆಯಲ್ಲಿ ಏನಾಗುತ್ತಿದೆ ಎಂದರೆ ದೊಡ್ಡ ದೊಡ್ಡ ಅಧಿಕಾರಿಗಳು, ಡೈರೆಕ್ಟರುಗಳು ಜಾಸ್ತಿಯಾಗುತ್ತಿದ್ದಾರೆಯೇ ಹೊರತು, ಯಾರು ಸಹ ರೈತರಿಗೆ ಸರಿಯಾದ ತಾಂತ್ರಿಕ ಜ್ಞಾನವನ್ನು ನೀಡುತ್ತಿಲ್ಲ. ಈ ಇಲಾಖೆಯವರು ವ್ಯವಸಾಯಕ್ಕೆ ಸಂಬಂಧಪಟ್ಟ ಹಾಗೆ ಎಲ್ಲೋ ಒಂದು ಕಡೆ ಪ್ರದರ್ಶನಗಳನ್ನು ಏರ್ಪಾಡು ಮಾಡಿದರೆ ಅದನ್ನು ಯಾವುದಾದರೂ ಒಂದು ಸೊಸೈಟಿಯ ಡೈರೆಕ್ಟರುಗಳು ಬಂದು ನೋಡಿ ಹೋಗುತ್ತಾರೆಯೇ ವಿನಹ ನಿಜವಾದ ರೈತನಿಗೆ ಅದನ್ನು ನೋಡುವ ಅವಕಾಶ ದೊರೆಯುವುದಿಲ್ಲ. ಆದರೆ ಹಿಂದೆ ತಾಲ್ಲೂಕು ಬೋರ್ಡಿನವರು ಇದೇ ಕಾರ್ಯವನ್ನು ಸ್ಥಳದಲ್ಲೇ ಏರ್ಪಡಿಸಿ ರೈತರಿಗೆ ನೋಡಲು ತುಂಬ ಅನುಕೂಲ ಮಾಡಿಕೊಡುತ್ತಿದ್ದರು. ಈ ಪ್ರದರ್ಶನವನ್ನು ಹಿಂದೆ ಎಕ್ಸ್‌ಟೆನ್‌ಷನ್ ಆಫೀಸರಗಳು ಸ್ಥಳದಲ್ಲೇ ರೈತರಿಗೆ ತೋರಿಸುತ್ತಿದ್ದರು. ಹಿಂದೆ ತಾಲ್ಲೂಕು ಬೋರ್ಡುಗಳು ವ್ಯವಸಾಯಗಾರರಿಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದವು ಎಂದರೆ ಅತಿಶಯೋಕ್ತಿಯಾಗುವುದಿಲ್ಲ. ಉದಾಹರಣೆಗೆ ಹಿಂದೆ ಎಜುಕೇಷನ್ ಎಕ್ಸ್‌ಟೆನ್‌ಷನ್ ಆಫೀಸರ್ ಕೇರ್ ಸಂಸ್ಥೆಯ ಆಹಾರವನ್ನು ಸರಿಯಾಗಿ ವಿತರಣೆ ಮಾಡುವುದಾಗಲಿ ನಿಷ್ಠೆಯಿಂದ, ಪ್ರಾಮಾಣಿಕತೆಯಿಂದ ದಕ್ಷತೆಯಿಂದ, ಜವಾಬ್ದಾರಿಯುತವಾಗಿ ಕೆಲಸ ಮಾಡುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಸರಿಯಾದ ರೀತಿಯಲ್ಲಿ ವಿದ್ಯೆಯನ್ನು ಕೊಡತಕ್ಕ ಏರ್ಪಾಡನ್ನು ಮಾಡುತ್ತಿದ್ದರು. ಆದರೆ ಇವತ್ತು ಏನಾಗಿದೆ, ಎಂದರೆ, ಪ್ರಾಥಮಿಕ ಶಾಲೆಗಳು ಅಸ್ತವ್ಯಸ್ತವಾಗಿವೆ ಮತ್ತು ಅವುಗಳಿಗೆ ಸರ್ಕಾರದ ಕೋಟ್ಯಾಂತರ ರೂಪಾಯಿ ಹಣ ಖರ್ಚಾಗುತ್ತಿದೆ. ಉಪಾಧ್ಯಾಯರು ಸರಿಯಾಗಿ ಶಾಲಾ ಬಾಗಿಲುಗಳನ್ನೇ ತೆರೆಯುವುದಿಲ್ಲ, ವಾರಕ್ಕೆ ಎಲ್ಲೋ ಒಂದೆರಡು ದಿವಸ ಬಾಗಿಲನ್ನು ತೆರೆಯುತ್ತಾರೆ. ಮತ್ತು ಸರಿಯಾಗಿ ಪಾಠ ಹೇಳುವುದಿಲ್ಲ. ಹೀಗೆ ಗ್ರಾಮಾಂತರ ಪ್ರದೇಶಗಳ ಉಪಾಧ್ಯಾಯರುಗಳು ಸರಿಯಾಗಿ ಕೆಲಸ ಮಾಡದೆ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗುತ್ತಿದೆ. ಹೀಗಾಗಿ ನನ್ನ

ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಸೇರಿಸಿದ್ದೇನೆ, ಸಾವಿರಾರು ರೂಪಾಯಿಗಳನು ಖರ್ಚು ಮಾಡಿ ರೈತರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕೆಂದಿರುವಾಗ ಅವರಿಗೆ ನ್ಯಾಯವಾದ ರೀತಿಯಲ್ಲಿ ಫೌಂಡೇಷನ್ ಇರದಿದ್ದರೆ ಆ ಮಕ್ಕಳು ಯಾವ ರೀತಿ ವಿದ್ಯಾಭ್ಯಾಸ ಮಾಡುತ್ತಾರೆ?

ಅಧ್ಯಕ್ಷರು.—ವಿದ್ಯಾಭ್ಯಾಸದ ಇಲಾಖೆಯ ಬೇಡಿಕೆಯನ್ನು ಮಂಡಿಸಿದಾಗ ಅದನ್ನು ಹೇಳ ಬಹುದು. ಈಗ ಇವತ್ತಿನ ಬೇಡಿಕೆಗೆ ಸಂಬಂಧಪಟ್ಟ ಹಾಗೆ ಮಾತನಾಡಿ.

ಶ್ರೀ ಹೆಚ್ .ಬಿ. ಕೆಂಚೇಗೌಡ.—ಈವಾಗ ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯಿತಿಗಳು ಎಷ್ಟು ಮುಖ್ಯ ಎಂದು ಹೇಳುವುದಕ್ಕೆ ಹೊರಟ್ಟಿದ್ದೇನೆ. ಇವತ್ತಿನ ದಿವಸ ವ್ಯವಸಾಯದ ಇಲಾಖೆ ಯಾಗಲಿ, ವಿದ್ಯಾಭ್ಯಾಸದ ಇಲಾಖೆಯಾಗಲಿ ಆ ಇಲಾಖೆಗಳು ಬೇಕಾಗಿಲ್ಲ ಎನ್ನುವ ಹಾಗೆ ಆಗಿವೆ. ಇವತ್ತು ಏನು ಪೌಷ್ಟಿಕ ಆಹಾರವನ್ನು ತಯಾರಿಸಬೇಕೆಂದು ಮಾಡಿದ್ದಾರೆ, ಅದು ಸರಿಯಾಗಿ ತಯಾರಾಗತ್ತಿಲ್ಲ. ತಾಲ್ಲೂಕು ಬೋರ್ಡು ವತಿಯಲ್ಲಿ ಪೌಲ್ಟ್ರಿ ಫಾರಂಗಳನ್ನು ನಡೆಸುತ್ತಿದ್ದಾರೆ. ಪಂಚಾಯಿತಿಗಳಲ್ಲಿ ಕೋಳಿಗಳನ್ನು ತಿಂದು ಹಾಕಿದ್ದಾರೆ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಸರಿಪಡಿಸದೆ ಪಂಚಾಯಿತಿಗಳ ಎಲೆಕ್ಷನ್ ನಡೆಸದೆ ತಾಲ್ಲೂಕು ಬೋರ್ಡುಗಳನ್ನು ರದ್ದು ಮಾಡಿರು ವುದು ದುರ್ದೈವ. ಇವತ್ತಿನ ದಿವಸ, ತಾಲ್ಲೂಕು ಬೋರ್ಡುಗಳು ಯಾವ ರೀತಿ ಕೆಲಸ ಮಾಡು ತ್ತಿವೆ, ಮಂತ್ರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ನೋಡಬೇಕಾಗಿದೆ. ಸಾಮಾನ್ಯವಾಗಿ ಇವತ್ತಿನ ದಿವಸ ಬಿ ಡಿ ಓ.ಗೆ ಜಮೀನು ಅಕ್ವೈರ್ ಮಾಡಿಸುವುದು, ನಾಲ್ಕು ಮನೆ ಗಳನ್ನು ಕಟ್ಟಿಸುವುದು ಬಿಟ್ಟರೆ ಬೇರೆ ಏನು ಕೆಲಸವಿಲ್ಲ. ಆದರೆ ಮೊದಲು ಬಹಳ ಹೆಚ್ಚಿನ ವ್ಯಾಪ್ತಿ ಯಲ್ಲಿ ಕೆಲಸ ಮಾಡುತ್ತಿದ್ದರು. ಇವತ್ತಿನ ದಿವಸ ತಾಲ್ಲೂಕು ಬೋರ್ಡುಗಳು ಒಂದು ಕೇಂದ್ರೀಕೃತ ಅಧಿಕಾರ ವಿಕೇಂದ್ರೀಕೃತಗೊಂಡಿರುವುದರಿಂದ ಗ್ರಾಮದ ಮಟ್ಟದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳು ವಿಧೇಯಕವಾಗಿ ನಡೆಯತಕ್ಕ ಕಾರ್ಯಸಾಧನೆಯಾಗುತ್ತಿಲ್ಲ. ಒಟ್ಟಿನಲ್ಲಿ ನೋಡಿದರ ಗ್ರಾಮಾಂತರ ಪ್ರದೇಶಗಳಲ್ಲ ಆರ್ಥಿಕವಾಗಿ ಅಭಿವೃದ್ಧಿಯಾಗಬಾರದೆಂಬುದು ಸರ್ಕಾರದ ಉದ್ದೇಶವಾಗಿರುವಂತೆ ಕಾಣುತ್ತದೆ ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯವೇನೆಂದರೆ, ಗ್ರಾಮಾಂತರ ಪ್ರದೇಶ ಗಳಲ್ಲಿ ವಾಸಿಸತಕ್ಕ ಜನರು ಆರ್ಥಿಕವಾಗಿ ದುರ್ಬಲರಾಗಿರಬೇಕು, ಅವರಿಗೆ ಆರ್ಥಿಕ ಶಕ್ತಿ ಇರ ಕೂಡದು, ಅವರಿಗೆ ಯಾವ ರಾಜಕೀಯ ಜ್ಞಾನವೂ ಇರಕೂಡದು, ಅವರಿಗೆ ಹಗಲು ರಾತ್ರಿ ಹೊಟ್ಟೆ ಬಟ್ಟೆಗೋಸ್ಕರ ದುಡಿಯುವ ಒಂದೇ ಯೋಚನೆ ಇರಬೇಕು, ರಾಜಕೀಯದಲ್ಲಿ ಯೋಚನೆ ಮಾಡತಕ್ಕ ಶಕ್ತಿ ಇರಕೂಡದು ಎಂಬುದಾಗಿದೆ ಎಂದರೆ ತಪ್ಪಾಗಲಾರದು. ಈ ರೀತಿಯಾಗಿ ಗ್ರಾಮದ ಜನತೆ ಅಭಿವೃದ್ಧಿಯಾಗಬಾರದೆಂಬ ದುರುದ್ದೇಶದಿಂದ ತಾಲ್ಲೂಕು ಬೋರ್ಡುಗಳ ಮತ್ತು ಪಂಚಾಯಿತಿಗಳ ಚುನಾವಣೆಗಳನ್ನು ನಡೆಸದೆ ಅವುಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡದ ಹಾಗೆ ಮಾಡಿ ಸರ್ವಾಧಿಕಾರದಿಂದ ಆಡಳಿತ ನಡೆಸುವ ಕ್ರಮ ತಪ್ಪಬೇಕೆಂದು ಹೇಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SMT. DAMAYANTHI BOREGOWDA (Srirangapatna).—Madam Sepak-r, I support the demands before us to-day and congratulate specially the Department of Women and children's Social Welfare for their impressive work in these 22 months. Not that I have forgotten the parent Social Welfare Department or the Rural Development Department but, for want of time, I will confine myself to this newly created department. Though it was started recently, it has multifarious programmes to help the down-trodden and unfortunate women and children to lead a better life. We wish more grants will be provided for the welfare of nearly 70 per cent of our population comprising of women and children. One by one the districts are getting Bal Bhavans and grants are being provided to the voulutary organisations for running hostles for rescued women and girls, working women, Women's Co-operative Societies, Orphanages and Foster Homes. The aged and

infirm persons who are discarded by their own families find some shelt r in such institutions. Priority should be given to the job-oriented courses to the needy women. The problem of rendering service to the physically handicapped and mentally handicapped persons is a gigantic task in this vast country of ours and more funds are needed for these projects. In addition to T. Narsipura, Udupi and Dharwar, we hope to get more Integrated Family Welfare Services Projects which uplift the rural needy women and children by their network of institutions.

The Special Nutrition Programme caters to the needs of more than 1,50,000 children of the weaker sections in the Urban Slums. The 24 Remand Homes and 12 Certified Schools have improved to a great extent and they have been giving good Education and training in various Crafts. Some four years back, we, the Lady Legislators, have visited almost a l the Institutions run by the Department in Bangalore and we felt that a lot more could be done. That is why, we were very much interested in getting a Separate Department for Women and Child Welfare, and I thank the Government for their ready approval.

Then I would like to say that the immoral traffic in women and girls is a cancerous menace in our Society. It is very necessary to give more powers to our Liasion Officers to enable them to help and guide the women prisoners. Smt. Snehalatha Reddy's writings on her death bed reveals the humiliation done to women prisoners.

Then I would like to say that our work is great and ever-growing For the efficient working, it is essential to create various posts at district Levels. Unless this is done, it is difficult to co-ordinate the work done by various Departments for the welfare of Women and Children.

Lastly, I thank the Government for increasing the grants to be given to various institutions run for the benfit of Harijans and other Backward communities, under the Social Welfare Department. I feel that it would be better if the hostles are supervised by the Local Committees and proper care is taken for Women and Children. The conditions of some of the hostels are really horrible. This has been pointed by the Legislature Committee and I hope the concerned Minister would take necessary action.

With these words, I thank the Chair for giving me this opportunity to speak a few words on the Demands relating to Social Welfare and Women and Children Welfare Departments and conclude my speech.

† ಶ್ರೀ ಎಸ್. ಹಮೀದ್ ಷಾ (ಶಿವಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಮಂಡಿಸಿರುವ ಡಿಮ್ಯಾಂಡುಗಳ ಬಗ್ಗೆ ಮಾತನಾಡುವುದಕ್ಕೆ ಬಹಳ ಹೊತ್ತು ಬೇಕಾಗುತ್ತದೆ. ನನಗೆ ಕೊಟ್ಟಿರತಕ್ಕ 5 ನಿಮಿಷದಲ್ಲಿ ನನಗೆ ಏನು ತೋಚುತ್ತದೆ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಏನು ಕೆಲಸ ಮಾಡುತ್ತಿದ್ದಾರೆಂದು ನೋಡುವುದಕ್ಕೆ ಹೋದರೆ ಅಲ್ಲಿ ಏನೂ ಕಾಣುತ್ತಾ ಇಲ್ಲ. ಏನೇನು ಆ ಬಡಜನತೆಗೆ ಸಿಗಬೇಕಾಗಿತ್ತೋ ಅದಕ್ಕೆ ಎಲ್ಲಾ ವಿರುದ್ಧವಾಗಿ ನಡೆಯುತ್ತಿದೆ. ಉದಾಹರಣೆ ಹೇಳುವುದಾದರೆ, ಮುನಿರೆಡ್ಡಿ ಪಾಳ್ಯದಲ್ಲಿ ಕಾರ್ಪೊರೇಷನ್ 'ಏರಿಯಾದಲ್ಲಿ' ಮಳೆ ಬಂದು ಹರಿಜನರಿಗೆ ಸಂಬಂಧಪಟ್ಟ ಮನೆಗಳು ಬಿದ್ದುಹೋಗಿ ಇವತ್ತು ಕೂಡ ಅಲ್ಲಿನ ಜನತೆ ಕೆಸರಿನಲ್ಲಿಯೇ ಜೀವನ ಮಾಡಿಕೊಂಡು ಹೋಗುತ್ತಿದ್ದಾರೆ. ಆ ಸಂಬಂಧದಲ್ಲಿ ಸೋಷಿಯಲ್ ಮಂತ್ರಿಗಳಿಗೆ ಪತ್ರ ಬರೆದೆ, ಪ್ರೈವೇಟ್ ಆದ ಜವಾಬನ್ನು ಕೊಟ್ಟರು. ಆ ಬಡಜನರ ಕೆಲಸ ಮಾತ್ರ ಇನ್ನೂ ಆಗಿಲ್ಲ. ಇವತ್ತಿನ ದಿವಸ ಮಾತು ಎತ್ತಿದ್ದರೆ ಹರಿಜನರ ಬಗ್ಗೆ ಹೇಳಲಿಕ್ಕೆ ಹೊರಟಿದ್ದಾರೆ. ಎಲ್ಲರೂ ಕೂಡ ಹರಿಜನರು ಉದ್ಧಾರವಾಗಬೇಕು. ಹರಿಜನರು ಮುಂದೆ ಬರಬೇಕು ಎನ್ನುವ ಇಚ್ಛೆ ಇಟ್ಟುಕೊಂಡು ಮಾತನಾಡುತ್ತಾರೆ. ಆದರೆ ಆ ಜಾಗದಲ್ಲಿ ಹೋಗಿ ನೋಡಿದರೆ ಅವರ ಸ್ಥಿತಿ ಗೊತ್ತಾಗುತ್ತದೆ. ಅಧ್ಯಕ್ಷರೇ, ಸ್ಪಷ್ಟವಾಗಿ ಒಂದು ಮಾತು ಹೇಳುತ್ತೇನೆ. ಹರಿಜನ ಮುಖಂಡರುಗಳಿಗೆ ಕೋಪ ಬರಬಹುದು. ಇವರು ಆ ಬಡಜನತೆಯನ್ನು ಹೋಗಿ ನೋಡುವುದಿಲ್ಲ. ಅವರ ಮನೆಗಳಿಗೆ ಬಂದರೂ ಕೂಡ ಮಾತನಾಡಿಸುವುದಿಲ್ಲ. ನಾನು ಸುಮಾರು 30 ವರ್ಷಗಳಿಂದ ಹರಿಜನರ ಮಧ್ಯದಲ್ಲಿದ್ದು ಕೆಲಸ ಮಾಡುತ್ತಿದ್ದೇನೆ. ಮಾನ್ಯ ರಂಗನಾಥ್‌ರವರಿಗೂ ಕೂಡ ಈ ವಿಚಾರ ಗೊತ್ತಿದೆ, ಇವರಿಗೋಸ್ಕರವೇ ಎಂಪ್ಲಾಯಿಮೆಂಟ್ ಸೆಲ್ ಎಂದು ಮಾಡಿದ್ದಾರೆ, 5-6 ವರ್ಷಗಳಾದರೂ ಕೂಡ ಅಲ್ಲಿ ಅವರಿಗೆ ಕೆಲಸ ಸಿಕ್ಕುವುದಿಲ್ಲ. ಕೆಲವರಿಗೆ ಅಸೆಂಬ್ಲಿ ಸೀಟು ಸಿಕ್ಕಿರಬಹುದು. ಆದರೆ ಇವತ್ತು ಏನಾಗಿದೆ ಇವತ್ತು ಅವರ ಪರಿಸ್ಥಿತಿಯನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತದೆ. ಅವರು ವಾಸ ಮಾಡುವ ಗುಡಿಸಲುಗಳ ಹತ್ತಿರ ಅವರ ಹೆಂಗಸರು ಅಕಡೆಗೆ ಹೋಗುವುದಕ್ಕೆ ಜಾಗ ಇಲ್ಲ, ಈ ಜನತೆಗಾಗಿ ಒಂದು ಬೋರ್ಡು ಕೂಡ ಮಾಡಿದ್ದಾರೆ. ಅವರೂ ಕೂಡ ಬರೀ ಜವಾಬು ಕೊಡುತ್ತಾರೆಯೇ ವಿನಹ ಕಾರ್ಯತಃ ಕೆಲಸ ಮಾಡುತ್ತಿಲ್ಲ. ಹೆಣ್ಣುಮಕ್ಕಳು ಮಾನದಿಂದ ಕೂತುಕೊಂಡು ಬರುವುದಕ್ಕೆ ಜಾಗ ಇಲ್ಲ. ಸ್ವಾಮಿ, ಇನ್ನೊಂದು ಮಾತು ಹೇಳುತ್ತೇನೆ, ಹರಿಜನರ ಕೇರಿಯಲ್ಲಿರತಕ್ಕ ಸ್ಕೂಲು ಒಂದು ಇದೆ, ತಾವು ಒಮ್ಮೆ ನನ್ನೊಡನೆ ಬಂದರೆ ತೋರಿಸುತ್ತೇನೆ. ಅದು ಸ್ಕೂಲೋ ನರಕವೋ ಗೊತ್ತಿಲ್ಲ. ಸ್ಕೂಲು ಹೆಂಚುಗಳೆಲ್ಲಾ ಬಿದ್ದು ಹೋಗಿವೆ. ಹರಿಜನರಲ್ಲಿ ಮೂರು ಪಂಗಡಗಳು ಮಾಡಿದ್ದಾರೆ. ತಮಿಳು ಹರಿಜನ, ತೆಲುಗು ಹರಿಜನ, ಮತ್ತು ಕನ್ನಡ ಹರಿಜನ ಎಂದು. ಇವರಲ್ಲಿ ಯಾರಿಗೂ ಸೌಲಭ್ಯ ಸಿಗುತ್ತಾ ಇಲ್ಲ. ತಮಿಳು ಹರಿಜನರು ಸಹಾಯಕ್ಕೆ ಹೋದರೆ ಮದ್ರಾಸಿಗೆ ಹೋಗು ಎಂದು ಹೇಳುತ್ತಾರೆ, ತೆಲುಗು ಹರಿಜನ ಹೋದರೆ ಆಂಧ್ರಕ್ಕೆ ಹೋಗು ಎಂದು ಹೇಳುತ್ತಾರೆ. ಕನ್ನಡ ಹರಿಜನ ಹೋಗಿ ತೆಲಗು ಅಥವಾ ತಮಿಳು ಆಫೀಸರುಗಳು ಇದ್ದರೆ, ಅವನಿಗೂ ವಿರೋಧ ಮಾಡುತ್ತಾರೆ. ಒಮ್ಮೆ ಹರಿಜನ ಮಂತ್ರಿಗಳಿಗೆ ನನ್ನ ಕೂಡ ಒಂದು ಸಾರಿ ಬನ್ನಿ ತಾವು ಕಣ್ಣಿನಿಂದ ನೋಡುವಿರಿ ಅವರ ಪರಿಸ್ಥಿತಿಯನ್ನು ತೋರಿಸುತ್ತೇನೆಂದು ಹೇಳಿದೆ. ನಮ್ಮ ಮಂತ್ರಿಗಳು ಬಂದರೂ ಎನ್ನುವ ಹುಮ್ಮಸ್ಸು ಬರುತ್ತದೆ, ಧೈರ್ಯ ಬರುತ್ತದೆ ನಮ್ಮ ಬೀದಿಯಲ್ಲಿ ಓಡಾಡಿ ನಮ್ಮ ಮಕ್ಕಳನ್ನು ನೋಡಿಕೊಂಡು ಹೋದರೂ ಎಂದು ಸಂತೋಷಪಡುತ್ತಾರೆಂದು ಹೇಳಿದೆ ಅವರು ಬರಲಿಲ್ಲ. ಈ ಡಿಪಾರ್ಟ್‌ಮೆಂಟ್ ಆರ್ಗನೈಜ್ ಆದ ಮೇಲೆ ಎಷ್ಟು ಜನ ಮುಂದಕ್ಕೆ ತಂದಿದ್ದಾರೆಂದು ಲೆಕ್ಕ ಕೊಡಲಿ. ಕೆಲವರು ಬಂದಿರಬಹುದು. ಕೆಲವರು ಪಾಪ್‌ನಲ್ಲಿರಬಹುದು. ಬೇರೆಯವರನ್ನು ತುಳಿದು ಮುಂದೆ ಬರುವುದು ಬೇಡ.

ಬ್ಯಾಕ್‌ವರ್ಡ್ ಕ್ಲಾಸ್ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಬ್ಯಾಕ್‌ವರ್ಡ್ ಕ್ಲಾಸ್ ವಿಚಾರದಲ್ಲಿ ವಿವರಣೆ ಕೊಡಬೇಕು. ಇವತ್ತಿನ ಪರಿಸ್ಥಿತಿಯಲ್ಲಿ ಬ್ಯಾಕ್‌ವರ್ಡ್ ಯಾರು ಫಾರ್‌ವರ್ಡ್ ಯಾರು ಎಂದು ಗೊತ್ತಾಗುವುದಿಲ್ಲ. ಇನ್ನೊಂದು ವಿಚಾರ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವುದು ಹಿಂದೆ. ಒಬ್ಬ ಕಾರ್ಪೊರೇಟರಾಗಲೀ, ಅಸೆಂಬ್ಲಿ ಮೆಂಬರ್ ಆಗಲೀ ಪಾರ್ಲಿಮೆಂಟ್ ಮೆಂಬರ್ ಆಗಲೀ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುತ್ತಿದ್ದರು. ಈ ವ್ಯವಸ್ಥೆಯನ್ನು ಡಿಪಾರ್ಟ್‌ಮೆಂಟ್‌ನವರು ನಿಲ್ಲಿಸಿದರು. ಈಗ ಒಬ್ಬ ಹರಿಜನ ಹುಡುಗ ಮತ್ತು ವಿದ್ಯಾರ್ಥಿನಿ ಒಂದು ಕ್ಯಾಸ್ಟ್ ಸರ್ಟಿಫಿಕೇಟ್ ಗೋಸ್ಕರ 20 ರೂಪಾಯಿಗಿಂತ ಜಾಸ್ತಿ ಖರ್ಚು ಮಾಡಬೇಕಾಗಿದೆ. ಇಷ್ಟು ಖರ್ಚು ಮಾಡಿದರೂ

ಕೂಡ 4 ದಿವಸಕ್ಕಿಂತ ಹೆಚ್ಚಿಗೆ ತಹಶೀಲ್ದಾರ್ ಆಫೀಸಿಗೆ ಅಲೆಯಬೇಕು. ಆದರೂ ಸರ್ಟಿಫಿಕೇಟ್ ಸಿಗದೆ ಮತ್ತೆ ವಾಪಸ್ಸು ನಮ್ಮ ಹತ್ತಿರ ಬರುತ್ತಾರೆ. ನಾವು ಕರೆದುಕೊಂಡು ಹೋಗಿ ಇವರು ಹರಿಜನರು ಎಂದು ಹೇಳಿದ ಮೇಲೆ ಸರ್ಟಿಫಿಕೇಟ್ ಕೊಡುತ್ತಾರೆ. ಇದಕ್ಕೆ ಅಫಿಡವಿಟ್ ಬೇರೆ ಮಾಡಿಸಬೇಕು. ಬಾಯಲ್ಲಿ ಹರಿಜನರ ಉದ್ಧಾರದ ಮಾತು, ಬ್ಯೂರೋಕ್ರಸಿ ಮಧ್ಯೆ ಇದೊಂದು ಆಯುಧ ಇಟ್ಟುಕೊಂಡಿದ್ದಾರೆ. ಹರಿಜನ ಮಕ್ಕಳಿಗೆ ಸುಲಭವಾಗಿ ಸರ್ಟಿಫಿಕೇಟ್ ಸಿಗುವ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರಿಗೆ ಅಪೀಲು ಮಾಡಿಕೊಳ್ಳುತ್ತೇನೆ.

ಮಕ್ಕಳ ಮತ್ತು ಮಹಿಳೆಯರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಮುಸಲ್ಮಾನರಲ್ಲಿ ಈ ಬಗ್ಗೆ ಎಷ್ಟು ಕೆಲಸ ನಡೆದಿದೆ. ಎಷ್ಟು ಅಸೋಷಿಯೇಷನ್ ಮಾಡಿದ್ದೀರಿ ನ್ಯೂಟ್ರೇಷನ್ ಫುಡ್ ಯಾವ ರೀತಿ ಕೊಡುತ್ತಿದ್ದೀರಿ. ಏನೇನು ಕೆಲಸವಾಗಿದೆ ಎಂಬುದನ್ನು ಹೇಳಬೇಕು. ಏಕೆಂದರೆ, ಅವರನ್ನು ಕೇಳುವವರೇ ಇಲ್ಲ. ಆ ಕಡೆಯುವರೂ ಕೇಳುವುದಿಲ್ಲ, ಈ ಕಡೆಯುವರೂ ಕೇಳುವುದಿಲ್ಲ. ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

6-30 P. M.

† SRI BAPU RAO PATIL (Aurad).—[Spoke in Hindi]

MADAM SPEAKER.—The discussion on the demands is concluded. The Ministers will reply tomorrow. The House will now adjourn to meet at 9 A. M. tomorrow.

The House adjourned at Thirty-five Minutes past Six of the clock to meet again at Nine of the clock on Saturday the 26th June 1977.